# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-39 ಶೋಭಕೃತ್ ನಾಮ ಸಂವತ್ಸರ, ಆಶ್ವಯುಜ - ಕಾರ್ತಿಕ, ನವೆಂಬರ್ - 2023, ಸಂಚಿಕೆ-9, ಪುಟಗಳು-32 ಬೆಲೆ ರೂ.15/-


## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

## ಹುಬ್ಬಳ್ಳಿಯಲ್ಲಿ 42ನೇ ವಾರ್ಷಿಕ ಐತಿಹಾಸಿಕ ಸರ್ವ ಸದಸ್ಯರ ಸಭೆ







ಮಹಿಳಾ ಸಮಾವೇಶಕ್ಕೆ ಶ್ರೀ ರಾಮಚಂದ್ರಾಪುರ ಶ್ರೀಗಳ ಆಶೀರ್ವಾದ



ಮೈಸೂರು ಮಹಾಸಭಾ ಪದಾಧಿಕಾರಿಗಳ ಮಂತ್ರಾಲಯ ಶ್ರೀಗಳ ಭೇಟಿ ಸಂದರ್ಭದಲ್ಲಿ ರಾಮತಾರಕ ಜಪಯಜ್ಞಕ್ಕೆ ಶ್ರೀಗಳಿಂದ ಆಶೀರ್ವಾದ



ಮಹಿಳಾ ಸಮಾವೇಶದ ಮುಖ್ಯ ಅತಿಥಿ ಕೇಂದ್ರ ಹಣಕಾಸು ಸಚಿವೆ ಶ್ರೀ ನಿರ್ಮಲಾ ಸೀತರಾಮರವರಿಗೆ ಅಧ್ಯಕ್ಷರಿಂದ ಆಹ್ವಾನ




ತುಳುಕೂಟದ 50ನೇ ಸಂಭ್ರಮ ಸಮಾರಂಭದಲ್ಲಿ ಅಧ್ಯಕ್ಷರಿಗೆ ಸನ್ಮಾನ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

# ಹುಬ್ಬಳ್ಳಿಯಲ್ಲಿ 42ನೇ ವಾರ್ಷಿಕ ಐತಿಹಾಸಿಕ ಸರ್ವ ಸದಸ್ಯರ ಸಭೆ



ಹುಬ್ಬಳ್ಳಿ – ಧಾರವಾಡ ವಿಪ್ರ ವೃಂದದಿಂದ
ಮಹಾಸಭಾ ಅಧ್ಯಕ್ಷರಿಗೆ ಸನ್ಮಾನ



ರಾಜ್ಯ ಸಹಕಾರ ರತ್ನ ಪ್ರಶಸ್ತಿ ಪಡೆದ ಸಾಗರದ
ಸಹಕಾರಿ ಧುರೀಣ ಶ್ರೀ ಹರನಾಥ ರಾವ್‌ಗೆ ಸನ್ಮಾನ





ಸರ್ವ ಸದಸ್ಯರ ಸಭೆಯ ಸಂದರ್ಭದಲ್ಲಿ
ಮಹಾಸಭಾ ಸದಸ್ಯರಿಗೆ ಉಚಿತ ಹೃದಯ ತಪಾಸಣೆ









**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಟಿ.ಎಲ್.ಎಸ್. ಕುಮಾರ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಜಿಹ್ವೇ ! ಪ್ರಮಾಣಂ ಜಾನೀಹೀ ಭೋಜನೇ ಭಾಷಣೇಪಿ ಚ ।**
**ಅತಿಭುಕ್ತಿ ಅತೀವೋಕ್ತಿಃ ಸದ್ಯಃ ಪ್ರಾಣಾಪಹಾರಿಣೀ ॥**

**– ಸುಭಾಷಿತರತ್ನ ಭಾಂಡಾಗಾರ**

**"ಎಲೈ ನಾಲಿಗೆಯೇ ! ಊಟ ಮಾಡುವಾಗ ಮತ್ತು ಮಾತನಾಡುವಾಗ ಪ್ರಮಾಣವೆಷ್ಟೆಂದು ತಿಳಿದುಕೋ. ಅತಿಯಾದ ಊಟ ಮತ್ತು ಅತಿಯಾದ ಮಾತು ತಕ್ಷಣದಲ್ಲಿ ಪ್ರಾಣಗಳನ್ನು ಅಪಹರಿಸುತ್ತದೆ."**

ಕವಿಯು ಈ ಶ್ಲೋಕದಲ್ಲಿ ಊಟ ಮತ್ತು ಮಾತಿನಲ್ಲಿ ಕಡಿವಾಣ ಹಾಕಿಕೊಳ್ಳಲು ಮತ್ತು ಎಚ್ಚರಿಕೆಯಿಂದಿರಲು ಸೂಚಿಸಿದ್ದಾನೆ. ಕೆಲವರು ಅತಿಯಾದ ಬಾಯಿ ಚಪಲದಿಂದಾಗಿ, ಎಲ್ಲೆ ಮೀರಿ ಆಹಾರ ತಿಂದು ಜೀರ್ಣವಾಗದೇ ಸಂಕಟಪಟ್ಟು, ವೈದ್ಯರ ಸಲಹೆಯಂತೆ ದುಬಾರಿ ಬೆಲೆ ತೆತ್ತು, ಔಷಧಿಗಳನ್ನು ಸೇವಿಸುತ್ತಾರೆ.

ಇದರಿಂದ ಆಹಾರ, ಹಣ ಹಾಗೂ ಆರೋಗ್ಯ ಹಾಳು. ಆಯುರ್ವೇದ ಶಾಸ್ತ್ರದಂತೆ ಪ್ರತಿಯೊಂದು ಉಪಾಹಾರ ಮತ್ತು ಭೋಜನಗಳ ನಡುವೆ ಕನಿಷ್ಠ ಮೂರು–ನಾಲ್ಕು ಗಂಟೆಗಳ ಅಂತರವಿರಬೇಕು. ಕೇವಲ ಅರ್ಧ ಹೊಟ್ಟೆಯಷ್ಟು ಆಹಾರ, ಕಾಲು ಹೊಟ್ಟೆಯಷ್ಟು ನೀರನ್ನು ಸೇವಿಸಿದರೆ, ಚೆನ್ನಾಗಿ ಪಚನವಾಗಿ ಅಂಗಾಂಗಗಳು ಪುಷ್ಟಿ ಹೊಂದುತ್ತವೆ. **"ಅಜೀರ್ಣೇ ಭೋಜನಂ ವಿಷಂ"** ಎಂಬಂತೆ ಅತಿ ಆಹಾರ ಸೇವನೆಯಿಂದ ಊಟವು ವಿಷವಾಗಿ ಆರೋಗ್ಯ ಹದಗೆಡುತ್ತದೆ. ಪ್ರಾಚೀನ ವೈದ್ಯೋಕ್ತಿಯಂತೆ ಚೆನ್ನಾಗಿ ಬೆಂದ, ಹಿತವಾದ ಆಹಾರವನ್ನು ಮಿತವಾಗಿ ಸೇವಿಸಬೇಕು. (**ಹುತಭುಕ್, ಮಿತಭುಕ್, ಹಿತಭುಕ್**) ಚರಕ ಸಂಹಿತೆಯಂತೆ ಒಳ್ಳೆಯ ಬಣ್ಣ, ಸುವಾಸನೆ ಹಾಗೂ ರುಚಿಯಾದ (**ವರ್ಣ, ಗಂಧ, ರಸ**) ಆಹಾರ ಸೇವಿಸಿದರೆ ದೇಹಕ್ಕೂ, ಮನಸ್ಸಿಗೂ ಚೆನ್ನ. ಕೆಲವರಿಗೆ ಅತಿಯಾಗಿ ಮಾತನಾಡುವ ಅಥವಾ ಮಾತನ್ನು ಬೆಳೆಸುವ, ವಿಪರೀತ ಭಾಷಣ ಮಾಡುವ ಚಪಲ.

ಕಡಿವಾಣವಿಲ್ಲದ ಈ ಮಾತಿನಿಂದಾಗಿ, ತೂಕ ತಪ್ಪಿ ಪೇಚಿನ ಪ್ರಸಂಗ ಉಂಟಾಗಬಹುದು. ಕವಿಯ ಪ್ರಕಾರ ಅತಿಮಾತು ವ್ಯಕ್ತಿಗೂ, ಸಮಾಜಕ್ಕೂ ಅಪಾಯಕಾರಿ. **ವಚನಕಾರರು – ನುಡಿದರೆ ಮುತ್ತಿನ ಹಾರದಂತಿರಬೇಕು, ಮಾಣಿಕ್ಯದ ದೀಪ್ತಿಯಂತಿರಬೇಕು, ಸ್ಫಟಿಕದ ಸಲಾಕೆಯಂತಿರಬೇಕು** ಎಂದು ತಿಳಿಹೇಳಿದ್ದಾರೆ. ನಾವಾಡುವ ಮಾತು ಬೆಳಕಾಗಿ, ಕಾವ್ಯಮಯವಾಗಿರಬೇಕು. ಆದ್ದರಿಂದ ಊಟ ಹಾಗೂ ಮಾತಿನಲ್ಲಿ ಹಿತ–ಮಿತಗಳನ್ನು ಸಾಧಿಸಬೇಕು ಎಂಬುದು ಕವಿಯ ಕಿವಿಮಾತು.

**– ಪ್ರೊ. ಎಂ.ಕೆ. ಶ್ರೀಧರ್**

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ಬ್ರಹ್ಮಜ್ಞಾನಾವಲೀಮಾಲಾ

**– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ**

**ತತ್ತ್ವಾತೀತ�ః ಪರಾತ್ಮಾऽಹಂ ಮಧ್ಯಾತೀತః ಪರః ಶಿವః।**
**ಮಾಯಾತೀತః ಪರಂ ಜ್ಯೋತಿರಹಮೇವಾಹಮವ್ಯಯః॥7॥**

**ಅನುವಾದ :** ನಾನು ತತ್ತ್ವಾತೀತನಾದ ಪರಮಾತ್ಮನು. ನಾನು ಮಧ್ಯಾತೀತನಾದ ಪರಶಿವನು. ನಾನು ಮಾಯಾತೀತನಾದ ಪರಮ ಜ್ಯೋತಿ.

**ವಿವರಣೆ :** ಸಾಂಖ್ಯರ ಪ್ರಕಾರ ಇಪ್ಪತ್ನಾಲ್ಕು ತತ್ತ್ವಗಳಿವೆ. ಈ ತತ್ತ್ವಗಳಲ್ಲಿ ಪ್ರಕೃತಿ ಎಂಬ ತತ್ತ್ವವು ಉಳಿದ ಎಲ್ಲಾ ತತ್ತ್ವಗಳಿಗೂ ಕಾರಣವಾದದ್ದು. ಈ ಜಗತ್ತು ಈ ಇಪ್ಪತ್ನಾಲ್ಕು ತತ್ತ್ವಗಳಿಂದ ಕೂಡಿದೆ. ಸಾಂಖ್ಯರ ಪ್ರಕಾರ ಈ ತತ್ತ್ವಗಳು ಸತ್ಯ. ಆದರೆ ವೇದಾಂತವು ಈ ತತ್ತ್ವಗಳು ಮಿಥ್ಯೆಯಾಗಿದ್ದು ಅಧಿಷ್ಠಾನವಾದ ಬ್ರಹ್ಮನಲ್ಲಿ ಕಲ್ಪಿತವಾಗಿವೆ ಎಂಬುದನ್ನು ತಿಳಿಸಿಕೊಡುತ್ತದೆ. ಹಾಗಾಗಿ ಕಲ್ಪಿತವಾದ ತತ್ತ್ವಗಳ ಅಧಿಷ್ಠಾನವಾದ ಬ್ರಹ್ಮನು ಮಾತ್ರ ಸತ್ಯ. ಬ್ರಹ್ಮನು ತನ್ನಲ್ಲಿ ಕಲ್ಪಿತವಾದ ತತ್ತ್ವಗಳನ್ನು ಮೀರಿರುವವನಾದ್ದರಿಂದ ತತ್ತ್ವಾತೀತನು ಎಂದು ಹೇಳಬಹುದು.

ಮಧ್ಯ ಎಂದರೆ ಆದಿ ಹಾಗೂ ಅಂತ್ಯಗಳ ನಡುವೆ ಇರುವಂತದ್ದು. ಎಂದರೆ ಮೊದಲಿನಿಂದ ಮುಂದೆ ಹಾಗೂ ಕೊನೆಯಿಂದ ಹಿಂದೆ ಇರುವುದನ್ನು ಮಧ್ಯ ಎನ್ನುವುದು ಲೋಕದಲ್ಲಿ ಪ್ರಸಿದ್ಧ. ಬ್ರಹ್ಮನಿಗೆ ಆದಿಯಾಗಲೀ ಅಂತ್ಯವಾಗಲೀ ಇಲ್ಲ. ಹಾಗಾಗಿ ಆದಿಯಿಂದ ಆಚೆಗೆ ಹಾಗೂ ಅಂತ್ಯದಿಂದ ಈಚೆಗೆ ಇರುವ ಮಧ್ಯವೂ ಇರುವುದು ಸಾಧ್ಯವಿಲ್ಲ. ದೇಶಾದಿ ಪರಿಚ್ಛೇದಗಳುಳ್ಳ ವಸ್ತುವಿಗೆ ಮಾತ್ರ ಆದಿ, ಅಂತ್ಯ ಹಾಗೂ ಮಧ್ಯ ಎನ್ನುವ ಪ್ರದೇಶಗಳಿರಲು ಸಾಧ್ಯ. ಬ್ರಹ್ಮವು ಅಪರಿಚ್ಛಿನ್ನವೂ ಸರ್ವವ್ಯಾಪಿಯೂ ಆದ್ದರಿಂದ ಅದಕ್ಕೆ ಆದಿ, ಮಧ್ಯ ಹಾಗೂ ಅಂತ್ಯ ಎನ್ನುವುದು ಇಲ್ಲ.

ಬ್ರಹ್ಮನು ಪರಮಾತ್ಮನು ಎನ್ನುವುದು ವೇದಾಂತದಲ್ಲಿ ಪ್ರಸಿದ್ಧ. ಆತ್ಮನು ಒಬ್ಬನೇ ಇರುವಾಗ ಅವನಿಗೆ ಪರ ಅಥವಾ ಪರಮ ಎನ್ನುವ ವಿಶೇಷಣದ ಅಗತ್ಯವಾದರೂ ಏನು ಎಂದು ಪ್ರಶ್ನಿಸಬಹುದು. ಆತ್ಮನು ವಾಸ್ತವವಾಗಿ ಅನಂತನೂ ಅಸಂಸಾರಿಯೂ ಆಗಿದ್ದರೂ ಅಜ್ಞಾನದಿಂದಾಗಿ ಅವನು ಪರಿಚ್ಛಿನ್ನನಾದ ಸಂಸಾರ ತಾಪತ್ರಯಗಳಿಂದ ಬಳಲುವ ಜೀವಾತ್ಮನಂತೆ ಕಾಣಿಸಿಕೊಳ್ಳುವನು. ಈ ಭ್ರಾಂತಿಯಿಂದ ಕಲ್ಪಿತವಾದ ಜೀವಾತ್ಮನ ಸ್ಥಿತಿಯು ಆತ್ಮನ ಸ್ವರೂಪವಲ್ಲ. ಅವನು ಸಂಸಾರವನ್ನು ಮೀರಿದ ಕೊನೆಯಿಲ್ಲದ ಪರಮಾತ್ಮನೇ ಎನ್ನುವುದನ್ನು ತೋರಿಸುವುದೇ ಪರ ಅಥವಾ ಪರಮ ಎನ್ನುವ ವಿಶೇಷಣದ ಪ್ರಯೋಜನವಾಗಿದೆ.

ಆ ಪರಮಾತ್ಮನು ಪರಶಿವನು ಎಂದರೆ ಪರಮ ಮಂಗಳಸ್ವರೂಪನು. ಅವನಲ್ಲಿ ಅಮಂಗಳವಾದ ಯಾವ ತತ್ತ್ವವೂ ಇಲ್ಲ. ಈ ದೇಹ, ಇಂದ್ರಿಯ ಇತ್ಯಾದಿಗಳು ವಿವೇಕಿಯ ದೃಷ್ಟಿಯಲ್ಲಿ ಅಮಂಗಳವೇ ಆಗಿದೆ. ಯಾಕೆಂದರೆ ಇವುಗಳಿಂದ ಪದೇ ಪದೇ ದುಃಖದ ಅನುಭವವು ಆಗುತ್ತಿರುತ್ತದೆ. ಆದರೆ ಆತ್ಮನು ಪರಮಾನಂದರೂಪನು. ಅವನಲ್ಲಿ ದುಃಖ ಅಥವಾ ಅದರ ಕಾರಣಗಳ ಸಂಪರ್ಕವಿಲ್ಲ.

ಮಾಯೆ ಎಂದರೆ ಪ್ರಕೃತಿ. ಅದು ಪಂಚಭೂತಾದಿ ಜಗತ್ತಿಗೆ ಕಾರಣವಾದ ತತ್ತ್ವ. ಈ ಮಾಯೆಗೆ ಬ್ರಹ್ಮನಿಂದ ಸ್ವತಂತ್ರವಾದ ಅಸ್ತಿತ್ವ ಇಲ್ಲ. ಇದು ಬ್ರಹ್ಮನನ್ನೇ ಆಶ್ರಯಿಸಿದೆ. ಸ್ವತಂತ್ರವಾದ ಅಸ್ತಿತ್ವವಿಲ್ಲದ ತತ್ತ್ವವನ್ನು ಮಿಥ್ಯೆ ಎಂದು ಹೇಳಲಾಗುತ್ತದೆ. ಮಾಯೆ ಹಾಗೂ ಅದರ ಕಾರ್ಯವಾದಂತಹ ಜಗತ್ತು – ಇವೆರಡೂ ಮಿಥ್ಯೆ ಎಂದು ವೇದಾಂತಿಗಳು ತಿಳಿಯುತ್ತಾರೆ. ಆದರೆ ಅವುಗಳಿಗೆ ಆಶ್ರಯವಾದಂತಹ ಬ್ರಹ್ಮ ಒಂದೇ ಸತ್ಯ. ಬ್ರಹ್ಮನು ಮಾತ್ರ ಸ್ವತಂತ್ರವಾಗಿರುವ ವಸ್ತು. ಹಾಗಾಗಿ ಪಾರಮಾರ್ಥಿಕವಾದ ಸತ್ಯ ಬ್ರಹ್ಮ ಒಂದೇ. ಮರುಭೂಮಿಯ ಮರಳು ಮರೀಚಿಕೆಯ ನೀರಿನಿಂದಾಗಿ ಒದ್ದೆಯಾಗಲಾರದು. ಯಾಕೆಂದರೆ ಮರೀಚಿಕೆಯ ನೀರು ಕಲ್ಪಿತವಾದದ್ದು. ಅದಕ್ಕೆ ಮರಳಿಗಿಂತ ಬೇರೆಯಾದ ಅಸ್ತಿತ್ವವೇ ಇಲ್ಲ. ಅದೇ ರೀತಿ ಬ್ರಹ್ಮನು ಮಾಯೆ ಹಾಗೂ ಅದರ ಕಾರ್ಯಗಳನ್ನು ಮೀರಿರುವನು.

ಚೈತನ್ಯಸ್ವರೂಪನಾದ ಬ್ರಹ್ಮನು ಪರಮವಾದ ಜ್ಯೋತಿ. ಉಳಿದ ಎಲ್ಲಾ ಜ್ಯೋತಿಗಳನ್ನು ಬೆಳಗುವ ಜ್ಯೋತಿಗೆ 'ಪರಂ ಜ್ಯೋತಿಃ' ಎನ್ನುವರು. ಈ ಲೋಕದಲ್ಲಿ ಸೂರ್ಯನು ಉತ್ಕೃಷ್ಟವಾದ ಜ್ಯೋತಿ ಎನ್ನುವುದು ಪ್ರಸಿದ್ಧ. ಆದರೆ ಸೂರ್ಯನನ್ನು ಬೆಳಗಲು ನಮ್ಮ ಕಣ್ಣು ಅಥವಾ ಚಕ್ಷುರಿಂದ್ರಿಯದ ಅಗತ್ಯವಿದೆ. ಕುರುಡರೇ ಇರುವ ಒಂದು ದ್ವೀಪದಲ್ಲಿ ಹಗಲು ರಾತ್ರಿ ಎನ್ನುವ ಭೇದವೇ ಇರಲಾರದು. ಯಾಕೆಂದರೆ ಅಲ್ಲಿ ಸೂರ್ಯನ ಪ್ರಕಾಶವನ್ನು ತಿಳಿಯುವವರು ಯಾರೂ ಇಲ್ಲ. ಕಣ್ಣು ಇಲ್ಲದಿದ್ದರೆ ಸೂರ್ಯನ ಅಸ್ತಿತ್ವವನ್ನೇ ತಿಳಿಯಲು ಸಾಧ್ಯವಿಲ್ಲ. ಹಾಗಾಗಿ ಸೂರ್ಯನನ್ನೂ ಬೆಳಗುವ ಜ್ಯೋತಿ ನಮ್ಮ ಚಕ್ಷುರಿಂದ್ರಿಯ. ಆದರೆ ಈ ಇಂದ್ರಿಯವನ್ನು ಬೆಳಗಲು ನಮ್ಮ ಅಂತಃಕರಣ ಎನ್ನಲ್ಪಡುವ ಮನಸ್ಸು ಆವಶ್ಯಕ. ಆದರೆ ಆ ಮನಸ್ಸನ್ನೂ ತಿಳಿಯುವ ಜ್ಯೋತಿಯು ಚೈತನ್ಯರೂಪನಾದ ಆತ್ಮ. ಹಾಗಾಗಿ ಆತ್ಮನು ಪರಮ ಜ್ಯೋತಿ ಎಂದು ವೇದಾಂತವು ಪ್ರತಿಪಾದಿಸುತ್ತದೆ.

**ನಾನಾರೂಪವ್ಯತೀತೋऽಹಂ ಚಿದಾಕಾರೋऽಹಮಚ್ಯುತಃ ।**
**ಸುಖರೂಪಸ್ವರೂಪೋऽಹಮಹಮೇವಾಹಮವ್ಯಯಃ ॥ 8 ॥**

**ಅನುವಾದ :** ನಾನು ನಾನಾ ರೂಪಗಳನ್ನು ಮೀರಿದವನು. ನಾನು ಚಿದಾಕಾರನು ಹಾಗೂ ಅಚ್ಯುತನು. ನಾನು ಸುಖಸ್ವರೂಪನು.

**ವಿವರಣೆ :** ಈ ಜಗತ್ತು ಎಂದರೆ ನಾನಾ ರೂಪಗಳ ಸಮೂಹ. ಜಗತ್ತಿನ ಅಧಿಷ್ಠಾನವಾದಂತಹ ಬ್ರಹ್ಮನು ಈ ಎಲ್ಲಾ ರೂಪಗಳನ್ನೂ ವ್ಯಾಪಿಸಿರುವನು ಹಾಗೂ ಅವುಗಳನ್ನು ಮೀರಿರುವನು. ಒಂದು ಬಂಗಾರದ ಒಡವೆಗಳ ಅಂಗಡಿಯಲ್ಲಿ ಇರುವುದು ಎಲ್ಲವೂ ಏಕಮಾತ್ರ ಸ್ವರ್ಣವೇ. ಆದರೆ ಆ ಬಂಗಾರವೆನ್ನುವ ತತ್ತ್ವವು ಬಳೆ, ಉಂಗುರ, ಸರ ಇತ್ಯಾದಿ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಅವುಗಳ ವಸ್ತುವಾದ ಬಂಗಾರವು ಬೇರೆ ಬೇರೆ ರೂಪಗಳನ್ನು ಮೀರಿ ನಿಂತಿರುವ ತತ್ತ್ವವಾಗಿದೆ. ಅದೇ ರೀತಿ ಬ್ರಹ್ಮನು ಎಲ್ಲಾ ರೂಪಗಳಿಗೂ ಆಧಾರವಾದರೂ ಎಲ್ಲಾ ರೂಪಗಳನ್ನೂ ಮೀರಿದ್ದಾನೆ. ಹಾಗಾಗಿ ರೂಪಗಳಿಂದ ಉಂಟಾಗುವ ಭೇದವು ಬ್ರಹ್ಮನಲ್ಲಿ ಕಲ್ಪಿತವಾಗಿದೆಯೇ ಹೊರತು ವಾಸ್ತವವಾಗಿ ಇಲ್ಲ.

ಬ್ರಹ್ಮನು ಚಿದಾಕಾರನು ಎಂದರೆ ಚೈತನ್ಯಸ್ವರೂಪನು ಎಂದರ್ಥ. ಈ ಜಗತ್ತು ಜಡವಾಗಿದೆ. ಆದರೆ ಈ ಜಡವಾದ ಜಗತ್ತನ್ನು ಬೆಳಗುವುದು ಚೈತನ್ಯ. ಚೈತನ್ಯವಿಲ್ಲದಿದ್ದರೆ ಈ ಜಗತ್ತಿನ ಇರುವಿಕೆಯನ್ನು ತಿಳಿಯುವುದೇ ಸಾಧ್ಯವಿಲ್ಲ. ಆ ಚೈತನ್ಯವು ಬ್ರಹ್ಮನ ಸ್ವರೂಪವೇ ಆಗಿದೆ.

(ಮುಂದುವರೆಯುವುದು)

# ಅಧ್ಯಕ್ಷರ ನುಡಿ



**ಮಹಾಸಭೆಯ 42ನೇ ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷರ ಭಾಷಣದ ಮುಖ್ಯಾಂಶಗಳು**

**ವಿಪ್ರ ಬಾಂಧವರಿಗೆ ನನ್ನ ನಮಸ್ಕಾರಗಳು,**

ನಾಡಿನ ಸಮಸ್ತ ವಿಪ್ರ ಬಾಂಧವರಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ಯಾರಿಗೂ ಕೇಡು ಬಯಸದ ಬ್ರಾಹಣ ಸಮಾಜದ ಕುರಿತು ಇಂದು ಟೀಕೆ ಟಿಪ್ಪಣಿಗಳು ಹೆಚ್ಚಾಗುತ್ತಿವೆ. ಹೀಗಾಗಿ, ನಾವೆಲ್ಲರೂ ಸಂಘಟಿತರಾಗಬೇಕು. ರಾಜ್ಯಮಟ್ಟದಲ್ಲಿ ನಾವು ಬ್ರಾಹ್ಮಣರು ಒಂದೇ ಎಂಬ ಗಟ್ಟಿ ಧ್ವನಿ ಎತ್ತಬೇಕು.

*** ಸಮಾಜದ ಸಂಘಟನೆಯೇ ಶಕ್ತಿ.**

ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಬೆಂಗಳೂರು ಹೊರಗಡೆ ಸಭೆ ಮಾಡಲಾಗುತ್ತಿದೆ. ಇದರ ಉದ್ದೇಶ ನಾವೆಲ್ಲರೂ ಸಂಘಟಿತರಾಗಬೇಕು. ಉತ್ತರ ಕರ್ನಾಟಕದವರು ಇದೊಂದು ನಮ್ಮ ಸಂಸ್ಕೃತಿ ಎಂಬುದನ್ನು ಅರಿತು ಸಮಾಜದ ಕಾರ್ಯಗಳಲ್ಲಿ ತೊಡಗಲಿ ಎಂಬುದಾಗಿದೆ. ಇಂದು ಬ್ರಾಹ್ಮಣರು, ಬ್ರಾಹ್ಮಣರ ಪರ ಮಾತನಾಡಿದರೆ ತೊಂದರೆ ಕೊಡುವಂತ ಸ್ಥಿತಿ ಬಂದಿದೆ. ಸಮಾಜದ ಎಲ್ಲ ದೋಷಗಳಿಗೂ ಬ್ರಾಹ್ಮಣರೇ ಕಾರಣ ಎಂದು ಬಿಂಬಿಸುವ ಕೆಲಸ ಕೆಲವು ಶಕ್ತಿ ಮಾಡುತ್ತಿವೆ. ಬ್ರಾಹ್ಮಣರನ್ನೇ ಗುರಿಯಾಗಿಸಿಕೊಂಡು ಕಾನೂನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಬ್ರಾಹ್ಮಣರನ್ನು ಟೀಕೆ ಮಾಡುವಂಶಹ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದನ್ನು ಖಂಡಿಸಿ ನಾವು ಸಂಘಟಿತರಾಗಬೇಕು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಡಿದರೂ ಅದಕ್ಕೆ ಅನುದಾನ ನೀಡಲಿಲ್ಲ. ನಮ್ಮ ಸಮುದಾಯದಲ್ಲಿ ಕಷ್ಟದಲ್ಲಿದ್ದವರರಿಗೆ ಸಹಾಯ ಮಾಡುವವರೂ ಇಲ್ಲ. ಹೀಗಾಗಿ, ನಾವೇ ನಮ್ಮ ಸಮುದಾಯದಲ್ಲಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕಿದೆ. ಮಹಾಸಭಾವು ಸಮುದಾಯದ ಮಹಿಳೆಯರಿಗೆ ಪ್ರಾಶಸ್ತ್ಯ ನೀಡುವ ದಿಶೆಯಲ್ಲಿ ಕಾರ್ಯತತ್ಪರವಾಗಿದೆ. ಮಹಾಸಭಾದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ 20 ಸಾವಿರ ಸದಸ್ಯರನ್ನು ಹೆಚ್ಚು ಮಾಡಲಾಗಿದೆ. ಹಾವೇರಿಯಲ್ಲಿ ಜಿಲ್ಲಾ ಸಂಘಟನೆ ರಚಿಸಲಾಗಿದೆ. ಬೆಳಗಾವಿ. ಬಾಗಲಕೋಟಿ ಸೇರಿ ಆನೇಕ ಕಡೆ ಸಂಘಟನೆ ಬಲಪಡಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಹೆಚ್ಚು ಸಭೆ ನಡೆಸಿದ್ದು. ನಮ್ಮ ಅಧಿಕಾರ ಅವಧಿಯಲ್ಲಿಯೇ. ಈ ಕಾರ್ಯ ನಿರಂತರ ಮುಂದುವರೆಯಬೇಕು.

**ಮಹಾಸಭಾದಿಂದ ಅನೇಕ ಸಮಾಜಮುಖಿ ಕಾರ್ಯ :** ಸಮಾಜದಲ್ಲಿ ಬಡವರು. ವೃದ್ಧರಿಗೆ ಅನುಕೂಲವಾಗಬೇಕು ಎನ್ನುವ ನಿಟ್ಟಿನಲ್ಲಿ ತಿಂಗಳು 500 ರೂ. ಪಿಂಚಣಿ ಕೊಡುವ ವ್ಯವಸ್ಥೆ ಮಾಡಲಾಗಿದೆ. ಮೆಡಿಕಲ್ ಹೆಲ್ಪಲೈನ್, ವಿದ್ಯಾರ್ಥಿನಿಯರಿಗೆ ವಸತಿ ನಿಲಯ, ಬಡವರಿಗೆ ಉಚಿತ ಮೆಡಿಷನ್ ನೀಡುವ ಯೋಜನೆ. ಸಮಾಜದವರಿಗೆ ಕಾನೂನು ನೇರವಿಗೆ ಲೀಗಲ್ ಸೆಲ್ ಮಾಡಲಾಗಿದೆ. ರಾಜ್ಯದ ನಾಲ್ಕು ಭಾಗದಲ್ಲಿ ಪ್ರತಿಭಾ ಪುರಸ್ಕಾರ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುವುದು. ಅನುಕೂಲವುಳ್ಳವರು ಸಮಾಜದ ಬಡವರಿಗೆ ಸಹಾಯ ಮಾಡಬೇಕು. ಮುಂದಿನ ದಿನಗಳಲ್ಲಿ ಮಹಿಳಾ ಸಮಾವೇಶ ಮಾಡಿ ಸಾಧಕ 20–25 ಮಹಿಳೆಯರಿಗೆ ಸನ್ಮಾನ, ಅಗ್ನಿಹೋತ್ರ ವೈದಿಕರನ್ನು ಗುರುತಿಸಿ ಸಮಾವೇಶ, ಯತಿ ಸಮಾವೇಶ ಮಾಡುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ.

**ಬ್ರಾಹ್ಮಣರೆಂದೇ ಬರೆಸಿ :** ಜನಗಣತಿಯಲ್ಲಿ ಉಪಪಂಗಡದ ಹೆಸರು ಬರೆಸದೇ ಬ್ರಾಹ್ಮಣರೆಂದೇ ಬರೆಸಬೇಕು. ಬ್ರಾಹ್ಮಣರು ದ್ವೈತ, ಅದ್ವೈತ ಎಂಬುದನ್ನು ಬಿಟ್ಟು ಬ್ರಾಹ್ಮಣರು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಸಂಘಟನೆ ಪ್ರಬಲವಾಗಬೇಕು. ಆ ನಿಟ್ಟಿನಲ್ಲಿ ಸಾಗೋಣ. ಈಚೆಗೆ ಜನಸಂಖ್ಯೆ ಆಧಾರದ ಮೇಲೆ ಸೌಲಭ್ಯ ಸಿಗಬೇಕು ಎಂಬ ವಾದ ನಡೆಯುತ್ತಿದೆ. ಕೆಲ ನಾಯಕರೂ ಮಾತನಾಡುತ್ತಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕ. ಪ್ರಬಲರಿದ್ದವರು ಅಲ್ಪಸಂಖ್ಯಾತರನ್ನು ಕಡೆಗಣಿಸುವ ತಂತ್ರವಾಗಿದೆ. ತಮ್ಮ ರಾಜಕೀಯ ಲಾಭಕ್ಕಾಗಿ ಆನುಕೂಲವಾಗುವವರಿಗೆ ಮಾತ್ರ ಸ್ಪಂದಿಸುತ್ತೇವೆ ಎಂಬ ಧೋರಣೆ ಅಧಿಕಾರದಲ್ಲಿರುವವರಲ್ಲಿ ಕಂಡು ಬರುತ್ತಿರುವುದು ತುಂಬ ಕಳವಳಕಾರಿ.

ಸನಾತನ ಧರ್ಮದ ಬೆನ್ನೆಲುಬಾದ ಮಹಿಳೆಯರ ಸಂಘಟನೆ ಮತ್ತು ಮಹಿಳೆಯರ ಅಭಿವೃದ್ಧಿಗೆ ಹಾಗೂ ಇಂದು ಅವರು ಎದುರಿಸುತ್ತಿರುವ ಸವಾಲುಗಳ ಕುರಿತು **'ಅಭಿಜಾತೆ 2023'** ಮಹಾ ಮಹಿಳಾ ಸಮ್ಮೇಳನವನ್ನು ಜನವರಿ 6, 7 ರಂದು ಹಮ್ಮಿಕೊಳ್ಳಲಾಗಿದೆ. ಸಮಾವೇಶ ಯಶಸ್ವಿಗೊಳಿಸಲು ಸಕಲ ಸಿದ್ಧತೆಗಳು ನಡೆಯುತ್ತಿವೆ. ಈ ಸಮಾವೇಶದಲ್ಲಿ ರಾಜ್ಯದ ಎಲ್ಲಾ ಮಹಿಳೆಯರು ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

**ಅಶೋಕ ಹಾರನಹಳ್ಳಿ**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ನಾಡಿನ ಸಮಸ್ತ ವಿಪ್ರ ಜನತೆಗೆ 68ನೇ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ನಮ್ಮ ರಾಜ್ಯಕ್ಕೆ 1973ರಲ್ಲಿ ಕರ್ನಾಟಕ ಎಂಬ ಹೆಸರಿಟ್ಟಿದ್ದು, ಈಗ 50ನೇ ವರ್ಷದ ಸಂಭ್ರಮಾಚರಣೆಯಲ್ಲಿದ್ದೇವೆ. ಇಡೀ ರಾಜ್ಯದ ಕನ್ನಡ ಪ್ರೇಮಿಗಳು, ಜನತೆ ಈ ಕರ್ನಾಟಕ ಸುವರ್ಣ ಮಹೋತ್ಸವವನ್ನು ವರ್ಷಪೂರ್ತಿ ಆಚರಿಸಲು ಸಂಕಲ್ಪಿಸಿದ್ದಾರೆ. ನಮ್ಮ ರಾಜ್ಯಕ್ಕೆ ಮೈಸೂರು ಅಥವಾ ಕರ್ನಾಟಕ ಎಂಬ ಹೆಸರು ಬರುವುದಕ್ಕೂ ಮೊದಲು ರಾಮಾಯಣ ಕಾಲದಿಂದಲೂ ಪ್ರಸಿದ್ಧವಾಗಿದ್ದು, ಆ ಪ್ರಪ್ರಥಮ ಸಂಸ್ಕೃತ ವೀರ ಕಾವ್ಯದಲ್ಲಿ ಕಿಷ್ಕಿಂಧೆ ಅಥವಾ ಇಂದಿನ ಪಂಪಾ ಕ್ಷೇತ್ರದ ಉಲ್ಲೇಖವಿದೆ. ಮಹಾಭಾರತದ ವಿರಾಟನಗರಿ ಇಂದಿನ ಹಾನಗಲ್ಲು, ಮತ್ಸ್ಯ, ಸ್ಕಾಂದ ಪುರಾಣಗಳಲ್ಲಿ ಕರ್ಣಾಟ, ಕರ್ಣಾಟಕವೆಂಬ ಮಾಹಿತಿ ದೊರಕುತ್ತದೆ. ಇಷ್ಟು ಪ್ರಾಚೀನ ಇತಿಹಾಸವುಳ್ಳ ಕರ್ನಾಟಕಕ್ಕೆ ಜಗತ್ತಿನ ಪುರಾತನ ನಾಗರಿಕತೆಗಳಾದ ಈಜಿಪ್ಟ್, ಸುಮೇರಿಯಾ, ಫಿನಿಷಿಯಾ, ಸಿಂಧೂ–ಸರಸ್ವತಿಗಳೊಂದಿಗೆ ಸಂಪರ್ಕ ವಾಣಿಜ್ಯ ವ್ಯವಹಾರ ಇತ್ತೆಂದು ಇತಿಹಾಸಕಾರರು ಸಾಕ್ಷ್ಯಾಧಾರಗಳೊಂದಿಗೆ ಸಾಬೀತು ಮಾಡಿದ್ದಾರೆ. ಕರ್ನಾಟಕದ ರೇವು–ಬಂದರುಗಳಾದ ಭಟ್ಕಳ, ಮಲ್ಪೆ, ಮಂಗಳೂರು ಮೂಲಕ ನಮ್ಮ ರಾಜ್ಯದ ಸಾಂಬಾರು ವಸ್ತುಗಳಾದ ಮೆಣಸು, ಯಾಲಕ್ಕಿ, ಚಕ್ಕೆ, ಅಮೂಲ್ಯ ರತ್ನಗಳು, ಶ್ರೀಗಂಧ, ದಂತ, ತೇಗ ಹೊರದೇಶಗಳಿಗೆ ರಫ್ತಾಗುತ್ತಿದ್ದವು. 2ನೇ ಶತಮಾನದಲ್ಲೇ ಗ್ರೀಕರಿಗೆ ನಮ್ಮ ಭಾಷೆಯ ಪರಿಚಯವಿತ್ತು. ಬಂಗಾಳದ ಸಮಂತ ಸೇನಾ ಕರ್ನಾಟಕದ ಮೂಲವಂಶಸ್ಥನಾಗಿದ್ದ. ನಮ್ಮ ರಾಜ್ಯವನ್ನು ಆಳಿದ ಪ್ರಸಿದ್ಧ ರಾಜಮನೆತನಗಳಾದ ಕದಂಬ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಬಾದಾಮಿ ಚಾಲುಕ್ಯ, ಗಂಗ, ಹೊಯ್ಸಳ, ಯಾದವ, ಕಳಚೂರಿ, ವಿಜಯನಗರ, ಕೆಳದಿ, ಸುರಪುರ, ಮೈಸೂರು ಅರಸರು, ಪಲ್ಲವ, ಕೆಂಪೇಗೌಡ ವಂಶಸ್ಥರು ಕನ್ನಡ–ಸಂಸ್ಕೃತ, ಭಾಷೆ–ಸಾಹಿತ್ಯಕ್ಕೆ ಅಮೋಘ ಸೇವೆಯನ್ನು ಸಲ್ಲಿಸಿದ್ದಾರೆ. ಹಲ್ಮಿಡಿ ಶಾಸನ (ಸಾ.ಶ.430). ಕದಂಬರ ಸಂಸ್ಕೃತ ಶಾಸನ (ಸಾ.ಶ.345)ಗಳಲ್ಲಿ, ಕನ್ನಡ ನುಡಿ–ನಾಡಿನ ಬಗ್ಗೆ ಮಾಹಿತಿಯಿದ್ದು, ಕರ್ಣಾಟವೆಂಬುದು ಸಂಸ್ಕೃತ ಶಬ್ದವಾಗಿದ್ದು, 'ಕರ್ಣೇ ಅಟತಿ' ಎಂಬ ವಿಶೇಷ ಅರ್ಥವನ್ನು ಹೊಂದಿ ಎಲ್ಲೆಡೆ ನಿನಾದವನ್ನು ಹೊಮ್ಮಿಸುವ ನಾಡು ಎಂದಾಗಿದೆ. ಪಶ್ಚಿಮ ಕರಾವಳಿಗೆ ಪರಶುರಾಮ ಕ್ಷೇತ್ರ ಎಂದು, ಇಡೀ ರಾಜ್ಯಕ್ಕೆ ಕುಂತಲ ದೇಶವೆಂದು ಹೆಸರಿತ್ತು. ಕರ್ನಾಟಕವು ಕರುನಾಡು ಅಂದರೆ ಎತ್ತರದ ನಾಡು, ಎರೆಭೂಮಿ, ಕಂಪಿನನಾಡು ಎಂದೂ ಸಹ ವ್ಯಾಖ್ಯಾನಿಸಲಾಗಿದೆ. ಕನ್ನಡದ ಆದಿಕವಿ ಪಂಪ, ರನ್ನ, ಜನ್ನ, ಪೊನ್ನ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದವರು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದರು. ಶ್ರೀ ವಿಜಯ ಕವಿಯು ಕನ್ನಡ ಪ್ರತಿಭಾವಂತರ ಬಗ್ಗೆ **"ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತಮತಿಗಳ್"** ಎಂದು ಪ್ರಶಂಸಿಸಿದ್ದಾನೆ.

ಹಳೆಗನ್ನಡ – ನಡುಗನ್ನಡ – ಹೊಸಗನ್ನಡದಿಂದ ಸಮೃದ್ಧವಾದ ಈ ಭಾಷೆ–ಸಾಹಿತ್ಯವನ್ನು ಪೋಷಿಸುವಲ್ಲಿ, ಕರ್ನಾಟಕ ಏಕೀಕರಣ ಕಾರ್ಯದಲ್ಲಿ ಬಹಳಷ್ಟು ಕನ್ನಡ ಕಟ್ಟಾಳುಗಳು ನಿರಂತರವಾಗಿ ಶ್ರಮಿಸಿದ್ದಾರೆ. ಈ ಎಲ್ಲ ಸಮುದಾಯಗಳ ಕಟ್ಟಾಳುಗಳಲ್ಲಿ ಬ್ರಾಹ್ಮಣ ಸಾಹಿತಿಗಳ ಪಾತ್ರ ಮಹತ್ತರವಾದವು. ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು, ಸರ್ದಾರ್ ವೆಂಕಟರಾಮಯ್ಯ, ಹಾರನಹಳ್ಳಿ ರಾಮಸ್ವಾಮಿ ಮುಂತಾದವರ ಕೊಡುಗೆ ಅನುಪಮವಾದದ್ದು, ಸರಸ್ವತಿ ಸಂಮಾನ ಪ್ರಶಸ್ತಿ ಪುರಸ್ಕೃತ ಡಾ.ಎಸ್.ಎಲ್. ಭೈರಪ್ಪ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ.ವಿ.ಕೆ. ಗೋಕಾಕ್, ರಸಋಷಿ ದ.ರಾ.ಬೇಂದ್ರೆ, ಕಾದಂಬರಿಕಾರರಾದ ಅ.ನ.ಕೃ., ತ.ರಾ. ಶಾಮರಾಯರು, ದೇವುಡು ನರಸಿಂಹಶಾಸ್ತ್ರಿ, ಡಾ. ಎ.ಎನ್. ಮೂರ್ತಿರಾವ್, ಡಾ.ಬಿ.ಎಂ.ಶ್ರೀ., ಡಾ. ತೀ.ನಂ.ಶ್ರೀ, ಟಿ.ವೆಂಕಣ್ಣಯ್ಯ, ಶ್ರೀಮತಿಯರಾದ ತ್ರಿವೇಣಿ, ಉಷಾ ನವರತ್ನರಾಂ, ಸುನಂದ ಬೆಳಗಾಂವಕರ್ ಮುಂತಾದವರು ಕನ್ನಡ ಭಾಷೆ, ಕಾವ್ಯ, ಪ್ರಬಂಧ, ಕಾದಂಬರಿ ಮುಂತಾದ ಪ್ರಕಾರಗಳನ್ನು ಶ್ರೀಮಂತಗೊಳಿಸಿದ್ದಾರೆ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಉಳಿವಿಗೆ ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸವಿರುವ ಕನ್ನಡ ಸಾಹಿತ್ಯ ಪರಿಷತ್ ನಿರಂತರವಾಗಿ ಶ್ರಮಿಸುತ್ತಿದೆ. ಹಲವಾರು ರಾಜ್ಯ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿ ಕನ್ನಡಿಗರ ಆತಂಕ, ಪರಭಾಷೆ ವಲಸೆಗಾರರ ಆಕ್ರಮಣ, ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಮರೆಯಾಗುತ್ತಿರುವುದು, ಈ ನಾಡಿನಲ್ಲೇ ಹುಟ್ಟಿ ಬೆಳೆದ ಕನ್ನಡಿಗರಿಗೆ ತಮ್ಮ ನೆಲದಲ್ಲೇ ಕೇಂದ್ರ ಸರ್ಕಾರದ ಕೆಲಸ ಸಿಗದೇ ಪರದಾಡುತ್ತಿರುವುದು, ನಮ್ಮಲ್ಲೇ ಹುಟ್ಟಿದ ಕಾವೇರಿ ನೆಲ–ಜಲ ವಿವಾದ, ಗಡಿನಾಡು ಕನ್ನಡಿಗರ ಸಮಸ್ಯೆಯ ಬಗ್ಗೆ ಕಾಲಕಾಲಕ್ಕೆ ಜಾಗೃತಿ ಮೂಡಿಸಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರಾಗಿದ್ದ ಹಲವಾರು ಬ್ರಾಹ್ಮಣ ಸಾಹಿತಿಗಳಾದ ಬಿ.ಎಂ. ಶ್ರೀಕಂಠಯ್ಯ, ಡಾ. ಡಿ.ವಿ. ಗುಂಡಪ್ಪ, ಪಂಜೆ ಮಂಗೇಶರಾಯರು, ವಿ. ಸೀತಾರಾಮಯ್ಯ, ಡಾ. ಜಿ. ವೆಂಕಟಸುಬ್ಬಯ್ಯ ಮುಂತಾದವರು ತಮ್ಮ ಅಧ್ಯಕ್ಷೀಯ ಭಾಷಣಗಳಲ್ಲಿ ಪ್ರಾಚೀನ ಪಕ್ವ, ಪ್ರೌಢ, ಚೆಲುವು ಕನ್ನಡ ಭಾಷೆಯ ಅಳಿವು–ಉಳಿವಿನ ಬಗ್ಗೆ ಜನರಿಗೆ, ರಾಜಕೀಯ ನೇತಾರರಿಗೆ ಸೂಚನೆ ನೀಡಿದ್ದಾರೆ. ನಮ್ಮ ರಾಜ್ಯದ ಪ್ರತಿಭಾವಂತ ಕನ್ನಡಿಗರು, ವಿಪ್ರರು, ಉದ್ಯೋಗ ನಿಮಿತ್ತ ಹೊರದೇಶಗಳಲ್ಲಿ ನೆಲಸಿದ ಮೇಲೆ ತಮ್ಮ ಭಾಷೆ–ಸಂಸ್ಕೃತಿಯನ್ನು ಮರೆಯದೇ ಕನ್ನಡ ಸಂಘಗಳನ್ನು ಸ್ಥಾಪಿಸಿ, ಕಾಲಕಾಲಕ್ಕೆ ಅದ್ದೂರಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ, ಕನ್ನಡದ ಇಂಪು–ಕಂಪನ್ನು ಹರಡಿದ್ದಾರೆ.

ಕನ್ನಡವೆಂಬುದು ಕೇವಲ ಭಾಷೆ ಅಷ್ಟೇ ಅಲ್ಲ. ಅದೊಂದು ಸಂಸ್ಕೃತಿ. ಇದರ ಮುಖ್ಯ ಲಕ್ಷಣಗಳು ಸ್ವಾಭಿಮಾನ, ಸಮನ್ವಯ, ಸಹಿಷ್ಣುತೆ, ಮಾನವೀಯತೆ, ಹೃದಯವಂತಿಕೆ ಮುಂತಾದವು. ಇವು ನಮ್ಮ ಜೀವನಾಡಿಗಳಲ್ಲಿ ಆನುಷಂಗಿಕವಾಗಿ ಬಂದಿವೆ. ವಿಪ್ರರಲ್ಲೂ ಈ ಗುಣಗಳು ಇದ್ದು, ಈ ಕಾರಣಗಳಿಂದಾಗಿ ವಿಶ್ವಮಾನ್ಯರಾಗಿದ್ದಾರೆ. ಚೆಲುವ ಕನ್ನಡ ನಾಡಿನ ಚಿನ್ನದ ಹಬ್ಬದ ಸಂದರ್ಭದಲ್ಲಿ ವಿಪ್ರರೆಲ್ಲರೂ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಪೋಷಣೆಗೆ ಕಂಕಣಬದ್ಧರಾಗಿ, ಪರಭಾಷಿಕರಿಗೆ ಕನ್ನಡವನ್ನು ಕಲಿಸಬೇಕು. ಕನ್ನಡ ಕಲಿಯದಿದ್ದರೆ ಈ ನೆಲದಲ್ಲಿ ಉಳಿಗಾಲವಿಲ್ಲ ಎಂಬ ಸನ್ನಿವೇಶ ಉಂಟಾಗುವಂತೆ ಮಾಡಬೇಕು. ಕನ್ನಡ ನೆಲ, ಗಡಿ, ಜಲ, ಭಾಷೆಯ ಪ್ರಶ್ನೆ ಬಂದಾಗ ಪಕ್ಷಾತೀತವಾಗಿ ನಾವು ಕೈಜೋಡಿಸಿ ಶಾಂತಿಯುತ ಹೋರಾಟ ನಡೆಸಬೇಕು. ಯುವಜನಾಂಗಕ್ಕೆ, ಭವಿಷ್ಯ ಪೀಳಿಗೆಗೆ 'ಕನ್ನಡತನ' ದ ಅರಿವು ಮೂಡಿಸಬೇಕು, ಈ ದಿಸೆಯಲ್ಲಿ ಎಲ್ಲರೂ ಪ್ರಯತ್ನಿಸೋಣ, ಸಿರಿಗನ್ನಡಂ ಗೆಲ್ಗೆ ! ಸಿರಿಗನ್ನಡಂ ಬಾಳ್ಗೆ !.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**

– ಪ್ರಧಾನ ಸಂಪಾದಕರು

### ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸರ್ವ ಸದಸ್ಯರ ಸಭೆಯಲ್ಲಿ ಅಶೋಕ್ ಹಾರನಹಳ್ಳಿ ಅಭಿಮತ

# ಪರ್ವ ಕಾಲದಲ್ಲಿ ವಿಪ್ರ ಸಮಾಜ



ಹುಬ್ಬಳ್ಳಿ : ನಾವು ವಿಪ್ರ ಸಮಾಜದವರು ಪರ್ವ ಕಾಲದಲ್ಲಿದ್ದೇವೆ. ಯಾರಿಗೂ ಕೇಡು ಬಯಸದ ಬ್ರಾಹಣ ಸಮಾಜದ ಕುರಿತು ಇಂದು ಟೀಕೆ ಟಿಪ್ಪಣಿಗಳು ಹೆಚ್ಚಾಗುತ್ತಿವೆ. ಹೀಗಾಗಿ, ನಾವೆಲ್ಲರೂ ಸಂಘಟಿತರಾಗಬೇಕು. ರಾಜ್ಯಮಟ್ಟದಲ್ಲಿ ನಾವು ಬ್ರಾಹಾರು ಒಂದೇ ಎಂಬ ಗಟ್ಟಿ ಧ್ವನಿ ಎತ್ತಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರು ಹೇಳಿದರು. ಇಲ್ಲಿನ ಗೋಕುಲ ರಸ್ತೆಯ ಕೇಶವ ಕುಂಜದ ಹತ್ತಿರದ ಹವ್ಯಕ ಭವನದಲ್ಲಿ ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ ಬೆಂಗಳೂರಿನ ಹೊರಗೆ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ 42ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.




ಪ್ರಧಾನ ಕಾರ್ಯದರ್ಶಿ ಎಸ್. ಶ್ರೀಧರಮೂರ್ತಿ ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆ ಹಾಗೂ ಕಳೆದ ಸರ್ವಸದಸ್ಯರ ಸಭೆ ವರದಿ. 2022–23ನೇ ಸಾಲಿನ ಕಾರ್ಯನಿರ್ವಾಹಕ ಮಂಡಳಿ ವರದಿ ಮಂಡನೆ ಮಾಡಿದರು. ಖಜಾಂಚಿ ವಿ.ಎಸ್. ನಾಯಕ ಆಡಿಟ್ ಆದ ಲೆಕ್ಕಪತ್ರಗಳ ಮಂಡನೆ ಮಾಡಿದರು.

ಮಹಾಸಭಾದ ಉಪಾಧ್ಯಕ್ಷ ರಾಘವೇಂದ್ರ ಭಟ್ ಮಾತನಾಡಿ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ



ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಹಾಗೂ ಲೋಕಕಲ್ಯಾಣಾರ್ಥವಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ರಾಮನಾಮ ಜಪ ಮಾಡಲಾಗುತ್ತಿದೆ. ವಿಜಯದಶಮಿಯಿಂದ ರಾಮನಾಮ ಜಪ ಆರಂಭಿಸಲಾಗಿದ್ದು, ಜನವರಿ 22 ರವರೆಗೆ ನಡೆಯಲಿದೆ. ಸಮಾಜದ ಬಾಂಧವರು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ವೇದಿಕೆಯ ಮೇಲೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಎ.ಸಿ.ಗೋಪಾಲ, ಮುಖಂಡರು ಹಾಗೂ ರಾಜ್ಯ ಘಟಕದ ಪದಾಧಿಕಾರಿಗಳಾದ ಹಿರಿಯಣ್ಣಸ್ವಾಮಿ. ಜಯಸಿಂಹ ಅಸಗೋಡ., ಜಯಸಿಂಹ ಎಲ್. ಸಾವಿತ್ರಿ ರಮೇಶ. ರೂಪಾ ಶಾಸ್ತ್ರಿ, ರಾಜೇಂದ್ರ ಪಸಾದ್, ಛಾಯಾಪತಿ, ಹಿರಿಯ ವಕೀಲರಾದ ಆರ್.ಡಿ ಕುಲಕರ್ಣಿ, ಡಾ. ಭಾಸ್ಕರ ಪಾಟೀಲ, ವಿಜಯ ನಾಡಜೋಶಿ. ವಸಂತ ನಾಡಜೋಶಿ, ಬಿಂದು ಮಾಧವ ಪುರೋಹಿತ್, ನರೇಂದ್ರ ಕುಲಕರ್ಣಿ, ವಾಸು ಕಟ್ಟ ರಾಘವೇಂದ್ರ ಗೊಜ್ಜಿ ಇತರರು ಇದ್ದರು.

ಮಹಾಸಭಾದ ಉಪಾಧ್ಯಕ್ಷರಾದ ಹನುಮಂತ ಡಂಬಳ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಸಂಘಟನಾ ಕಾರ್ಯದರ್ಶಿ ಕಾರ್ತಿಕ್ ಬಾಪಟ್ ಹಾಗೂ ವೀಣಾ ಹೆಗಡೆ ಅವರು ನಿರೂಪಿಸಿದರು.



**ಸನ್ಮಾನ :** ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಧಾರವಾಡ ಜಿಲ್ಲಾ ಘಟಕದ ಪದಾಧಿಕಾರಿಗಳು ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರನ್ನು ಸನ್ಮಾನಿಸಿದರು. ಮಹಾಸಭಾದ ವತಿಯಿಂದ ಉಪಾಧ್ಯಕ್ಷರಾದ ಎ.ಸಿಗೋಪಾಲ, ಹನುಮಂತ ಡಂಬಳ, ವಿಜಯ ನಾಡಜೋಶಿ, ವಸಂತ ನಾಡಜೋಕಶಿ ಸೇರಿ ಅನೇಕರನ್ನು ಸನ್ಮಾನಿಸಲಾಯಿತು.

# ಶತಕೋಟಿ ಶ್ರೀ ರಾಮ ತಾರಕಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗಕ್ಕೆ. ಕರಾಡ ಬ್ರಾಹ್ಮಣ ಸಮಾಜದ ಸಂಪೂರ್ಣ ಸಹಕಾರ



ಲೋಕಕಲ್ಯಾಣಾರ್ಥವಾಗಿ ಮತ್ತು ದೇಶದ ಸುಭಿಕ್ಷೆಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ, ಹಮ್ಮಿಕೊಂಡಿರುವ ಶತಕೋಟಿ ಶ್ರೀ ರಾಮ ತಾರಕ ಜಪ ಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗದ ಅಂಗವಾಗಿ ದಿನಾಂಕ 31.10.2023 ರಂದು ಕರಾಡ ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಶ್ರೀ ಅಶೋಕ್ ಭಟ್ ಅವರನ್ನು  ಕಾರ್ಯಕ್ರಮದ ಪ್ರಧಾನ ಸಂಚಾಲಕರಾದ ಡಾ. ಬಿ ಎಸ್ ರಾಘವೇಂದ್ರಭಟ್, ಶ್ರೀ ಹರಿಪ್ರಸಾದ್ ಪೆರಿಯಾಪು ಹಾಗೂ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಡಿ ವಿ ರಾಜೇಂದ್ರ ಪ್ರಸಾದ್ ಅವರು ಭೇಟಿ ಮಾಡಿ ಕಾರ್ಯಕ್ರಮದ ಸಂಪೂರ್ಣ ವಿವರಣೆ ನೀಡಿದರು. ಮಹಾಸಭೆಯು ಹಮ್ಮಿಕೊಂಡಿರುವ ಈ ಕಾರ್ಯಕ್ರಮವು ಸಂಪೂರ್ಣ ಯಶಸ್ವಿಯಾಗಲಿ ಎಂದು ಶುಭ ಕೋರಿ ತಾವು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ಸಮಾಜದ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

# ವರ್ತೂರಿನಲ್ಲಿ ರಾಮ ತಾರಕ ಜಪಯಜ್ಞಕ್ಕೆ ಚಾಲನೆ

ಅಯೋಧ್ಯೆಯಲ್ಲಿ 2024 ಜನವರಿ 22ನೇ ತಾರೀಖಿನಂದು ಲೋಕಾರ್ಪಣೆಗೊಳ್ಳುತ್ತಿರುವ ಶ್ರೀರಾಮಚಂದ್ರ ಪ್ರಭುವಿನ ಭವ್ಯ ಮಂದಿರ ಹಾಗೂ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಎಲ್ಲಾ ಯತಿ ಮುನಿಗಳು ಕರೆ ನೀಡಿರುವಂತೆ ಎಲ್ಲಾ ಗ್ರಾಮಗಳ ವತಿಯಿಂದ ದೇವಸ್ಥಾನಗಳು ಮತ್ತು ಮನೆಗಳಲ್ಲಿ ಶತಕೋಟಿ ಶ್ರೀರಾಮ ತಾರಕ ಜಪ ಯಜ್ಞಕ್ಕೆ ವಿಜಯದಶಮಿಯಂದು ಚಾಲನೆ ನೀಡಿದ್ದು, ಅದರಂತೆ ಇಂದು ಮಹದೇವಪುರ ವಿಧಾನಸಭಾ ಕ್ಷೇತ್ರದ ವರ್ತೂರಿನ ಶ್ರೀ ಚನ್ನರಾಯಸ್ವಾಮಿ ದೇವಸ್ಥಾನದಲ್ಲಿ ಚಾಲನೆ ನೀಡಲಾಯಿತು. ಮುಂಬರುವ ದಿನಗಳಲ್ಲಿ ಕ್ಷೇತ್ರದಲ್ಲಿ ಬೃಹತ್ ಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತಾಗಿ ಈ ಸಭೆಯಲ್ಲಿ ಘೋಷಣೆ ಮಾಡಲಾಯಿತು.

ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ಸಹಕರಿಸಿದ ರಾಜ್ಯ ಬಿಜೆಪಿ ಮುಖಂಡರು ಹಾಗೂ ಮಾಜಿ ಸಚಿವರಾದ ಸನ್ಮಾನ್ಯ ಶ್ರೀ  ಅರವಿಂದ ಲಿಂಬಾವಳಿ, ನಗರ ಮಂಡಲ ಅಧ್ಯಕ್ಷರಾದ ಶ್ರೀ ಮನೋಹರ್ ರೆಡ್ಡಿ ಹಾಗೂ ವರ್ತೂರಿನ ಎಲ್ಲಾ ಬಿಜೆಪಿ ಮುಖಂಡರುಗಳಿಗೆ ಹಾಗೂ ಹಿಂದೂ ಬಾಂಧವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಅನಂತಾನಂತ ಧನ್ಯವಾದಗಳು.




**ಶ್ರೀರಾಮ ತಾರಕ ಜಪ ಯಜ್ಞ ಸಂಚಾಲಕ ವೇ॥ಬ್ರ॥ಡಾ॥ ಭಾನುಪ್ರಕಾಶ್ ಶರ್ಮರವರಿಂದ ಪತ್ರಿಕಾಗೋಷ್ಠಿ**



**ದಿನಾಂಕ 9–11– 23 ರಂದು ಶಿರಶಿಯ ಯೋಗ ಮಂದಿರದಲ್ಲಿ ರಾಮತಾರಕ ಜಪವನ್ನು ಪ್ರಾರಂಭಿಸಲಾಯಿತು. ರಾಜ್ಯ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆ, ಶ್ರೀಪಾದ ರಾಯ್ಸದ್, ಪ್ರಸಾದ ಹೆಗಡೆ, ಎಮ್ ಎಲ್.ಹೆಗಡೆ, ನಾರಾಯಣ ಹೆಗಡೆ, ಎನ್.ಎಸ್, ಭಟ್ ಈ ವೇಳೆ ಉಪಸ್ಥಿತರಿದ್ದರು.**

# ಶ್ರೀರಾಮ ತಾರಕ ಜಪ ಯಜ್ಞ ಯೋಜನೆಗೆ ವಿವಿಧ ಸಂಘ-ಸಂಸ್ಥೆಗಳ ಬೆಂಬಲ

ಶ್ರೀರಾಮ ತಾರಕ ಜಪ ಯಜ್ಞ ಯೋಜನೆಯ ಪ್ರಧಾನ ಸಂಚಾಲಕರಾದ ಡಾ. ಬಿ.ಎಸ್. ರಾಘವೇಂದ್ರ ಭಟ್, ವೇ॥ಬ್ರ॥ ಡಾ. ವಿ. ಭಾನುಪ್ರಕಾಶ್ ಶರ್ಮ ಮತ್ತು ಹರಿಪ್ರಸಾದ್ ಪೆರಿಯಾಪುರವರು ಬೆಂಗಳೂರಿನ ಪ್ರಾತಿನಿಧಿಕ ಸಂಘಟನೆಗಳಾದ ಶ್ರೀ ಅಖಿಲ ಹವ್ಯಕ ಮಹಾಸಭಾ, ಬಡಗನಾಡು ಮಹಾಸಂಘ, ಅಕ್ಷಯ ವಿಪ್ರ ಸಂಘ, ಹೊಯ್ಸಳ ಕರ್ನಾಟಕ ಸಂಘ, ಉಲಚಕಮ್ಮೆ ಮಹಾಸಂಘ ಮುಂತಾದವುಗಳಿಗೆ ಭೇಟಿ ನೀಡಿ ಎಲ್ಲಾ ಸಂಸ್ಥೆಗಳು ತಮ್ಮ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿ, ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಿ ತಿಳಿಸಿದರು. ಈ ಸಂಬಂಧವಾಗಿ ವಿವಿಧ ಸ್ಥಳ ದೇವಸ್ಥಾನಗಳಲ್ಲಿ, ಸಮುದಾಯ ಭವನಗಳಲ್ಲಿ ರಾಮ ತಾರಕ ನಾಮ ಜಪ ಯಜ್ಞವು ವಿಧ್ಯುಕ್ತವಾಗಿ ಆರಂಭಗೊಂಡಿದೆ.



**ಪರಮಪೂಜ್ಯ ಶ್ರೀ ಶ್ರೀ ಶ್ರೀ ಸುಬುದೇಂದ್ರತೀರ್ಥ ಶ್ರೀಗಳು ಹಾಗೂ ಮಹಾಸಭೆಯ ರಾಜ್ಯ ಉಪಾಧ್ಯಕ್ಷ ಮೈಸೂರಿನ ಡಿ.ಟಿ. ಪ್ರಕಾಶ್ ಮತ್ತು ಇತರರು**



**ತುಮಕೂರಿನ ವ್ಯಾಸರಾಯರ ಮಠದಲ್ಲಿ ಶ್ರೀರಾಮ ತಾರಕ ಜಪದಲ್ಲಿ ಪಾಲ್ಗೊಂಡ 150ಕ್ಕೂ ಹೆಚ್ಚು ಮಹಿಳಾ ಸಮೂಹ**



**ತುಮಕೂರಿನಲ್ಲಿ ಶ್ರೀರಾಮ ತಾರಕ ನಾಮ ಜಪದಲ್ಲಿ 150 ಮಂದಿ ಭಾಗವಹಿಸಿದ್ದರು.**



**ತುಮಕೂರಿನ ಶಕ್ತಿ ಮಹಿಳಾ ಸಂಘದ ಸದಸ್ಯರಿಂದ ಶ್ರೀರಾಮ ಜಪ**





**ತುಮಕೂರು ತಾಲ್ಲೂಕು ಹೆಬ್ಬೂರಿನ ಕಾಮಾಕ್ಷಿ ಮಠದಲ್ಲಿ ಮಹಾಸಭಾ ಹಾಗೂ ಜಿಲ್ಲಾ ಬ್ರಾಹ್ಮಣ ಸಭಾದ ಸಹಯೋಗದೊಂದಿಗೆ ವೇದ ಬ್ರಹ್ಮಶ್ರೀ ಸತ್ಯನಾರಾಯಣ ನೇತೃತ್ವದಲ್ಲಿ ರಾಮ ನಾಮ ಜಪ ಆರಂಭಿಸಲಾಯಿತು.**

# ರಾಮತಾರಕ ಜಪಯಜ್ಞ – ಮೈಸೂರು ನಗರದಲ್ಲಿ ಪತ್ರಿಕಾಗೋಷ್ಠಿ








ಇಂದು ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು ಮತ್ತು ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನ ಅರ್ಚಕರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪದಾಧಿಕಾರಿಗಳು ರಾಜ್ಯ ಉಪಾಧ್ಯಕ್ಷ ಡಿ.ಟಿ. ಪ್ರಕಾಶ್, ಸಂಘಟನಾ ಕಾರ್ಯದರ್ಶಿ ರವಿಕುಮಾರ್ (ಸಿಸಿಟಿವಿ) ಮತ್ತು ಮೈಸೂರು ಬ್ರಾಹ್ಮಣ ಸಂಘಧ ಸದಸ್ಯರು ಭೇಟಿಯಾಗಿ ಶತಕೋಟಿ ರಾಮಜಪಕ್ಕೆ ಚಾಲನೆ ನೀಡಲು ವಿನಂತಿಸಿದರು.

# ತಾವರಗೆರೆಯಲ್ಲಿ ಸದಸ್ಯತ್ವ ಅಭಿಯಾನ



ತಾವರಗೇರಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನ ನಡೆಯಿತು. ಸಭೆ ಅಧ್ಯಕ್ಷತೆಯನ್ನು ನರಸಿಂಹಾಚಾರ್ ಜೋಶಿ ವಹಿಸಿದ್ದರು. ಅತಿಥಿಗಳಾಗಿ ಬ್ರಾಹ್ಮಣ ಮಹಾಸಭಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಹನುಮಂತ್‌ರಾವ್ ದೇಶಪಾಂಡೆ, ಜಿಲ್ಲಾ ವಿಪ್ರ ಸಮಾಜದ ಮುಖಂಡರಾದ ವೇಣುಗೋಪಾಲ್ ಆಚಾರ್, ಸುನೀಲ್ ದೇಸಾಯಿ, ಅನಿಲ್ ಕುಲಕರ್ಣಿ, ಅರವಿಂದ್ ಕುಲಕರ್ಣಿ ಭಾಗವಹಿಸಿದ್ದರು.

# ಶ್ರೀರಾಮಚಂದ್ರಾಪುರ ಮಠದಿಂದ ಮಹಿಳಾ ಸಮಾವೇಶಕ್ಕೆ ಆಶೀರ್ವಾದ



ಶ್ರೀ ರಾಮಚಂದ್ರಾಪುರ ಮಠ ಗಿರಿನಗರದಲ್ಲಿ ನಡೆದ ಸಮಾವೇಶದಲ್ಲಿ ಗುರುಗಳು ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರ ಆಶೀರ್ವಾದದೊಂದಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ರಾಜ್ಯ ಸಂಚಾಲಕಿ ಡಾ॥ಶುಭಮಂಗಳ ಸುನಿಲ್ ಭಾಗವಹಿಸಿ ನೆರೆದಿದ್ದ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿ ರಾಜ್ಯ ಮಹಿಳಾ ಸಮಾವೇಶದ ಬಗ್ಗೆ, ಮಹಿಳಾ ವಿಭಾಗದ ಕಾರ್ಯ ಚಟುವಟಿಕೆಗಳ ಬಗ್ಗೆ ಹಾಗೂ ರಾಜ್ಯ ಮಟ್ಟದ ಭಜನಾ ಸ್ಪರ್ಧೆಯ ಬಗ್ಗೆ ವಿವರವಾಗಿ ತಿಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು, ಹೆಚ್ಚಿನ ಮಹಿಳೆಯರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಮಹಿಳಾ ಸಮಾವೇಶದ ಬಗ್ಗೆ ಹೆಚ್ಚಿನ ಪ್ರಚಾರ ಮಾಡಲಾಯಿತು, ಹಾಗು ಅಲ್ಲಿ ಉಪಸ್ಥಿತರಿದ್ದ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು ಪೂರ್ತಿ ಬೆಂಬಲ ಕೊಡುವುದಾಗಿ ತಿಳಿಸಿದರು.

# ಸತ್ಸಂಗ ಭಜನಾ ಮಂಡಳಿ ಸಭಾ

## ಮಹಿಳಾ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ







ಅಖಿಲ ಕರ್ನಾಟಕ ಸತ್ಸಂಗ ಭಜನಾ ಮಹಾಮಂಡಳಿ ಸಭಾವತಿಯಿಂದ ಇಂದು ನಡೆದ ಭಜನಾ ಸ್ಪರ್ಧೆ ಕಾರ್ಯದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ರಾಜ್ಯ ಸಂಚಾಲಕಿ ಡಾ॥ಶುಭಮಂಗಳ ಸುನಿಲ್ ಭಾಗವಹಿಸಿ ನೆರೆದಿದ್ದ ಭಜನಾ ಮಂಡಳಿಯ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿ ರಾಜ್ಯ ಮಹಿಳಾ ಸಮಾವೇಶದ ಬಗ್ಗೆ, ಮಹಿಳಾ ವಿಭಾಗದ ಕಾರ್ಯ ಚಟುವಟಿಕೆಗಳ ಬಗ್ಗೆ ಹಾಗೂ ರಾಜ್ಯ ಮಟ್ಟದ ಭಜನಾ ಸ್ಪರ್ಧೆಯ ಬಗ್ಗೆ ವಿವರವಾಗಿ ತಿಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು, ಹೆಚ್ಚಿನ ಮಹಿಳೆಯರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಮಹಿಳಾ ಸಮಾವೇಶದ ಬಗ್ಗೆ ಹೆಚ್ಚಿನ ಮಾಹಿತಿ ನೀಡಲಾಯಿತು, ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಕೆ.ಎನ್. ಛಾಯಾಪತಿ, ಸಂಘಟನಾ ಕಾರ್ಯದರ್ಶಿ ರಥಯಾತ್ರೆ ಸುರೇಶ್, ಸಹ ಕಾರ್ಯದರ್ಶಿ ಪರಿಸರ ಚಂದ್ರಶೇಖರ, ಅಖಿಲ ಕರ್ನಾಟಕ ಸತ್ಸಂಗ ಭಜನಾ ಮಹಾ ಮಂಡಳಿ ಸಭಾದ ಅಧ್ಯಕ್ಷ ಡಾ. ಕೆ.ವಿ. ಮುರಳೀಧರ ಶರ್ಮ, ಮಲ್ಲಿಕಾರ್ಜುನ, ಆರ್.ಎಸ್. ಎಸ್. ನ ಹಿರಿಯರು, ಭಜನಾ ಮಂಡಳಿಯ ಮಹಿಳೆಯರು ಭಾಗವಹಿಸಿದ್ದರು,

# ವಿಪ್ರ ಮಹಿಳಾ ಸಮಾವೇಶಕ್ಕೆ ನಿರ್ಮಲಾ ಸೀತಾರಾಮರವರಿಗೆ ಆಹ್ವಾನ

2024 ಜನವರಿ 6 ಮತ್ತು 7 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ನಡೆಯಲಿರುವ ಮಹಿಳಾ ಸಮಾವೇಶದ ಉದ್ಘಾಟನಾ ಕಾರ್ಯಕ್ರಮಕ್ಕೆ ಕೇಂದ್ರ ಸಚಿವರಾದ ಶ್ರೀಮತಿ ನಿರ್ವಲಾ ಸೀತಾರಾಮನ್ ಅವರನ್ನು ಆಹ್ವಾನಿಸಲಾಯಿತು. ಮಹಿಳಾ ಸಮಾವೇಶದ ಉದ್ಘಾಟನಾ ಕಾರ್ಯಕ್ರಮಕ್ಕೆ ಬರುವುದಾಗಿ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರು ತಿಳಿಸಿದರು. ಈ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ಪ್ರತಿಷ್ಠಾಪನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೆಡೆ ರಾಮ ಜಪ ಮತ್ತು ರಾಮ ತಾರಕ ಹೋಮವನ್ನು ಆಯೋಜನೆ ಮಾಡಿರುವುದನ್ನು ತಿಳಿದು ಸಂತೋಷ ವ್ಯಕ್ತಪಡಿಸಿದರು



ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರೊಡನೆ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ ಮತ್ತು ಶ್ರೀಮತಿ ಶಕುಂತಲಾ ಅಯ್ಯರ್ ಅವರು ಉಪಸ್ಥಿತರಿದ್ದರು.


**ಜಾಹಿರಾತು**

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
ದೂರವಾಣಿ : 2672 2267, 98866 55755

## ಮೈಸೂರಲ್ಲಿ ರಾಮ ತಾರಕ ಯಜ್ಞಕ್ಕೆ ಚಾಲನೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಮೈಸೂರು ನಾಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಸಹಯೋಗದೊಂದಿಗೆ ಅಯೋಧ್ಯೆಯ ಶ್ರೀರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನಾ ಅಂಗವಾಗಿ ಶತಕೋಟಿ ರಾಮತಾರಕ ನಾಮಜಪ ಮತ್ತು ಶ್ರೀರಾಮ ತಾರಕ ಮಹಾಯಾಗಕ್ಕೆ ಮೈಸೂರಿನ ಕೃಷ್ಣಮೂರ್ತಿಪುರಂ ರಾಮಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರು ಹಾಗೂ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮ ಸಂಘದ ಅಧ್ಯಕ್ಷರಾದ ಶ್ರೀ ಡಿಟಿ ಪ್ರಕಾಶ್ ಹಾಗೂ ವೇಟಟ ಬ್ರಟಟ ಶ್ರೀ ಭಾನುಪ್ರಕಾಶ್ ಶರ್ಮಾ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮೈಸೂರು ಗ್ರಾಮಾಂತರ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಗೋಪಾಲ್ ರಾವ್, ಮೈಸೂರು ವಿಪ್ರ ಮಹಿಳಾ ಸಂಘದ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ,ಮೈಸೂರು ಹೊಯ್ಸಳ ಕರ್ನಾಟಕ ಸಂಘದ ಸಹಕಾರ್ಯದರ್ಶಿಗಳಾದ ಎಸ್ ರಂಗನಾಥ ಮತ್ತು ಹಲವು ಸಂಘ-ಸಂಸ್ಥೆಗಳ ಪದಾಧಿಕಾರಿಗಳಾದ ಹರೀಶ್, ಮುಳ್ಳೂರು ಸುರೇಶ್ ,ನಾಗೇಂದ್ರ ಬಾಬು ,ಸುಚೀಂದ್ರ, ಚಕ್ರಪಾಣಿ, ಪಣೇಶ್, ಜ್ಯೋತಿ, ನಾಗಶ್ರೀ, ಭಾಗ್ಯಶ್ರೀ, ಸರೋಜಾ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

## ಹಾಸನದಲ್ಲಿ ಶತಕೋಟಿ ಶ್ರೀ ರಾಮ ತಾರಕ ಜಪಯಜ್ಞಕ್ಕೆ ಚಾಲನೆ



ಹಾಸನ ನಗರ ಬ್ರಾಹ್ಮಣ ಸಭಾ ಸಬಾದಲ್ಲಿ ರಾಮ ನಾಮ ಜಪ ಯಜ್ಞಕ್ಕೆ ಚಾಲನೆಯನ್ನು ನೀಡಲಾಯಿತು ಇದರಲ್ಲಿ ವಲಯ ಉಪಾಧ್ಯಕ್ಷರಾದ ಟಿ ಹೆಚ್ ಚಂದ್ರಶೇಖರ್ ಮತ್ತು ನಗರ ಬ್ರಾಹ್ಮಣ ಸಭಾಧ್ಯಕ್ಷರಾದ ಪಿ ಎಸ್ ವೆಂಕಟೇಶ್ ಮತ್ತು ಬ್ರಾಹ್ಮಣ ಸಮಾಜ ಎಲ್ಲಾ ನಿರ್ದೇಶಕರುಗಳು ಭಾಗವಹಿಸಿ ಜಪಾಯಜ್ಞೆಕ್ಕೆ ಚಾಲನೆ ನೀಡುವುದಾಗಿ ಭರವಸೆ ನೀಡಿದರು

## ಕರ್ನಾಟಕ ರಾಜ್ಯ ಆರ್ಯ ವೈಶ್ಯ ಮಹಾಸಭಾ ವತಿಯಿಂದ ಶತಕೋಟಿ ಶ್ರೀ ರಾಮ ತಾರಕ ಜಪಯಜ್ಞ

ಶತಕೋಟಿ ಶ್ರೀ ರಾಮ ತಾರಕ ಜಪಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗಕ್ಕೆ ಬ್ರಾಹ್ಮಣ ಮಹಾಸಭೆಯೊಂದಿಗೆ ಕರ್ನಾಟಕ ರಾಜ್ಯ ಆರ್ಯ ವೈಶ್ಯ ಮಹಾಸಭೆಯ ಸಹಕಾರ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ, ಲೋಕಕಲ್ಯಾಣಾರ್ಥವಾಗಿ ಮತ್ತು ದೇಶದ ಸುಭಿಕ್ಷೆಗಾಗಿ ಶ್ರೀ ಅಶೋಕ್ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ ಯಾವುದೇ ಜಾತಿ ಭೇದವಿಲ್ಲದೆ ಹಮ್ಮಿಕೊಂಡಿರುವ ಶತಕೋಟಿ ಶ್ರೀ ರಾಮ ತಾರಕ ಜಪಯಜ್ಞ ಮತ್ತು ಶ್ರೀರಾಮ ತಾರಕ ಮಹಾಯಾಗ ಕಾರ್ಯಕ್ರಮದ ಅಂಗವಾಗಿ ಮಹಾ ಸಭೆಯ ಉಪಾಧ್ಯಕ್ಷರು ಹಾಗೂ ಕಾರ್ಯಕ್ರಮದ ಪ್ರಧಾನ ಸಂಚಾಲಕರು ಆದ ಶ್ರೀ ಡಾ. ಬಿ ಎಸ್ ರಾಘವೇಂದ್ರ ಭಟ್ ರವರು *ಕರ್ನಾಟಕ ರಾಜ್ಯ ಆರ್ಯ ವೈಶ್ಯ ಮಹಾಸಭೆಯ ಅಧ್ಯಕ್ಷರಾದ ಆರ್ ಪಿ ರವಿಶಂಕರ್* ಅವರನ್ನು ಭೇಟಿ ಕಾರ್ಯಕ್ರಮದ ಸಂಪೂರ್ಣ ವಿವರಣೆ ನೀಡಿದರು. ಆರ್ಯವೈಶ್ಯ ಮಹಾ ಸಭೆಯು ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಆರ್ಯವೈಶ್ಯ ಮಹಾಸಭೆಯ ಕಾರ್ಯದರ್ಶಿಗಳಾದ ಕೆ ಆರ್ ಕೃಷ್ಣ ಅವರು ಸಹ ಉಪಸ್ಥಿತರಿದ್ದರು

# ಶಿವಮೊಗ್ಗ ನಗರದಲ್ಲಿ ನಡೆದ ರಾಮ ಜಪ ಯಜ್ಞದ ಪೂರ್ವಭಾವಿ ಸಭೆ




**ಸಭೆಯಲ್ಲಿ 80 ಜನ ವಿವಿಧ ಸಮಾಜದ ಪ್ರಮುಖರು ಭಾಗವಹಿಸಿದ್ದರು. ನಗರದಲ್ಲಿ 10 ಕೋಟಿ ಜಪ ಮಾಡಲು ತೀರ್ಮಾನಿಸಾಗಿದೆ.**

ಅಯೋಧ್ಯಾ ಮಹಾಕ್ಷೇತದಲ್ಲಿ ನೂತನವಾಗಿ ನಿರ್ಮಾಣ ಗೊಂಡಿರುವ ಭವ್ಯವಾದ ರಾಮ ಮಂದಿರದಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ಸ್ವಾಮಿಯ ಪುನಃಪ್ರತಿಷ್ಠಾಪನೆ ಮತ್ತು ಪ್ರತಿಷ್ಠಾ ಕುಂಭಾಭಿಷೇಕವನ್ನು ವೀಕ್ಷಿಸಿ ಕಣ್ತುಂಬಿಕೊಳ್ಳುವ ಸೌಭಾಗ್ಯ ನಮಗೆ ದೊರೆಯುತ್ತಿರುವುದು ನಮ್ಮ ಪುಣ್ಯವೇ ಸರಿ.

2024ನೇ ಜನವರಿ 22, ಸೋಮವಾರ ನಡೆರಲಿರುವ ಈ ಮಹತ್ಕಾರ್ಯಕ್ಕೆ ಪೂರ್ವಭಾವಿಯಾಗಿ **"ಶತಕೋಟಿ ರಾಮತಾರಕ ಜಪ ಯಜ್ಞ"**ವನ್ನು ದಿನಾಂಕ 14–11–2023 ಮಂಗಳವಾರದಿಂದ ಆರಂಭಿಸಿ, ಪ್ರತಿಯೋರ್ವ ಆಸ್ತಿಕ ಬಂಧುಗಳೂ ಸಹಾ ತಮ್ಮ ತಮ್ಮ ಮನೆಯಲ್ಲಿ "ಶ್ರೀ ರಾಮ ಜಯರಾಮ ಜಯ ಜಯ ರಾಮ" ಎಂಬ ಅತ್ಯಂತ ಮಹಿಮಾನ್ವಿತವಾದ ರಾಮ ತಾರಕ ಮಹಾ ಮಂತ್ರವನ್ನು ಜಪಿಸಿ, ತಾವು ಮಾಡಿದ ಜಪ ಸ0ಖ್ಯೆಯನ್ನು ತಿಳಿಸಬೇಕೆಂದು ವಿನಂತಿಸಲಾಗಿದೆ.

ಲೋಕಕಲ್ಯಾಣಾರ್ಥವಾಗಿ ನಡೆಯುತ್ತಿರುವ ಈ ಪರಮ ಪವಿತ್ರ ಮ0ಂಗಳದಾಯಕವಾದ ಶ್ರೀ ರಾಮ ತಾರಕ ಮಂತ್ರವನ್ನು ಜಪಿಸಿ ಎಲ್ಲರೂ ಕೃತಾರ್ಥರಾಗೋಣ. ಈ ಪುಣ್ಯಪ್ರದ ಕಾರ್ಯದಲ್ಲಿ ನಾಡಿನ ಸರ್ವರೂ ಭಾಗವಹಿಸಿ ಶ್ರೇಯೋಭಾಗಿಗಳಾಗಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇವೆ.

**"ಲಾಂಕಾಃ ನಮನ್ವಾ ಸುಖನೊಂ ಭವಂತು"**
**"ಜೈ ಶ್ರೀರಾಮ್"**

ಶಪಶೋಜಟಣ ರಾಮ ತಾರಕ ಜಪ ಯಜ್ಞ ಸಮಿಡಿ. ಶಿವಮೊಗ್ಗ

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ**

ಶ್ರೀ ವಾಸುದೇವ್ : 94490 88899
ಶ್ರೀ ಎನ್.ಡಿ. ಸತೀಶ್ : 98440 95558
ಶ್ರೀ ಶಬರೀಶ್ ಕಣ್ಣನ್ : 99649 73793
ಶ್ರೀ ರಮೇಶ್ ಬಾಬು ; 97429 96073
ಶ್ರೀಮತಿ ಸುನೀತಮ್ಮ : 63601 53252
ಶ್ರೀಮತಿ ಶಾರದಕ್ಕ : 90356 71319
ಶ್ರೀ ಆನಂದರಾವ್ ಜಾಧವ್ : 94480 18234

## ಶಿರಸಿ ತಾಲೂಕಿನ ಪ್ರತಿಷ್ಟಿತ ಎಮ್.ಇ. ಎಸ್.ಪಿ.ಯು. ಕಾಲೇಜಿನಲ್ಲಿ ಶ್ರೀ ರಾಮತಾರಕ ಜಪ



ಶಿರಸಿ ತಾಲೂಕಿನ ಪ್ರತಿಷ್ಟಿತ ಎಮ್.ಇ. ಎಸ್.ಪಿ.ಯು. ಕಾಲೇಜಿನಲ್ಲಿ ಶ್ರೀ ರಾಮತಾರಕ ಜಪವನ್ನು ಪ್ರಾರಂಭಿಸಲಾಯಿತು. ಎ.ಕೆ.ಬಿ.ಎಮ್.ಎಸ್.ನ ಸಂಘಟನಾ ಕಾರ್ಯದರ್ಶಿ ಶ್ರೀ ಪಾದ ರಾಯ್ಸದ್, ರಾಮತಾರಕ ಜಪದ ಬಗ್ಗೆಹಾಗೂ ಹವನ ಬಗ್ಗೆ ತಿಳಿಸಿದರು.ಇ ವೇಳೆ ಕಾಲೇಜಿನ ಪ್ರಾಂಶುಪಾಲರಾದ ಶ್ರಿ ರಾಜೇಂದ್ರ ಹೆಗಡೆಹಾಗೂ ಎಲ್ಲಾ ಉಪನ್ಯಾಸಕರು ಹಾಜರಿದ್ದರು. ವಿಶೇಷ ವೆಂದರೆ ಕಾಲೇಜಿನ ಹಿಂದಿ ಉಪನ್ಯಾಸಕರಾದ ಡಾ. ಶ್ರೀಮತಿ ಹಸಿನಾ.ಜಿ.ಸಿ,ಮತ್ತು ಪ್ರೋ. ಮನೋಜ ಕುಮಾರ ಪಿಂಟೋ.ರವರು ಹೆಚ್ಚಿನ ಕಾಳಜಿ ವಹಿಸಿ ಎಲ್ಲಾ ಕ್ಲಾಸಿನಲ್ಲಿಯೂ ಜಪ ನಡೆಯುವ ವ್ಯವಸ್ಥೆ ಮಾಡಿಕೊಟ್ಟು ಎಲ್ಲರ ಗಮನ ಸೆಳದರು.

## ಶಿರಶಿ ತಾಲೂಕಿನ ತಂಗುಂಡಿ ಸಿದ್ದಿವಿನಾಯಕ ದೇವಸ್ಥಾನ




ನಿನ್ನೆ ಶಿರಶಿ ತಾಲೂಕಿನ ತಂಗುಂಡಿ ಸಿದ್ದಿವಿನಾಯಕ ದೇವಸ್ಥಾನದಲ್ಲಿ ಶ್ರೀ ರಾಮ ತಾರಕ ಜಪವನ್ನು ಪ್ರಾರಂಭಿಸಿದರು. ಶ್ರೀಮತಿ ಕುಸುಮಾ ಹೆಗಡೆ, ಶ್ರೀಮತಿ ನೇತ್ರಾವತಿ ಹೆಗಡೆ ನೇತ್ರತ್ವ ವಹಿಸಿದ್ದರು.

## ಮಹಿಳಾ ಸಮಾವೇಶಕ್ಕೆ ದೇಣಿಗೆ



ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಛಾಯಾಪತಿ ಅವರು ತೃತೀಯ ವಿಪ್ರ ಮಹಿಳಾ ಸಮ್ಮೇಳನಕ್ಕೆ ತಮ್ಮ ದೇಣಿಗೆಯನ್ನು ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರಿಗೆ ಹಸ್ತಾತಂತಿಸಿದರು, ಈ ಸಂದರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರು, ಹಾಗೂ ಮಹಿಳಾ ಸಮ್ಮೇಳನದ ಆರ್ಥಿಕ ಸಮಿತಿಯ ಮುಖ್ಯಸ್ಥರಾದ ಶ್ರೀ ಸುಧಾಕರ ಬಾಬು ಅವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಇನ್ನಷ್ಟು ದೇಣಿಗೆಯನ್ನು ಸಂಗ್ರಹಿಸಿ ಕೊಡುವುದಾಗಿ ಶ್ರೀ ಛಾಯಾಪತಿ ಅವರು ಭರವಸೆಯನ್ನು ನೀಡಿದರು.

## ಮಹಿಳಾ ಸಮಾವೇಶ – ಪೂರ್ವಭಾವಿ ಸಭೆ



ದಿನಾಂಕ 33.43.2024 ರಂದು ಬೆಂಗಳೂರಿನ ಶಂಕರಪುರದಲ್ಲಿರುವ ಹಿರಿಯ ವಕೀಲರಾದ ವೈ.ಎ. ಸುಧಾಕರ್ ಬಾಬುರವರ ಕಚೇರಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ದಿನಾಂಕ : 6 8 7 ಜನವರಿ 2024 ರಂದು ಬೆಂಗಳೂರಿನ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಆಯೋಜಿಸುತ್ತಿರುವ ರಾಜ್ಯಮಟ್ಟದ ಮಹಿಳಾ ಸಮ್ಮೆಳನ ಅಭಿಜಾತೆ 2024 ಪೂರ್ವಭಾವಿ ಸಭೆಯನ್ನು ನಡೆಸಲಾಯಿತು. ವೈ.ಎ. ಸುಧಾಕರ್ ಬಾಬು, ಕಾರ್ತಿಕ್ ಬಾಪಟ್, ಶುಭ ಮಂಗಳ, ಬಿ.ಕೆ. ಪ್ರಕಾಶ್ ಭಾರದ್ವಾಜ್, ಶ್ವೇತಾ ಹಾಗೂ ಪ್ರಭಾಕರ್ ಅವರು ಉಪಸ್ಥಿತರಿದ್ದರು.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ದಕ್ಷಿಣ ವಲಯ ಮಹಿಳಾ ವಿಭಾಗ ಪದ್ಮನಾಭ ನಗರದ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಹೂವಿನ ಮಂಟಪದಲ್ಲಿ ತುಳಸಿ ಪೂಜೆ ಕಾರ್ಯಕ್ರಮ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ದಕ್ಷಿಣ ವಲಯ ಮಹಿಳಾ ವಿಭಾಗದ ಸಂಚಾಲಕಿ ಸುಮಂಗಲ ಎಸ್ ಆಚಾರ್ ರವರ ನೇತೃತ್ವದಲ್ಲಿ 20–11–2023 ನೇ ಸೋಮವಾರ ಸಾಯಂಕಾಲ ಪದ್ಮನಾಭ ನಗರದ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಹೂವಿನ ಮಂಟಪದಲ್ಲಿ ತುಳಸಿ ಪೂಜೆಯನ್ನು ಹಾಗೂ ಮಹಿಳಾ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆಸಲಾಯಿತು. ಇಲ್ಲಿ ತೌಳವಮಾಧ್ವ ಒಕ್ಕೂಟದ ಸದಸ್ಯರು ನಡೆಸಿದ ತುಳಸಿ ಸಂಕೀರ್ತನೆ ವಿಶೇಷವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಈ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀಯುತ ರಾಘವೇಂದ್ರ ಭಟ್, ಸಂಘಟನಾ ಕಾರ್ಯದರ್ಶಿ ಅರುಣ್ ಹಿರಿಯಣ್ಣರವರು, ಸುಬ್ರಹ್ಮಣ್ಯರವರು ಹಾಗೂ ಇತರ ಗಣ್ಯರು ಭಾಗವಹಿಸಿ ಮೆಚ್ಚುಗೆ ಸೂಚಿಸಿದರು. ಈ ಕಾರ್ಯಕ್ರಮದಲ್ಲಿ ರಾಘವೇಂದ್ರ ಭಟ್ ರವರು, ಜನವರಿ ತಾ 6 ಮತ್ತು 7 ರಂದು ನಡೆಯಲಿರುವ ಮಹಿಳಾ ಸಮಾವೇಶ ಹಾಗೂ ಶತಕೋಟಿ ರಾಮತಾರಕ ನಾಮಜಪ ಮಹಾ ಯಜ್ಞದ ಸಂಪೂರ್ಣ ವಿವರಗಳನ್ನು ತಿಳಿಸಿ ಎಲ್ಲರೂ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಲು ಅಹ್ವಾನಿಸಿದರು.



## ಬೆಳಗಾವಿ ಜಿಲ್ಲಾ ವಿಪ್ರ ವಧು-ವರರ ಸಮಾವೇಶ




ಬೆಳಗಾವಿ ಜಿಲ್ಲಾ ವಧು-ವರರ ಸಮಾವೇಶದ ಭಿತ್ತಿಪತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರೂ ಹಾಗೂ ನಿವೃತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್ ರವರಾದ ಶ್ರೀ ಭಾಸ್ಕರರಾವ್ ಐಪಿಎಸ್, ಬೆಳಗಾವಿ ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಎಸ್.ಎಂ. ಕುಲಕರ್ಣಿ, ಮಹಾಸಭಾ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಪ್ರಿಯ ಪುರಾಣಿಕ್ ಮತ್ತು ಮಹಿಳಾ ವಿಭಾಗದ ಸಹ ಸಂಚಾಲಕಿ ಶ್ರೀಮತಿ ಅನುಶ್ರೀ ಹಾಗೂ ಇತರರು ಭಾಗವಹಿಸಿದ್ದರು.



## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.

ದೂರವಾಣಿ : 080-26770066/26771695

ಸಮಯ : ಸಂಜೆ 5.00 ರಿಂದ 7.00 ರವರೆಗೆ

ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902

**ಸದಸ್ಯರು**

ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245


## ಬದರಿನಾಥ ಯಾತ್ರಾ ಸಂಘ, ಬೆಳಗಾವಿ/ಬೆಂಗಳೂರು ಇವರು ಆಯೋಜಿಸಿದ

**ಭಾರತದಲ್ಲಿ ಹರಿಯುವ ಪವಿತ್ರ, ಶ್ರೀ ವೈತರಣಿ ಮತ್ತು ಗಂಡಕಿ ನದಿ ಸ್ನಾನದೊಂದಿಗೆ ಉತ್ತರ ಭಾರತ ಯಾತ್ರೆ,**

**ಯಾತ್ರಾ ಸ್ಥಳಗಳು :** ವಿಜಯವಾಡಾ, ಜಗನ್ನಾಥಪುರಿ, ಗಯಾ, ಕಾಶಿ, ಪ್ರಯಾಗ (ಅಲಹಾಬಾದ), ಅಯೋಧ್ಯಾ, ನೈಮಿಷಾರಣ್ಯ, ಮಥುರಾ, ಹರಿದ್ವಾರ, ವೃಂದಾವನ, ಶ್ರೀ ಬದರಿನಾಥ, ಶ್ರೀ ಕೇದಾರನಾಥ (ಇಚ್ಛುಕರಿಗೆ ಮಾತ್ರ), ಪುಷ್ಕರ, ಮಾತೃಗಯಾ, ದ್ವಾರಕಾ, ಸೋಮನಾಥ, ಯುನಿಟಿ ಆಫ್ ಸ್ಟ್ಯಾಚ್ಯು ಪುಾಯಿಚಾ

★ **ಶ್ರೀ ವೈತರಣಿ ನದಿ ತೀರದಲ್ಲಿ ಗೋದಾನ, ಪಿಂಡಪ್ರದಾನ ಹಾಗು ಗಂಡಕಿ ನದಿ ತೀರದಲ್ಲಿ ತರ್ಪಣದ ವ್ಯವಸ್ಥೆ ಕಲ್ಪಿಸಲಾಗಿದೆ.**

**ಯಾತ್ರಾ ದಿನಾಂಕ : ಏಪ್ರಿಲ್ 2024 ರಿಂದ ಮೇ 2024**
**ಸ್ಲೀಪರ್ ಕ್ಲಾಸ್ ರೂ. 45000/- ಥರ್ಡ ಎ.ಸಿ. 58,000/-**
**ಬುಕಿಂಗ್ ಕೊನೆ ದಿನಾಂಕ : ಡಿಸೆಂಬರ್ 2023**

ಸೂಚನೆ : **ಬೆಂಗಳೂರು-ಬೆಳಗಾವಿಯಿಂದ ಪಿಕಪ್ ಡ್ರಾಪ್ ವ್ಯವಸ್ಥೆಯೊಂದಿಗೆ**
ಎರಡು ಬಾರಿ ಚಹಾ-ಕಾಫಿ, ತೀರ್ಥಪ್ರಸಾದ, ರಾತ್ರಿ ಉಪಹಾರ, ಆಟೋ-ಬೋಟಿಂಗಸಹಿತ.

**ಮಾಹಿತಿಗಾಗಿ ಸಂಪರ್ಕಿಸಿ : ಬೆಳಗಾವಿ - 9448347054, ಬೆಂಗಳೂರು - 7259423165**


## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿ.

# ಬ್ರಾಹ್ಮಣ ಸಂಘ, ಟಿ. ದಾಸರಹಳ್ಳಿ – ಉಚಿತ ಆರೋಗ್ಯ ತಪಾಸಣಾ ಶಿಬಿರ



ದಿನಾಂಕ 08.10.2023ರಂದು ಬ್ರಾಹ್ಮಣ ಸಂಘ ಟಿ. ದಾಸರಹಳ್ಳಿ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಹಯೋಗದೊಂದಿಗೆ ಸಂಘದ ಸದಸ್ಯರು ಹಾಗೂ ಸದಸ್ಯ ಬಂಧುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರಕ್ಕೆ ಆಗಮಿಸಿದ ವೈದ್ಯರು ಮತ್ತು ಅವರ ಸಿಬ್ಬಂದಿ ವರ್ಗದವರನ್ನು ಖಜಾಂಚಿ ಎನ್. ಚಂದ್ರಶೇಖರ್ ಸ್ವಾಗತಿಸಿದರು. ಡಾ॥ ಪ್ರಸನ್ನ ಮತ್ತು ಸಂಘದ ಅಧ್ಯಕ್ಷರಾದ ಎಸ್.ಜಿ. ಶ್ರೀಧರಮೂರ್ತಿ ಹಾಗೂ ಪದಾಧಿಕಾರಿಗಳು ಜ್ಯೋತಿ ಬೆಳಗಿಸುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ಶಿಬಿರವು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಮತ್ತು ಸಂಘಟನಾ ಕಾರ್ಯದರ್ಶಿ ಶ್ರೀ ವೆಂಕಟೇಶ್ ದ್ವಾರಕನಾಥ್‌ರವರ ಮಾರ್ಗದರ್ಶನದಲ್ಲಿ ನಡೆಯಿತು. ಶಿಬಿರದಲ್ಲಿ ಗೊರಗುಂಟೆ ಪಾಳ್ಯದಲ್ಲಿರುವ ಪೀಪಲ್ಸ್ ಟ್ರೀ ಆಸ್ಪತ್ರೆಯ ಡಾ॥ ಪ್ರಸನ್ನ, ಜನರಲ್ ಫಿಜಿಷಿಯನ್ ಹಾಗೂ ಹೃದಯತಜ್ಞರು ಮತ್ತು ಅವರ ಸಿಬ್ಬಂದಿಯವರಿಂದ ಬಿ.ಪಿ., ಸಕ್ಕರೆ ಕಾಯಿಲೆ, ಮಧುಮೇಹ. ಮುಂತಾದ ಪರೀಕ್ಷೆಗಳನ್ನು ನಡೆಸಲಾಯಿತು. ಈ ತಪಾಸಣೆಯ ನೇತೃತ್ವವನ್ನು ಡಾ॥ ಪ್ರಸನ್ನರವರು ವಹಿಸಿಕೊಂಡು ಚೆನ್ನಾಗಿ ನಡೆಸಿಕೊಟ್ಟರು. ನಿರಾಮಯಿ ಹೆಲ್ತ್ ಅನಾಲಿಸ್ಟಿಕ್ ಪ್ರೈ ಲಿ, ನವರು ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಪರೀಕ್ಷೆಯನ್ನು ನಡೆಸಿಕೊಟ್ಟಿರುತ್ತಾರೆ. ದಿವ್ಯ ದೃಷ್ಠಿ ಕಣ್ಣಿನ ಆಸ್ಪತ್ರೆಯ ತಜ್ಞವೈದ್ಯರಾದ ಡಾ॥ ಪ್ರಭಾ ಮತ್ತು ತಂಡದವರ ನೇತೃತ್ವದಲ್ಲಿ ಕಣ್ಣಿನ ತಪಾಸಣೆಯನ್ನು ನಡೆಸಿ, ರಿಯಾಯತಿ ದರದಲ್ಲಿ ಕನ್ನಡಕಗಳನ್ನು ನೀಡುವ ವ್ಯವಸ್ಥೆ ಮಾಡಿದ್ದರು. ಸುಮಾರು 100 ಮಂದಿ ಶಿಬಿರದ ಲಾಭ ಪಡೆದಿರುತ್ತಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಶಿಬಿರದಲ್ಲಿ ಭಾಗವಹಿಸಿದ ಡಾ॥ ಪ್ರಸನ್ನ ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೆ ಸಂಘದ ಪರವಾಗಿ ಶಾಲು ಹೊದಿಸಿ, ಗೌರವಿಸಿ ಧನ್ಯವಾದಗಳನ್ನು ಅರ್ಪಿಸಲಾಯಿತು. ಶಿಬಿರ ಯಶಸ್ವಿಯಾಗಲು ಸಂಘದ ಸದಸ್ಯರೆಲ್ಲರಿಗೂ ಹಾಗೂ ಸಂಘದ ಕಾರ್ಯಕಾರಿಣಿ ಮಂಡಳಿಯವರಿಗೂ ಧನ್ಯವಾದಗಳನ್ನು ತಿಳಿಸಿ, ಸಂಘದ ಜಂಟಿ ಕಾರ್ಯದರ್ಶಿ ಟಿ.ಕೆ. ಮಂಜುನಾಥ್‌ರವರ ವಂದನಾರ್ಪಣೆಯೊಂದಿಗೆ ಶಿಬಿರ ಮುಕ್ತಾಯ– –ವಾಯಿತು. ಶಿಬಿರಕ್ಕೆ ಆಗಮಿಸಿದ ಎಲ್ಲರಿಗೂ ಉಪಾಹಾರ ಮತ್ತು ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತು.



# ಗಾಯತ್ರಿ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಗಾಯತ್ರಿ ಭವನದಲ್ಲಿ ಭಾನುವಾರ 26.11.2023 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ "ಉಚಿತ ಆರೋಗ್ಯ ತಪಾಸಣಾ ಶಿಬಿರ" ವನ್ನು ಆಯೋಜಿಸಲಾಗಿತ್ತು. ಖ್ಯಾತ ಶಸ್ತ್ರಕ್ರಿಯೆ ತಜ್ಞರಾದ ಡಾ॥ ಮುರಳೀಧರ್, ಸ್ತ್ರೀರೋಗ ತಜ್ಞರಾದ ಡಾ। ಚಂದ್ರಿಕಾ ಮತ್ತು ಮೂತ್ರಶಾಸ್ತ್ರಜ್ಞರಾದ ಡಾ॥ ಸೂರಜ್ ಮುರಳೀಧರ್, ನರಮನೋತಜ್ಞರಾದ ಡಾ॥ ಕಾರ್ತಿಕ್ ಕಶ್ಯಪ್ ಅವರು ಸಮಾಲೋಚನೆ ಹಾಗೂ ತಪಾಸಣೆ ನಡೆಸಿದರು. ಹಲವಾರು ವಿಪ್ರಬಂಧುಗಳು ಈ ಶಿಬಿರದ ಪ್ರಯೋಜನ ಪಡೆದುಕೊಂಡರು.

# ಗಾಯತ್ರಿ ಭವನದಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ




ದಿನಾಂಕ 01.11.2023 ಬುಧವಾರದಂದು ಭಾರತದ ಅತಿ ಪ್ರತಿಷ್ಠಿತ ಕ್ಯಾನ್ಸರ್ ಸಂಸ್ಥೆಗೆ ಸೇರಿದ ಶ್ರೀ ಶಂಕರ ನ್ಯಾಷನಲ್ ಸೆಂಟರ್ ಫಾರ್ ಕ್ಯಾನ್ಸರ್ ಪ್ರಿವೆಷನ್ ಅಂಡ್ ರಿಸರ್ಚ್ ವತಿಯಿಂದ ಗಾಯತ್ರಿ ಭವನದಲ್ಲಿ ಉಚಿತವಾಗಿ "ಸ್ತನ ಕ್ಯಾನ್ಸರ್ ಮತ್ತು ಗರ್ಭಕೋಶ ಕ್ಯಾನ್ಸರ್ ತಪಾಸಣಾ ಶಿಬಿರ"ವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಆರೋಗ್ಯ ಸೇವೆಗಳ ವಿಭಾಗ ಹಾಗೂ ಮಹಿಳಾ ವಿಭಾಗದಿಂದ ಏರ್ಪಡಿಸಲಾಗಿತ್ತು. ಸದರಿ ಶಿಬಿರವು ಮಧ್ಯಾಹ್ನ 2.00 ಗಂಟೆಯವರೆಗೂ ಬಹಳ ಅಚ್ಚುಕಟ್ಟಾಗಿ ನಡೆದು ಹಲವಾರು ಮಹಿಳೆಯರು ಶಿಬಿರದ ಪ್ರಯೋಜನವನ್ನು ಪಡೆದುಕೊಂಡು ಶಿಬಿರದಲ್ಲಿ ಸೇವೆಯನ್ನು ಸಲ್ಲಿಸಿದ್ದ ಡಾ॥ ಸಂಚಿತ ಮತ್ತು ತಂಡದವರು ನೀಡಿದಂತಹ ಮಾರ್ಗದರ್ಶನವನ್ನು ಪಡೆದುಕೊಂಡರು.

ಅಂದು ಬೆಳಿಗ್ಗೆ 10.30ಕ್ಕೆ ಶಿಬಿರವನ್ನು ಖ್ಯಾತ ಕ್ಯಾನ್ಸರ್ ಶಸ್ತ್ರಚಿಕಿತ್ಸಕರಾದ ಡಾ॥ ಮಂಜುನಾಥ ಶಾಸ್ತ್ರಿಯವರು, ಡಾ॥ ಬಿ.ಎಸ್. ಶ್ರೀನಾಥ್‌ರವರ ಪರವಾಗಿ (ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆಯ ವ್ಯವಸ್ಥಾಪಕ ಟ್ರಸ್ಟಿಗಳ ಪರವಾಗಿ) ನೆರವೇರಿಸಿದರು. ಇವರ ಜೊತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮಹಿಳಾ ವಿಭಾಗದ ಸಂಚಾಲಕರಾದ ಡಾ. ಶುಭಮಂಗಳ ಮತ್ತು ಉಪಾಧ್ಯಕ್ಷರಾದ ಶ್ರೀ ಎಂ.ಆರ್. ಶಿವಶಂಕರ್‌ರವರು ಉದ್ಘಾಟಿಸಿ, ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಶಿಬಿರಕ್ಕೆ ಪ್ರೋತ್ಸಾಹ ಹಾಗೂ ಮಾರ್ಗದರ್ಶನವನ್ನು ನೀಡಿದಂತಹ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರಿಗೂ, ಆರೋಗ್ಯ ಸೇವೆಗಳ ಉಪಾಧ್ಯಕ್ಷರಾದ ಡಾ॥ ಮುರಳೀಧರ್‌ರವರಿಗೂ ಈ ಶಿಬಿರದ ಮುಖ್ಯ ಆಯೋಜಕರಾದ ಮತ್ತು ಆರೋಗ್ಯ ಸೇವೆಗಳ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ವೆಂಕಟೇಶ್ ದ್ವಾರಕನಾಥ್‌ರವರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ. ಮತ್ತು ಈ ಶಿಬಿರಕ್ಕೆ ಎಲ್ಲಾ ರೀತಿಯ ಸಹಕಾರವನ್ನು ನೀಡಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಶ್ರೀಧರಮೂರ್ತಿ, ಗಾಯತ್ರಿ ಭವನದ ಸಿಬ್ಬಂದಿಗಳಾದ ಶ್ರೀ ರಾಜಗೋಪಾಲ್‌ರವರಿಗೂ ಹಾಗೂ ಭವಿಷ್ಯದಲ್ಲಿ ಇಂತಹ ಮಹಿಳಾ ಸ್ನೇಹಿ ಆರೋಗ್ಯ ಕಾರ್ಯಕ್ರಮಗಳನ್ನು ಪಡೆಯಲು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಆರೋಗ್ಯ ಸೇವೆಗಳ ವಿಭಾಗದಿಂದ ಉಪಾಧ್ಯಕ್ಷರಾದ ಡಾ॥ ಮುರಳೀಧರ್‌ರವರು ಮತ್ತು ವೆಂಕಟೇಶ್ ದ್ವಾರಕನಾಥ್‌ರವರು ಆಶ್ವಾಸನೆಯನ್ನು ನೀಡಿರುತ್ತಾರೆ. ಈ ಶಿಬಿರವು ಈ ವರ್ಷದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ನೇತೃತ್ವದಲ್ಲಿ ನಡೆದ 12ನೇ ಶಿಬಿರವಾಗಿರುತ್ತದೆ.



## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

## ಹುಲಿಯುಗುರು – ಪ್ರಕರಣ. ಮಹಾಸಭಾದಿಂದ ಬಂಧಿತ ಅರ್ಚಕರ ಬಿಡುಗಡೆ

ಬಾಳೆಹೊನ್ನೂರು ಸಮೀಪದ ಖಾಂಡ್ಯಾದ ಪ್ರಸಿದ್ಧ ಮಾರ್ಕಾಂಡೇಶ್ವರ ಸ್ವಾಮಿ ದೇವಾಲಯದ ಅರ್ಚಕರಾದ ಕೃಷ್ಣಾನಂದ ಹೊಳ್ಳ ಹಾಗೂ ನಾಗೇಂದ್ರ ಜೋಯಿಸ್ ಬಂಧಿತರು. ಇಬ್ಬರು ಅರ್ಚಕರ ವಿರುದ್ಧ ಬಾಳೆಹೊನ್ನೂರು ಅರಣ್ಯ ಇಲಾಖೆಯಲ್ಲಿ ಪ್ರಕರಣ ದಾಖಲಾಗಿದೆ. ಹೀಗೆ ನಿರಪರಾಧಿ ಅರ್ಚಕರ ಅಕ್ರಮ ಬಂಧನವನ್ನು ಮಹಾಸಭಾ ಅಧ್ಯಕ್ಷರು ಖಂಡಿಸಿದ್ದು, ಮಹಾಸಭಾ ಉಪಾಧ್ಯಕ್ಷರಾದ ಡಾ.ಬಿ.ಎಸ್. ರಾಘವೇಂದ್ರ ಭಟ್‌ರವರು ನೆರವಿಗೆ ಧಾವಿಸಿದ್ದಾರೆ. ಇವರ ಪ್ರಯತ್ನದಿಂದಾಗಿ ಬಂಧಿತ ಅರ್ಚಕರು ಬಿಡುಗಡೆಯಾಗಿರುತ್ತಾರೆ.

## ವಿ. ರಂಗನಾಥರಾವ್ ರವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ




**ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ದೇವನಹಳ್ಳಿ ತಾಲ್ಲೂಕಿನ ರಂಗಭೂಮಿ ನಟ, ಕಲಾವಿದ, ಉಪನ್ಯಾಸಕರಾದ ಶ್ರೀ ವಿ. ರಂಗನಾಥರಾವ್ ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರ.**

ಇತ್ತೀಚೆಗೆ ಥಾಷ್ಕೆಂಟ್‌ನಲ್ಲಿ ನಡೆದ ಏಷಯನ್ ಚಮತ್ಕಾರ ಕ್ರೀಡೆಯಲ್ಲಿ (ಆಕ್ರೋಬೈಟಿಶ್) ವಿಜೇತಳಾದ

**ಕು॥ ವೈಷ್ಣವಿ ಆಚಾರ್ಯಗೆ**

**ಮಹಾಸಭೆಯ ಹಾರ್ದಿಕ ಅಭಿನಂದನೆಗಳು**



ಚಮತ್ಕಾರ ಕ್ರೀಡೆ – (Acrobitis) ಯಲ್ಲಿ ಕಂಚಿನ ಪದಕ ಗಳಿಸಿದ ಈ ಬಾಲಕಿ **ಶ್ರೀವತ್ಸ ಹಾಗು ಮಾನಸ ಆಚಾರ್ಯ ಇವರ ಹೆಮ್ಮೆಯ ಪುತ್ರಿ**

## ಚಿನ್ನದ ಪದಕ ವಿಜೇತೆ ಕೃತಿ ಆರ್. ವಸಿಷ್ಠ



ಕರ್ನಾಟಕದಲ್ಲಿ ಬಿ.ಎಸ್.ಸಿ. ವ್ಯಾಸಂಗ ಮುಗಿಸಿ ಹೈದರಾಬಾದ್ ಯುನಿವರ್ಸಿಟಿಯಲ್ಲಿ ಎಂ.ಎಸ್.ಸಿ. ಸ್ನಾತಕೋತ್ತರ ಪದವಿಯಲ್ಲಿ ನ್ಯೂರಲ್ ಮತ್ತು ಕಾಗ್ನಿಟಿವ್ ಸೈನ್ಸ್ ವಿಷಯ ಅಧ್ಯಯನದಲ್ಲಿ ಚಿನ್ನದ ಪದಕಕ್ಕೆ ಅರಸೀಕೆರೆಯ ಕು॥ ಕೃತಿ ಆರ್. ವಸಿಷ್ಠ ಭಾಜನರಾಗಿದ್ದಾರೆ. ಹೈದರಾಬಾದ್ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ಯು.ಜಿ.ಸಿ. ಅಧ್ಯಕ್ಷರಾದ ಡಾ॥ ಎಂ.ಜಗದೀಶ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಕೃತಿಯವರು ಅರಸೀಕೆರೆ ನಗರದ ಶ್ರೀಮತಿ ಶೋಭ, ರಮೇಶ್‌ರವರ ಪುತ್ರಿ. ಸ್ನಾತಕೋತ್ತರ ಶಿಕ್ಷಣದಲ್ಲಿ ಎಂ.ಎಸ್ಸಿ. ವ್ಯಾಸಂಗದಲ್ಲಿ ನ್ಯೂರಲ್ ಮತ್ತು ಕಾಗ್ನಿಟಿವ್ ಸೈನ್ಸ್ ವಿಷಯವನ್ನು ಆಯ್ಕೆ ಮಾಡಿಕೊಂಡರು. ಈ ವಿಜ್ಞಾನವು ಮಾನವನ ಮನಸ್ಸು ಮತ್ತು ಮೆದುಳಿನ ವೈಜ್ಞಾನಿಕ ಅಧ್ಯಯನವಾಗಿದೆ. ರಾಷ್ಟ್ರಮಟ್ಟದಲ್ಲಿ ಕೇವಲ 15 ವಿದ್ಯಾರ್ಥಿಗಳು ಮಾತ್ರ ಇದಕ್ಕೆ ಆಯ್ಕೆಗೊಂಡಿದ್ದರು.

## ಹಾವೇರಿಯಲ್ಲಿ "ಮಹಾಸಭಾ ಭವನ"ಕ್ಕೆ ಉದಾರ ದೇಣಿಗೆ ನೀಡಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾವೇರಿ ಜಿಲ್ಲಾ ಘಟಕಕ್ಕೆ ಸರ್ಕಾರದಿಂದ ನಿವೇಶನ ಮಂಜೂರಾಗಿದ್ದು, ರೂ.26 ಲಕ್ಷ ಶುಲ್ಕವನ್ನು ಈಗಾಗಲೇ ಪಾವತಿಸಲಾಗಿದೆ. ಈ ನಿವೇಶನದಲ್ಲಿ "ಸಭಾ ಭವನ" ನಿರ್ಮಾಣ ಮಾಡಲು ಯೋಚಿಸಲಾಗಿದ್ದು, ಜಿಲ್ಲೆಯ ವಿಪ್ರರು, ಸಂಘ–ಸಂಸ್ಥೆಗಳು ಉದಾರವಾಗಿ ದೇಣಿಗೆ ನೀಡಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಮಹಾಸಭಾ ಪ್ರಧಾನ ಕಾರ್ಯದರ್ಶಿಗಳನ್ನು ಸಂಪರ್ಕಿಸಲು ಕೋರಿದೆ.

**– ಪ್ರಧಾನ ಕಾರ್ಯದರ್ಶಿಗಳು**

| ಬ್ಯಾಂಕಿನ ವಿವರಗಳು : | A/C DETAILS |
|---|---|
| A/C NAME | : SAPTHARSHI FOUNDATION DONATION |
| BANK | : KARNATAKA BANK LTD. |
| A/C NO. | : 1072500102061901 |
| IFSC | : KARB0000107 |
| BRANCH | : BANASHANKARI 2ND STAGE |

## ಅನನ್ಯ ಸಾಧನೆಗೆ ಅಭಿನಂದನೆಗಳು



**ಅಮೋಘ ಕೃಷ್ಣ ವಿ.**

ಈತನು ರಾಜ್ಯ ಮತ್ತು ರಾಷ್ಟ್ರಮಟ್ಟದಲಿ ತನ್ನ ಕಾರ್ಯಕ್ರಮವನ್ನು ನೀಡಿ ಬಹುಮಾನ ಹಾಗೂ ಪ್ರಶಸ್ತಿಗಳಲ್ಲಿ ಗೆದ್ದಿರುತ್ತಾನೆ. (ಈತನು ಬಾಲ ಕಲಾವಿದನಾಗಿ, ನಿರೂಪಕನಾಗಿ, ಸಂಗೀತಗಾರನಾಗಿ, ನೃತ್ಯ ಪ್ರದರ್ಶನ ಹಾಗೂ ವೇದ ಮಂತ್ರಗಳ ಪಠಣ ಹೀಗೆ ಹಲವಾರು ಕಾರ್ಯಕ್ರಮಗಳನ್ನು ನೀಡಿರುತ್ತಾನೆ)

**ಈತನ ಭಾಗವಹಿಸಿರುವ ಕೆಲವು ಕಾರ್ಯಕ್ರಮಗಳ ವಿವರಗಳು ಹೀಗಿವೆ.**

1. ಜೀ ಕನ್ನಡ ಡ್ರಾಮಾ ಜೂನಿಯರ್ಸ್ ಸೀಸನ್ 2
2. ಜೀ ಕನ್ನಡದ ಉಘೇ ಉಘೇ ಮಾದೇಶ್ವರ ದಾರವಾಹಿಯಲ್ಲಿ ಮುಖ್ಯಪಾತ್ರದ ಮರಿದೇವ ನಾಗಿ
3. ಉದಯ ಟಿವಿಯ ಸೇವಂತಿ ಸೇವಂತಿ ಧಾರವಾಹಿಯಲ್ಲಿ ಬಾಲನಟನಾಗಿ
4. ಕಾಮಧೇನು ಎಂಬ ಕಿರುಚಿತ್ರದಲ್ಲಿ ಮುಖ್ಯಪಾತ್ರ ದಾರಿಯಾಗಿ
5. ಅಂಗೈಯಲ್ಲಿ ಅಕ್ಷರ ಸಿನಿಮಾದ ಮುಖ್ಯ ಪಾತ್ರದ ಬಾಲನಟನಾಗಿ
6. ಸ್ಟಾರ್ ಸುವರ್ಣದ ಯಡಿಯೂರು ಶ್ರೀ ಸಿದ್ದಲಿಂಗೇಶ್ವರ ಧಾರಾವಾಹಿಯ ಮುಖ್ಯಪಾತ್ರದಲ್ಲಿ ಸಿದ್ದಲಿಂಗನಾಗಿ. ಹೀಗೆ ತನ್ನನ್ನು ತೊಡಗಿಸಿಕೊಂಡಿದ್ದಾನೆ..

## ಜೀವಮಾನದ ಸಾಧನೆ ಪ್ರಶಸ್ತಿ – ಅನನ್ಯ ಸಾಧನೆ



ಅಚ್ಚಕನ್ನಡಿಗರು, ಖ್ಯಾತ ರಸಾಯನಶಾಸ್ತ್ರಜ್ಞರಾಗಿದ್ದ ದಿ॥ ಹೆಚ್.ಎನ್. ರಾಮಸ್ವಾಮಿಯವರಿಗೆ ಅಮೇರಿಕಾದ ಅಟ್ಲಾಂಟನಗರದ ನೃಪತುಂಗ ಕನ್ನಡ ಸಂಘವು "ಜೀವಮಾನ ಸಾಧನೆ ಪ್ರಶಸ್ತಿ" ನೀಡಿ ಗೌರವಿಸಿದೆ. 1963ರಲ್ಲಿ ಅಮೇರಿಕಕ್ಕೆ ಉನ್ನತ ವ್ಯಾಸಂಗಕ್ಕೆ ಹೋಗಿ ಶ್ರೀಯುತರು ಅಲ್ಲಿ ಮೊಟ್ಟಮೊದಲ ಬಾರಿಗೆ 'ನೃಪತುಂಗ ಕನ್ನಡ ಸಂಘ'ವನ್ನು ಸ್ಥಾಪಿಸಿ, ಪೋಷಿಸಿ ಐದು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಸೇವೆಯನ್ನು ಕೈಗೊಂಡಿದ್ದರು. ಭಾರತದಿಂದ, ನಮ್ಮ ರಾಜ್ಯದಿಂದ ಆ ದೇಶಕ್ಕೆ ಹೋದ ಎಲ್ಲಾ ಭಾರತೀಯ ನಾಗರಿಕರಿಗೆ, ವಿಪ್ರಬಂಧುಗಳಿಗೆ ಸಹಾಯಹಸ್ತ ನೀಡಿದ್ದರು. ಅಟ್ಲಾಂಟದಲ್ಲಿ 'ಅಕ್ಕ' ಸಮ್ಮೇಳನವನ್ನು ಅದ್ದೂರಿಯಾಗಿ ಹಾಗೂ ಯಶಸ್ವಿಯಾಗಿ ನಡೆಸಿದ್ದರು. ಅವರ ಶ್ರೀಮತಿ ಇಂದಿರಾ ರಾಮಸ್ವಾಮಿ ಹಾಗೂ ಮಕ್ಕಳು ಈ ಕನ್ನಡ ಸೇವೆಯಲ್ಲಿ ನಿರಂತರವಾಗಿ ಕೈಜೋಡಿಸಿದ್ದರು. ಈ ಕುಟುಂಬ ಮಹಾಸಭೆಗೆ ದಾನಿಗಳೂ ಆಗಿರುತ್ತಾರೆ.

## ಹಾರ್ದಿಕ ಅಭಿನಂದನೆಗಳು



ನಮ್ಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ಹೊ.ನಾ. ಹಿರಿಯಣ್ಣಸ್ವಾಮಿಯವರು ಬೆಂಗಳೂರಿನ ಬನಶಂಕರಿ ಎರಡನೆ ಹಂತದಲ್ಲಿರುವ "ವರಪ್ರದ ವೆಂಕಟೇಶ್ವರ ದೇವಸ್ತಾನ ವಿಶ್ವಸ್ಥ ಮಂಡಳಿ"ಗೆ ಗೌರವ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ದೇವಸ್ಥಾನದ ಆರಂಭದ ದಿನಗಳಿಂದಲೂ ಅದರ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಅವರಿಗೆ ಮಹಾಸಭೆಯ ಪರವಾಗಿ ಹಾರ್ದಿಕ ಅಭಿನಂದನೆಗಳು.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ...**



2023 ನೇ ಸಾಲಿನ ಕರ್ನಾಟಕ ರಾಜ್ಯೋತ್ಸವದ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ರವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ನಂ ಶ್ರೀಕಂಠ ಕುಮಾರ್, ಸಮಿತಿ ಸದಸ್ಯರಾದ ಶಂಕರನಾರಾಯಣ, ಕೆ ಆರ್ ಸತ್ಯನಾರಾಯಣ, ಜಿ ಆರ್ ಮೋಹನ್, ಕೆ ಆರ್ ಯೋಗಾನರಸಿಂಹನ್, ಎಸ್ ರವಿಕುಮಾರ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಲಕ್ಷ್ಮೀದೇವಿ, ಅರ್ ಬಿ ಐ ಬ್ರಾಹ್ಮಣ ಸಂಘದ ಅಧ್ಯಕ್ಷ ಎಸ್ ದಿನೇಶ್ ರವರುಗಳು ಅಭಿನಂದಿಸಿದರು.

## ಮಹಾಸಭಾ ವಧು-ವರರ ಮಾಹಿತಿ ಕೇಂದ್ರದ ಅಪೂರ್ವ ಸಾಧನೆ

ಕಳೆದ ಸಾಲಿನ ಅಕ್ಟೋಬರ್‌ನಿಂದ ಈ ತಿಂಗಳ ಅಕ್ಟೋಬರ್ ಅಂತ್ಯದವರೆಗೆ ಸುಮಾರು 839 ವಧು-ವರರು ನೋಂದಾವಣೆಯಾಗಿದ್ದು, ರೂ.6 ಲಕ್ಷ 60 ಸಾವಿರದವರೆಗೆ ಆದಾಯವನ್ನು ಮಹಾಸಭೆಗೆ ಸಂದಾಯವಾಗಿರುತ್ತದೆ. ವಧು-ವರರ ಮಾಹಿತಿ ಕೇಂದ್ರದ ಸಂಚಾಲಕಿ ಶ್ರೀಮತಿ ಜಯಲತಾ ಸತ್ಯನಾರಾಯಣ್, ಗಾಯತ್ರಿರಾವ್ ಮತ್ತು ನಳಿನಾ ನಟರಾಜ್ ಅವರ ನಿರಂತರ ಸಾಧನೆಯಾಗಿದ್ದು, ಇದರೊಂದಿಗೆ 480 ನೂತನ ಸದಸ್ಯರ ನೋಂದಾವಣೆ ಆಗಿರುವುದು ಗಮನಾರ್ಹ ಸಾಧನೆಯೇ. ವಧು-ವರರ ಮಾಹಿತಿ ಕೇಂದ್ರದ ಸಂಚಾಲಕಿ, ಸದಸ್ಯರೆಲ್ಲರಿಗೂ ಮಹಾಸಭೆಯ ಹೃತ್ಪೂರ್ವಕ ಅಭಿನಂದನಾಪೂರ್ವಕ ಕೃತಜ್ಞತೆಗಳು.

## ಮಹಿಳಾ ಸಮಾವೇಶಕ್ಕೆ ಆಯುಷ್ ಟಿವಿ ಸಹಕಾರ




ದಿನಾಂಕ 13.11.2024 ರಂದು ಬೆಂಗಳೂರಿನ ಆಯುಷ್ ಟಿವಿಯ ಕಛೇರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಹಾಗೂ ಅ.ಕ.ಬ್ರಾ.ಮ.ಸ.ದ ಪ್ರಮುಖ ಮುಖಂಡರಾಗಿದ್ದ, ಜನನಾಯಕರಾಗಿದ್ದ ದಿವಂಗತ ಎಸ್. ರಮೇಶ್ ಕುಟುಂಬಸ್ಥರಾದ ಶ್ರೀ ಎಂ. ಹರೀಶ್ ಕೃಷ್ಣ ರವರೊಂದಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ದಿನಾಂಕ : 6 ಮತ್ತು 7 ಜನವರಿ 2024 ರಂದು ಬೆಂಗಳೂರಿನ ಶಂಕರಪುರದ ಶೃಂಗೇರಿ ಶಂಕರ ಮಠದ ಅವರಣದಲ್ಲಿ ಆಯೋಜಿಸುತ್ತಿರುವ ರಾಜ್ಯಮಟ್ಟದ ಮಹಿಳಾ ಸಮ್ಮೇಳನ "ಅಭಿಜಾತೆ 2024" ಕಾರ್ಯಕ್ರಮದ ರೂಪರೇಷಗಳ ಕುರಿತು ಸಮಾಲೋಚನೆ ನಡೆಸಿ ದೀಪಾವಳಿ ಹಬ್ಬದ ಶುಭಾಶಯಗಳನ್ನು ಕೋರಿ ಅ.ಕ.ಬ್ರಾ. ಮ.ಸ.ದ ಉಪಾಧ್ಯಕ್ಷರಾದ ವೈ.ಎ. ಸುಧಾಕರ್ ಬಾಬು, ಸಂಘಟನಾ ಕಾರ್ಯದರ್ಶಿ ಕಾರ್ತಿಕ್ ಬಾಪಟ್, ಬಿ.ಕೆ. ಪ್ರಕಾಶ್ ಭಾರದ್ವಾಜ್, ಶ್ರೀ ಕಾಂತ್ ಹಾಗೂ ಶ್ರೇತ ಅಶ್ವಿನ್ ಆಹ್ವಾನಿಸಿದರು.

## ಮಹಿಳಾ ಸಮಾವೇಶಕ್ಕೆ ತೇಜಸ್ವಿನಿ ಅನಂತ್ ಕುಮಾರ್‌ರವರಿಗೆ ಆಹ್ವಾನ



ದಿನಾಂಕ 12.11.2024 ರಂದು ಬೆಂಗಳೂರಿನ ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತ್ ಕುಮಾರ್ ರವರನ್ನು ಅವರ ಸ್ವಗೃಹದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ದಿನಾಂಕ : 6 ಮತ್ತು 7 ಜನವರಿ 2024 ರಂದು ಬೆಂಗಳೂರಿನ ಶಂಕರಪುರದ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಆಯೋಜಿಸುತ್ತಿರುವ ರಾಜ್ಯಮಟ್ಟದ ಮಹಿಳಾ ಸಮ್ಮೇಳನ "ಅಭಿಜಾತೆ 2024" ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಲು ಉಪಾಧ್ಯಕ್ಷರಾದ ವೈ.ಎ. ಸುಧಾಕರ್ ಬಾಬು, ಸಂಘಟನಾ ಕಾರ್ಯದರ್ಶಿ ಕಾರ್ತಿಕ್ ಬಾಪಟ್, ಬಿ.ಕೆ. ಪ್ರಕಾಶ್ ಭಾರದ್ವಾಜ್, ನರಸಿಂಹಮೂರ್ತಿ ಹಾಗು ಜಿ.ಎ.ನಾಗೇಂದ್ರ ರವರು ಅಧಿಕೃತ ಪತ್ರ ನೀಡಿ ದೀಪಾವಳಿ ಹಬ್ಬದ ಶುಭಾಷಯ ಕೋರಿದರು.

## ವಿಶ್ವ ಕನ್ನಡ ಹಬ್ಬದಲ್ಲಿ ಡಾ.ಕಿಕ್ಕೇರಿ ಸಂಗೀತ



ಸಿಂಗಾಪುರದಲ್ಲಿ ನಡೆಯಲಿರುವ 2ನೇ ವಿಶ್ವ ಕನ್ನಡ ಹಬ್ಬದ ಸಂಗೀತ ಕಾರ್ಯಕ್ರಮಕ್ಕೆ ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಸ್ಥಾಪಕ ಹಾಗೂ ಗಾಯಕ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ.

ಹಬ್ಬದಲ್ಲಿ ಸಂಗೀತ ಪ್ರಸ್ತುತ ಪಡಿಸಲು ನಡೆಸಿಕೊಡಲು ಕೃಷ್ಣಮೂರ್ತಿ ತಂಡವನ್ನು ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಂಸ್ಥೆ ಸದಸ್ಯರು ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ. ಗಾಯಕ ಕಿಕ್ಕೇರಿ ಮಾತನಾಡಿ, ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಿಂಗಾಪುರದಲ್ಲಿ ಆಯೋಜಿಸಿರುವ ಎರಡನೇ ವಿಶ್ವ ಕನ್ನಡ ಹಬ್ಬದಲ್ಲಿ ನಮ್ಮ ತಂಡವನ್ನು ಆಯ್ಕೆ ಮಾಡಿದ್ದಕರೆ ಅಧ್ಯಕ್ಷರಾದ ಶಿವಕುಮಾರ್ ನಾಗರನವಿಲೆ ಹಾಗೂ ಹಬ್ಬದ ಸಲಹಾ ಸಮಿತಿ ಅಧ್ಯಕ್ಷ ಡಾ.ಸಿ. ಸೋಮಶೇಖರ್‌ಗೆ ಧನ್ಯವಾದ ತಿಳಿಸಿದ್ದಾರೆ.

ಜಾಹಿರಾತು

ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ**

**ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ 2ನೇ ಹಂತ, ಮೈಸೂರು– 570023**

**ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ**

ತ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ)ಅಪರ, ಪೂರ್ವ, ಅಂತ್ಯೆಷ್ಟಿ ಕರ್ಮಾಧಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಗ್ಗೆ ಪ್ರಾತಃ ಕಾಲ 6 ರಿಂದ 6–30 ವೇದ ಪಠಣ, 6–30 ರಿಂದ 7–00 ವರೆಗೆ ಭಗವಗ್ದೀತ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜ್ಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ **ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ, ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.**

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**

**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**

**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ: 8088799540**
**8861998817**

ಡಾ. ಬಿ.ಆರ್.ನಟರಾಜ್ ಜೋಯಿಸ್
ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ

ಜಾಹಿರಾತು

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

**ಶುಭಾಶಯಗಳೊಂದಿಗೆ**



**ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',**
**ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ**
**ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.**
**ದೂ. ಸಂ. 080–26731335, 26731336**

**ಬಡಾವಣೆ ವಿವರಗಳು :**

1. **ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085**
2. **ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061**

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

# ಶ್ರದ್ಧಾಂಜಲಿ




ದಿ 22 ನವೆಂರ್ 2023 ರಂದು ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕರೊಂದಿಗೆ ಹೋರಾಟದಲ್ಲಿ ವೀರಮರಣ ಹೊಂದಿ ಹುತಾತ್ಮರಾದ ನಮ್ಮ ಸಮಾಜದ ಮುಕುಟಮಣಿ ಭಾರತಾಂಬೆಯ ಸುಪುತ್ರ

**ಕ್ಯಾಪ್ಟನ್ ಶ್ರೀ ಎಂ.ವಿ.ಪ್ರಾಂಜಲ್**ರವರಿಗೆ
**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ**
**ಭಾವಪೂರ್ಣ ಶ್ರದ್ಧಾಂಜಲಿ.**





**ದಿ.25 ನವೆಂಬರ್ 2023ರಂದು ಹುತಾತ್ಮರಾದ ಶ್ರೀ ಪ್ರಾಂಜಲ್ ರವರಿಗೆ ಮಹಾಸಭಾದ ಉಪಾಧ್ಯಕ್ಷರುಗಳಾದ ಶ್ರೀ ಛಾಯಾಪತಿ ಕೆ.ಎನ್. ಶ್ರೀ ಸುರೇಶ್.ಎಚ್.ಆರ್. ಹಿರಿಯಸದಸ್ಯರಾದ ಶ್ರೀ ಕಟ್ಟೆ ಸತ್ಯನಾರಾಯಣ್, ಅರುಣ್ ಹಿರಿಯಣ್ಣ ಮತ್ತು ಸುಬ್ರಮಣ್ಯ ಇವರುಗಳು ಅಂತಿಮ ದರ್ಶನ ಪಡೆದು ಪುಷ್ಪ ನಮನ ಸಲ್ಲಿಸಿದರು.**



# ಸತ್ಯ ಪ್ರಕಾಶ

– ಡಾ. ಪಾವಗಡ ಪ್ರಕಾಶ್‌ರಾವ್

**ಧ್ಯಾನ ಮಾಡುವುದಕ್ಕೆ ಗುರುಗಳ ಮಾರ್ಗದರ್ಶನದ ಅಗತ್ಯ ಇದೆಯೇ ?**

ಖಂಡಿತ ಇದೆ. ನೀನು ಗುಟುಕರಿಸುವುದರಿಂದ ಹಿಡಿದು ಕ್ರಮವಾಗಿ ಊಟ ಮಾಡುವುದನ್ನು ತಾಯಿ ಹೇಳಿಕೊಡುತ್ತಾಳೆ. ಬಟ್ಟೆ ಹೇಗೆ ಹಾಕಬೇಕೆಂಬುವುದನ್ನು ಕಲಿಸಿದ್ದಾರೆ. 'ಅ ಆ ಇ ಈ' ಇಂದ ಹಿಡಿದು ಪುಸ್ತಕಗಳನ್ನ ಅಭ್ಯಾಸಮಾಡುವ ತನಕ ಉಪಾಧ್ಯಾಯರು ದಾರಿ ತೋರಿದ್ದಾರೆ. ಗಣಿತವಿರಲಿ, ಸಾಹಿತ್ಯವಿರಲಿ, ತಂತ್ರಜ್ಞಾನವಿರಲಿ, ಸಮಾಜಶಾಸ್ತ್ರವಿರಲಿ, ವಿಜ್ಞಾನವಿರಲಿ, ಈ ಎಲ್ಲ ವಿದ್ಯೆಗಳನ್ನೂ ಕಲಿಯಲು ನಾವು ವರ್ಷ–ವರ್ಷಗಳು ಮಾರ್ಗದರ್ಶನಕ್ಕೆ ತುತ್ತಾಗುತ್ತೇವೆ. ಯಾರದೋ ಮಾರ್ಗದರ್ಶನಕ್ಕೊಳಪಟ್ಟದ್ದೇ ! ಇಂತಹುದರಲ್ಲಿ, ಜೀವನದ ಎಲ್ಲ ವಿಷಯಗಳಲ್ಲೂ ನಾವು ಮಾರ್ಗದರ್ಶನ ತೆಗೆದುಕೊಳ್ಳುವಾಗ, ಧ್ಯಾನದ ವಿಷಯದಲ್ಲೇಕೆ ನಿಮಗೆ ಸಂಶಯ? ನಿಮಗೇನು ಹುಟ್ಟುತ್ತಿದ್ದಂತೆಯೆ ಧ್ಯಾನ ಸಹಜವಾಗಿ ಸ್ಫುರಿಸಿದೆಯೇನು? ಅಸಲು ಧ್ಯಾನವೆಂದರೇನೆಂದು ಗೊತ್ತೇ ನಿಮಗೆ? ಅಕಸ್ಮಾತ್ ಅ ಬಗ್ಗೆ ಏನೇ ಗೊತ್ತಿದ್ದರೂ ಅದೂ ವ್ಯಕ್ತಿ ಅಥವ ಪುಸ್ತಕಗಳ ಮಾರ್ಗದರ್ಶನದಿಂದಲೇ ಎಂದ ಮೇಲೆ ಸಂಕೋಚವೇಕೆ? ಅವಶ್ಯ ಮಾರ್ಗದರ್ಶನ ತೆಗೆದುಕೊಳ್ಳಿ ಅನುಭವಿಗಳಿಂದ.

**ರಾಮಾಯಣ ಪುರಾಣ ಕಥೆಯೇ ಅಥವ ಚರಿತ್ರೆಯೇ? ರಾಮಾಯಣದಲ್ಲಿ ಬರುವಂತೆ ಸಂಜೀವಿನೀ ಸಸ್ಯ ಇದೆಯೇ? ಅಥವಾ ಅದು ಕಾಲ್ಪನಿಕ ಕಥೆಯೇ?**

ಸಂಜೀವಿನೀ ವಿಷಯ ಒತ್ತಟ್ಟಿಗಿಟ್ಟರೆ, ರಾಮಾಯಣದ ಬಗ್ಗೆ ಮೂರು ನಿಲುವುಗಳನ್ನು ಹೇಳಿದ್ದೀರಿ. ಪುರಾಣ, ಚರಿತ್ರೆ ಮತ್ತು ಕಾಲ್ಪನಿಕ ಕಥೆ. ಶ್ರೀಮದ್ ರಾಮಾಯಣ ಈ ಮೂರೂ ಅಲ್ಲ. ಇವೆಲ್ಲವನ್ನೂ ಮೀರಿದ್ದು. ಅದು ಕಾವ್ಯ: ಮಹಾಕಾವ್ಯ: ಪ್ರಾಚೀನ ಕಾವ್ಯ. ಅದ್ಯಕಾವ್ಯ; ಅಗ್ರಕಾವ್ಯ; ಮಹೋತ್ತಮ ಕಾವ್ಯ.

ಪುರಾಣದಂತೆ ಆಧಾರವಿಲ್ಲದ, ಕ್ರಮವಿಲ್ಲದ, ಏನೇನೋ ಎಲ್ಲೆಲ್ಲೋ ಹೇಗೆ ಹೇಗೋ ಎಳೆದೆಳೆದು ಹೇಳುವ ಪದ್ಯ ರೂಪದ ಸಮೂಹ ಅಲ್ಲ. ಚರಿತ್ರೆಯಂತೆ ಕಾಲದ ಪ್ರತಿ ಘಟನೆಯನ್ನೂ ಬರಡು ಬರಡಾಗಿ ಬರೆಯುವ ಚಾರಿತ್ರಿಕ ಘಟನೆಗಳ ಕೈಪಿಡಿಯೂ ಅಲ್ಲ. ಶ್ರೀಮದ್ ರಾಮಾಯಣದಲ್ಲಿರುವ ಪ್ರತಿ ಅಕ್ಷರವೂ ಪರಮಸ್ಯವೆಂದು ಪ್ರಮಾಣ ಮಾಡಲಾಗದಿದ್ದರೂ, ಅದರಲ್ಲಿರುವುದೆಲ್ಲ ಕಲ್ಪನೆಯೆಂದು ಹೇಳುವ ಹುಂಬತನವನ್ನೂ ನಾನು ಮಾಡುವುದಿಲ್ಲ. ಸತ್ಯವಸ್ತುವನ್ನು ಕಾವ್ಯಾಲಂಕಾರಗಳಿಂದ ಶೃಂಗರಿಸಿದ ಕಾವ್ಯ ಅದು. ಅದು ಬೇಂದ್ರೆಯವರ ಬಾಯಲ್ಲಿ 'ಓಂಕಾರದ ಶಂಖನಾದಕಿಂತ ಕಿಂಚಿದೂನ' ಅಷ್ಟೇ. ಎಂದರೆ ವೇದಾಂತದ ಪರಮ ಸತ್ಯ ಪ್ರಣವವಾದರೆ, ಕಾವ್ಯ ಅದನ್ನು ಅಲಂಕಾರಿಕವಾಗಿ ಉತ್ಪ್ರೇಕ್ಷೆ ಸಹಿತ, ಹಾಡಿನಲ್ಲಿ ಹೇಳುವ ಮೃದು ಮಧುರ ವರ್ಣ ವಿನ್ಯಾಸ.

ಸಂಜೀವಿನಿ ಸಸ್ಯ ಉಂಟೇ? ಇರಬಹುದು/ಇರದಿರಬಹುದು! ಸಸ್ಯಶಾಸ್ತ್ರಿಯನ್ನು ಕೇಳಿದರೆ ನಮಗೆ ಗೊತ್ತಾಗದ ಸಾವಿರ ಸಾವಿರ ಸಸ್ಯದ ಹೆಸರುಗಳನ್ನೇ ಹೇಳುತ್ತಾರೆ. ಅವುಗಳ ಸಂಸಾರಗಳನ್ನು ವಿಂಗಡಿಸುತ್ತಾರೆ. ಸ್ಥಳೀಯ ನಾಮಗಳೊಡನೆ ವೈಜ್ಞಾನಿಕವಾದ ದ್ವಯನಾಮಗಳನ್ನೂ ಹೇಳುತ್ತಾರೆ. ನಮಗಿವೆಲ್ಲಾ ಗೊತ್ತೇ? ಸಾವಿರಾರು ವರ್ಷಗಳ ಹಿಂದಿನ ಆ ಸಸ್ಯ, ಇಂದಿನವರ ಕಣ್ಣಿಗೆ ಬಿದ್ದಿದೆಯೋ ಇಲ್ಲವೋ ಹೇಗೆ ಹೇಳೋಣ? ಅಂದಿನ ಕಾಲದಲ್ಲಿ ಅದರ ಉಪಯೋಗ ಇತ್ತೆಂದು ನಂಬುವುದರಿಂದ ಕಾವ್ಯಾನಂದ ಉಂಟಾಗುತ್ತದೆ. ಸದ್ಯಕ್ಕೆ ಅದನ್ನನುಭವಿಸುವ ಹೆಚ್ಚು ಆಸಕ್ತಿ ಇದ್ದರೆ ಕೇವಲ ಸಂಜೀವಿನಿ ಏಕೆ ? ವಿಶಲ್ಯಕರಣಿ, ಸವ್ರ್ಣ ಕರಣಿ, ಸಂಧಾನ ಕರಣಿಗಳ ಬಗ್ಗೆಯೂ ಸಂಶೋಧನ ನಡೆಸಿ ನಮಗೆಲ್ಲ ತಿಳಿಸಿ.

**ಧರ್ಮ ಜಿಜ್ಞಾಸೆ ಎಂದರೇನು? ಜಿಜ್ಞಾಸೆ ಮನುಷ್ಯನಿಗೆ ಒಳ್ಳೆಯದೆ ಅಥವಾ ಅಲ್ಲವೇ?**

ಎರಡನೆಯ ಪ್ರಶ್ನೆಗೆ ಮೊದಲು ಉತ್ತರ ಹೇಳಿಬಿಡುವ. ಜಿಜ್ಞಾಸೆ ಎಂಬುದನ್ನು ಅತ್ಯಂತ ಸರಳವಾಗಿ ಹೇಳಬೇಕೆಂದರೆ, ಚಿಂತನೆ ಎಂದರೆ ಯೋಚಿಸುವುದು, ಯೋಚಿಸುವುದು ಎನ್ನುವುದು ಅತ್ಯಂತ ಸಾಧಾರಣ ಪದ. ಸಾಮಾನ್ಯವಾಗಿ ವ್ಯಕ್ತಿಗತವಾದ, ಸಂಸಾರಗಳಿಗೆ ಸಂಬಂಧ ಪಟ್ಟದ್ದು ಯೋಚನೆ. ಸಮಾಜಕ್ಕೆ ಸಮಾಜದ ಹಿತಕ್ಕೆ ಸಂಬಂಧಿಸಿದ್ದು ಚಿಂತನೆ. ಮನೆಯ ಖರ್ಚಿಗಾಗಿ ಸಂಪಾದಿಸುವ ಹಣಕ್ಕೆ ಏನು ಮಾಡಬೇಕು ಎಂದು ಯೋಚಿಸುವುದಕ್ಕೂ, ದೇಶದ ಆರ್ಥಿಕ ಸ್ಥಿತಿಯ ಬಗ್ಗೆ ಆಲೋಚಿಸುವುದಕ್ಕೂ ವ್ಯತ್ಯಾಸವಿಲ್ಲವೇ? ಎರಡನೆಯದು ಘನವಾದ ಚಿಂತನೆ. ಮನುಷ್ಯ ಇಂತಹ ಚಿಂತನೆಗಳನ್ನು ಮಾಡಿದ್ದರಿಂದಲೇ ನಡೆಯುತ್ತಿದ್ದವ ಇಂದು ವಿಮಾನದಲ್ಲಿ ಹಾರಲು ಸಾಧ್ಯವಾಯಿತು! ಊಟಕ್ಕಾಗಿ ಬೇಟೆ ಮಾಡುತ್ತಿದ್ದವನು ಭತ್ತದಲ್ಲಿ ಅನ್ನವನ್ನು ಕಂಡ. ಹಣ್ಣಿನಲ್ಲಿಯೂ ಊಟ ಕಂಡ! ಎಲೆಗಳಿಂದಲೋ, ಸತ್ತ ಪ್ರಾಣಿಯ ತೊಗಲಿನಿಂದಲೋ ಮಾನ ಮುಚ್ಚಿಕೊಳ್ಳುತ್ತಿದ್ದವನು ಇಂದು ವೈವಿಧ್ಯದ ಉಡುಗೆ–ತೊಡುಗೆಗಳನ್ನು ತೊಟ್ಟ! ಮರದ ಪೊಟರೆಯಲ್ಲೋ,

ಗುಹೆಗಳಲ್ಲೋ ಬದುಕುತ್ತಿದ್ದವನು ಸೊಗಸಾದ ಭವನಗಳನ್ನು ಕಟ್ಟಿಸಿಕೊಂಡ! ಪಾಳೆಗಾರರ ಪುಟ್ಟ–ಪುಟ್ಟ ಗುಂಪುಗಳಲ್ಲಿ ನಿತ್ಯ ಕದನಗಳಿಗೆ ಸಿದ್ಧನಾಗುತ್ತಿದ್ದವನು, ಇಂದು ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡ. ಹೀಗೆ ನೂರು ಬದಲಾವಣೆಗಳನ್ನು ವಿವರಿಸಬಹುದು.

ಇವೆಲ್ಲ ಚಿಂತಕರ ಚಿಂತನೆಯ ಫಲ. ಮಳೆ ಬಂದು ಅಪವ್ಯಯವಾಗುತ್ತಿದ್ದು, ಹರಿದು ಹೋಗುತ್ತಿದ್ದ ನೀರಿಗೆ ಕೆರೆ– ಕಟ್ಟಿ ಅದರಲ್ಲಿ ತಾವರೆ ಬೆಳೆಸಿದ್ದೂ ಈ ಚಿಂತನೆಯ ಫಲವೇ. ಈಗ ಹೇಳಿ ಜಿಜ್ಞಾಸೆ ಮನುಷ್ಯನಿಗೆ ಒಳ್ಳೆಯದೇ ಅಥವಾ ಅಲ್ಲವೇ? ಇನ್ನು ಧರ್ಮ ಜಿಜ್ಞಾಸೆ. ಇದು ಶಾಸ್ತ್ರೀಯ ವಿಷಯ. ಅರ್ಥವಾಗುವುದು ಸ್ವಲ್ಪ ಕಷ್ಟ. ಆದರೂ ಪ್ರಯತ್ನಪಡುತ್ತೇನೆ. ವೇದ ಎಂದು ನಾವು ಹೇಳುವುದರಲ್ಲಿ ನಾಲ್ಕು ವಿಭಾಗಗಳಿವೆ. ಸಂಹಿತೆ, ಬ್ರಾಹ್ಮಣ, ಆರಣ್ಯಕ ಉಪನಿಷತ್. ಈ ನಾಲ್ಕರಲ್ಲಿ ನಾವು ಅಪೌರುಷೇಯವೆಂದು ಯಾವುದನ್ನು ಕರೆಯುತ್ತೇವೋ, ಅದು ಕೇವಲ ಸಂಹಿತೆ ಮಾತ್ರ. ಉಳಿದವೆಲ್ಲ ನಾವು ಬರೆದದ್ದೇ ಅಂದರೆ ಸಂಹಿತೆ ಬಿಟ್ಟು ಬಳಿದ ಮೂರರಲ್ಲಿ ಮೊದಲನೆಯದು 'ಬ್ರಾಹ್ಮಣ' ಅದರ ತುಂಬ ಇರುವುದೇ ಧರ್ಮ ಜಿಜ್ಞಾಸೆ. ಇಲ್ಲಿ 'ಧರ್ಮ ಎಂದರೆ 'ಕರ್ಮ' ಎಂದರ್ಥ. ಇಲ್ಲಿ ಕರ್ಮ ಎಂದರೆ ಯಜ್ಞ ಮಾಡುವುದು. ಧರ್ಮ ಎಂದರೆ ಯಜ್ಞ ಮಾಡುವುದು (ಯಾಗಾದಿರೇವ ಧರ್ಮಃ). ಹೀಗೆ ಯಜ್ಞ ಮಾಡುವುದರಲ್ಲಿ ಮೂರು ವಿಧ. ಒಂದು ನಿತ್ಯ. ಎರಡು ನೈಮಿತ್ತಿಕ, ಮೂರು ಕಾಮ್ಯ. ನಿತ್ಯಕರ್ಮವೆ ನಿತ್ಯ ಧರ್ಮ. ಇದರಿಂದ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲ. ಯಾವುದಾದರೂ ಕಾರಣದಿಂದ ವಿಶೇಷ ದಿನಗಳಲ್ಲಿ ಮಾಡುವ ವಿಶೇಷ ಕರ್ಮ ಅಥವಾ ಯಾಗ, ಇದು ನೈಮಿತ್ತಿಕ. ಮೂರನೆಯದು ಏನನ್ನಾದರೂ ಬಯಸಿ, ಆಸೆ ತೀರಿಸಿಕೊಳ್ಳಲು ಮಾಡುವ ಯಜ್ಞ. ಉದಾಹರಣೆಗೆ 'ಪುತ್ರ ಕಾಮೇಷ್ಟಿ', 'ಶಾರದಾ ವ್ರತ', 'ಸತ್ಯನಾರಾಯಣ ವ್ರತ', ಮೊದಲನೆಯದು ಅನಿವಾರ್ಯ, ಎರಡನೆಯದು ಆವಶ್ಯಕ, ಮೂರನೆಯದು ಐಚ್ಛಿಕ. ಈ ಧರ್ಮಜಿಜ್ಞಾಸೆಗೆ ಸಂಬಂಧಪಟ್ಟ ಪ್ರಥಮ ಕೃತಿ ಜೈಮಿನ್ಯಾಚಾರ್ಯರ 'ಮೀಮಾಂಸಾ ಸೂತ್ರ', ಈ ದಾರಿಯಲ್ಲಿ ಬಂದವರೇ ಕುಮಾರಿಲ ಭಟ್ಟರು. ಅವರ ಶಿಷ್ಯರೇ ಮಂಡನಮಿಶ್ರರು. ಅವರನ್ನು ತಮ್ಮ ವಾದದಲ್ಲಿ ಮಣಿಸಿದ್ದು ಶ್ರೀ ಶ್ರೀ ಶ್ರೀ ಶಂಕರಾಚಾರ್ಯರು. ಈ ಮಂಡನಮಿಶ್ರರೇ ಸುರೇಶ್ವರಾಚಾರ್ಯರಾಗಿ ನಮ್ಮ ಶೃಂಗೇರಿ ಶಾರದಾ ಪೀಠದ ಪ್ರಥಮಾಧ್ಯಕ್ಷರಾದದ್ದು. ಇಷ್ಟು ಸಾಕೋ ಧರ್ಮದ ಜಿಜ್ಞಾಸೆ.

ಜಾಹಿರಾತು

**ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ**

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್, ಬ್ಯಾಂಕ್ ಕಾಲೋನಿ, ಬೆಂಗಳೂರು–560 050.**

**ಸ್ಥಳದ ಬಾಡಿಗೆ ಇರುವುದಿಲ್ಲ**

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ, ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

# ರಾಜ ಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು

– ಸುರೇಶ್ ಮೂನ



ಕರ್ಪೂರ ಶ್ರೀನಿವಾಸರಾಯರು ವೃತ್ತಿಯಲ್ಲಿ ಇಂಜಿನಿಯರಾದರೂ ಪ್ರಸಿದ್ಧ ಸಾಹಿತಿಗಳು ಮತ್ತು ಸಾಹಿತ್ಯ ಉಪಾಸಕರು. ಇವರ ಹೆಸರಿನ ಹಿಂದೆ ಕರ್ಪೂರ ಎಂಬ ಪದಜೋಡಣೆಯಾಗಿರುವ ಬಗ್ಗೆ ಕುತೂಹಲಕಾರಿಯಾದ ಹಿನ್ನೆಲೆ ಇದೆ. ಇವರ ಪೂರ್ವಿಕರ ಹೆಸರೂ ಶ್ರೀನಿವಾಸರಾಯರು ಎಂದು. ಅವರು 18ನೇ ಶತಮಾನದ ಅಂತ್ಯದ ಭಾಗದಲ್ಲಿ ಬ್ರಿಟಿಷ್ಸೈನ್ಯದ ಒಂದು ಖಾತೆಯಲ್ಲಿ ಉದ್ಯೋಗದಲ್ಲಿದ್ದರು. ಆ ವಿಭಾಗದಲ್ಲಿದ್ದ ಬ್ರಿಟಿಷ ಮುಖ್ಯಾಧಿಕಾರಿಯಾಗಿ ಸರ್ಜಾನ್ಮಾಲ್ಕೆಂಬಾತನಿಗೆ ಒಮ್ಮೆ ಒದಗಿದ ಪ್ರಾಣಾಪಾಯದಿಂದ ಇವರು ಪಾರುಮಾಡಿದರು. ಅದರಿಂದ ಸಂತೋಷಗೊಂಡ ಆತ ಇವರಿಗೆ ಹೆಚ್ಚು ಪ್ರಮಾಣದಲ್ಲಿ ವಜ್ರವೈಡೂರ್ಯಗಳನ್ನು ಕಾಣಿಕೆಯಾಗಿ ನೀಡಿದನು. ಆದರೆ ಇವರು ಆಸಂಪತ್ತನ್ನು ಸ್ವಂತಕ್ಕೆ ಬಳಸಬಾರದು ಅದನ್ನು ದೈವಸನ್ನಿಧಿಯಲ್ಲಿ ಪರೋಪಕಾರಕ್ಕೆ ವಿನಿಯೋಗಿಸಬೇಕು ಎಂದು ನಿರ್ಧರಿಸಿ ತಿರುಪತಿಗೆ ಬಂದರು. ಇಲ್ಲಿ ಧಾರಾಳವಾಗಿ ದಾನ-ಧರ್ಮಗಳಿಗೆ ಆಹಣವನ್ನು ವ್ಯಯಮಾಡಿದರು. ಹಾಗೆಯೇ ಪ್ರತಿ ದಿನ ಮಣಗಟ್ಟಲೆ ಕರ್ಪೂರದ ಗಡ್ಡೆಗಳನ್ನು ದೇವಸ್ಥಾನದ ಆವರಣದಲ್ಲಿ ಇಟ್ಟು ಉರಿಸುತ್ತಾ ಭಕ್ತಾದಿಗಳಿಗೆ ರಾತ್ರಿಯ ವೇಳೆ ಬೆಳಕನ್ನು ಒದಗಿಸುತ್ತಿದ್ದರಂತೆ. ಈ ರೀತಿಯ ಕರ್ಪೂರದ ದೀಪದ ಸೇವೆಯಿಂದಾಗಿ ಕರ್ಪೂರದ ಮನೆತನದವರು ಎಂದೇ ಹೆಸರುವಾಸಿಯಾದರು. ಆದರೂ ಇವರಲ್ಲಿದ್ದ ಅಪಾರವಾದ ಐಶ್ವರ್ಯ ಒಂದೆರಡು ಬಾರಿ ಪ್ರಾಣಾಪಾಯಕ್ಕೂ ಕಾರಣವಾದ್ದರಿಂದ ಅದೆಲ್ಲವನ್ನು ತ್ಯಜಿಸಿ ಬೆಂಗಳೂರಿಗೆ ಬಂದು ನೆಲೆಸಿದರು. ಇವರ ಮಗ ಸುಬ್ಬರಾಯರು ಮತ್ತು ಮನೋಬಾಯಿ ದಂಪತಿಗಳಿಗೆ 1863 ರ ಜುಲೈ 27 ರಂದು ಜನಿಸಿದ ಎರಡನೇ ಮಗುವಿಗೆ ತಾತ ಶ್ರೀನಿವಾಸರಾಯರ ಹೆಸರನ್ನು ಇಟ್ಟರು. ಇವರೇ ಮುಂದೆ ಕರ್ಪೂರ ಶ್ರೀನಿವಾಸರಾಯರಾದರು.

ಕೋಲಾರ, ಮೈಸೂರು. ಬೆಂಗಳೂರಿನಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು. ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ, ಪ್ರಿನ್ಸಿಪಾಲರಾಗಿದ್ದ ವಿ. ಚಾರ್ಲ್ಸ್ ಹಾರ್ಟ್ಸ್ ಈ ವಿದ್ಯಾರ್ಥಿಯ ಬುದ್ಧಿವಂತಿಕೆಯನ್ನು ಮೆಚ್ಚಿ ತಮ್ಮ ಸ್ವಂತ ಪುಸ್ತಕ ಭಂಡಾರವನ್ನು ಬಳಸಿಕೊಳ್ಳಲು ಆಕಾಶ ಕೊಟ್ಟಿದ್ದಲ್ಲದೆ, ತಿಂಗಳಿಗೆ ಐದು ರೂಪಾಯಿ ವಿದ್ಯಾರ್ಥಿವೇತನವನ್ನು ಕೊಡಿಸಿದ್ದರು. ಮುಂದೆ ಎಫ್.ಎ. ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿ ಪುಣೆಯಲ್ಲಿನ ಇಂಜಿನಿಯರಿಂಗ್ ಕಾಲೇಜನ್ನು ಸೇರಿದರು. 1887ರಲ್ಲಿ ಪ್ರಥಮ ದರ್ಜೆಯಲ್ಲಿ ಬಿಇ ಪದವಿಪಡೆದ ಇವರಿಗೆ ಕೂಡಲೇ ಇಂಜಿನಿಯರ್ ದ್ಯೋಗ ದೊರೆಯಿತು. 1887 ರಿಂದ 1911 ರವರೆಗೆ ಮುಂಬೈ ಪ್ರಾಂತ್ಯದ ಹಲವಾರು ಕಡೆಗಳಲ್ಲಿ ಕಟ್ಟಡಗಳು, ಸೇತುವೆಗಳು ಹಾಗೂ ಅಣೆಕಟ್ಟುಗಳನ್ನು ನಿರ್ಮಿಸಿ ಪ್ರಸಿದ್ಧ ಇಂಜಿನಿಯರ್‌ಗಿದ್ದರು. ಇವರ ಸಾಮರ್ಥ್ಯದ ಬಗ್ಗೆ ತಿಳಿದಿದ್ದ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರು ಇವರನ್ನು ತಾಯಿನಾಡಿಗೆ ಆಹ್ವಾನಿಸಿ ಸೂಪರ್ ಇಂಡೆಂಟ್ ಇಂಜಿನಿಯರ್ ಆಗಿ ನೇಮಿಸಿದರು. ಒಂದು ವರ್ಷದ ನಂತರ ಸರ್ ಎಂ ವಿಶ್ವೇಶ್ವರಯ್ಯ ಅವರು ದಿವಾನ ಪದವಿಗೆ ಏರಿದಾಗ ಇವರನ್ನು ಇಲಾಖೆಯ ಮುಖ್ಯ ಇಂಜಿನಿಯರ್ ಮಾಡಲಾಯಿತು. ಕೃಷ್ಣರಾಜ ಸಾಗರದ ನಿರ್ಮಾಣದ ಪೂರ್ಣ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದರು.

ಪ್ರಮುಖವಾಗಿ ಮದ್ರಾ ಸ್ವಾತಂತ್ರ್ಯಕ್ಕೆ ಎಷ್ಟು ಪ್ರಮಾಣದಲ್ಲಿ ಕಾವೇರಿ ನೀರನ್ನು ಬಿಡಬೇಕೆಂಬ ವಿಷಯದ ಬಗ್ಗೆ ಬ್ರಿಟಿಷ್ ಅಧಿಕಾರಿಗಳೊಂದಿಗೆ ನಡೆದ ಕಾವೇರಿ ಆರ್ಬಿಟ್ರೇಷನ್ ಬೋರ್ಡ್‌ಸಭೆಯಲ್ಲಿ ಬಹಳ ಬುದ್ಧಿವಂತಿಕೆ ಹಾಗೂ ಮುಂದಾಲೋಚನೆಯಿಂದ ವಾದಿಸಿ ಅಧಿಕಾರಿಗಳ ಮೆಚ್ಚುಗೆಗಳಿಸಿದರು. ಇದರಿಂದ ಮಹಾರಾಜರು ಹರ್ಷಿತರಾದರು. ದಸರಾ ಮಹೋತ್ಸವದ ಸಂದರ್ಭದಲ್ಲಿ ತುಂಬಿದ ಸಭೆಯಲ್ಲಿ 'ರಾಜ ಸಭಾ ಭೂಷಣ' ಎಂಬ ಬಿರುದನ್ನು ನೀಡಿ ಗೌರವಿಸಿದರು. ಅಲ್ಲದೆ ಚಿನ್ನದ ಸರಪಣಿ ಮತ್ತು ಮುಚ್ಚಳ ಇರುವ ಗಡಿಯಾರವನ್ನು ನೀಡಿ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದರು. ನಿವೃತ್ತಿಯ ನಂತರವೂ ಇವರು ಕಾವೇರಿ ನೀರು ಬಿಡುಗಡೆ ಬಗ್ಗೆ ನಡೆಯುತ್ತಿದ್ದ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡದ ನಿರ್ಮಾಣಕ್ಕಾಗಿ ಶ್ರೀನಿವಾಸರಾಯರು ಪಟ್ಟ ಶ್ರಮ ಅಸಾಮಾನ್ಯವಾದದ್ದು. ವಿದ್ವಜ್ಜನರ ಪರಿಚಯವಿದ್ದ ಇವರು ಪರಿಷತ್ತಿಗೆ ಸದಸ್ಯರನ್ನು ಮತ್ತು ಆರ್ಥಿಕ ನೆರವನ್ನು ತಂದು ಸೇರಿಸುತ್ತಿದ್ದರು. ಪರಿಷತ್ತಿನ ಪ್ರಾರಂಭಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಗೌರವಿಸಿ ಅದರ ಸ್ವಂತ ಕಟ್ಟಡಕ್ಕೆ ಇವರ ಕೈಯಿಂದಲೇ ವಾಸ್ತು ಶಿಲೆಯನ್ನು ಸ್ಥಾಪಿಸಬೇಕೆಂಬ ಸಂಕಲ್ಪ ಬೆಳ್ಳಾವೆ ವೆಂಕಟನಾರಾಯಣಪ್ಪ ಅವರದಾಗಿತ್ತು. ಆದರೆ, ಆವೇಳೆಗೆ ಶ್ರೀನಿವಾಸರಾಯರು ಅನಾರೋಗ್ಯಕ್ಕೆ ಒಳಗಾಗಿ ನಡೆಯುವ ಹಂತದಲ್ಲಿ ಸಹ ಇರಲಿಲ್ಲ. ಆದರೂ, ಅವರನ್ನು ಒಂದು ಕಾರಿನಲ್ಲಿ ಕರೆತಂದು ರಸ್ತೆಯಲ್ಲಿ ನಿಲ್ಲಿಸಿ ಇವರ ಕೈಗೆ ದಾರದ ಒಂದು ಕೊನೆಯನ್ನು ಕೊಟ್ಟು ಇನ್ನೊಂದು ತುದಿಗೆ ಕರಣೆಯನ್ನು ಕಟ್ಟಿ ಎಳೆಯುವುದರ ಮೂಲಕ ಅಸ್ತಿ ಭಾರವನ್ನು ಹಾಕಿಸಲಾಯಿತು.

ಹೀಗಾಗಿ, ನಿಜವಾದ ಅರ್ಥದಲ್ಲಿ ಸಾಹಿತ್ಯ ಪರಿಷತ್ತಿನ ಬೆಳವಣಿಗೆಗೆ ಇವರು ಸೂತ್ರಧಾರರಾದರು. ಹಾಸನದ ಐದನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದಲ್ಲದೆ ಪ್ರತಿಯೊಂದು ಸಮ್ಮೇಳನದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಸಮ್ಮೇಳನದ ಸಮಯದಲ್ಲಿ ಪ್ರತಿಯೊಬ್ಬರು ಒಂದೊಂದು ಶ್ಲೋಕವನ್ನು ಅಥವಾ ಪದ್ಯವನ್ನು ಹೇಳುವಂತೆ ಪ್ರೇರೇಪಿಸುತ್ತಿದ್ದರು. ಇವರ ಪ್ರೋತ್ಸಾಹ ಮತ್ತು ಧನಸಹಾಯದಿಂದ

ಹಲವಾರು ಆಯುರ್ವೇದ ಕೀರ್ತನ ಸಮ್ಮೇಳನಗಳು ನಡೆದವು. ದೇಸಿ ವಿದ್ಯಾಶಾಲೆ (ನ್ಯಾಷನಲ್ ಹೈಸ್ಕೂಲ್) ಕಟ್ಟಡ ನಿರ್ಮಾಣಕ್ಕೆ ಇವರು ವಿಶೇಷ ಸಹಾಯ ನೀಡಿದರು. ಚಾಮರಾಜ ಪೇಟೆಯ ಮೊದಲನೇ ಕ್ರಾಸ್‌ನಲ್ಲಿರುವ ಸಂಸ್ಕೃತ ಕಾಲೇಜಿನ ವಿನ್ಯಾಸ ಮತ್ತು ನಿರ್ಮಾಣಕ್ಕೂ ಕಾರಣರಾಗಿದ್ದರು. ಚಾಮರಾಜಪೇಟೆಯ ರಾಮೇಶ್ವರ ಗುಡಿಯ ಜೀರ್ಣೋದ್ಧಾರ, ಆಂಜನೇಯ ಗುಡಿಯ ದುರಸ್ತಿ ಇವುಗಳಲ್ಲೆಲ್ಲ ಇವರ ಪಾತ್ರ ಮುಖ್ಯವಾಗಿತ್ತು. ಆರ್ಯಧರ್ಮ ಬೋಧನೆ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಧಾರ್ಮಿಕ ವಿಷಯಗಳು ಜನಸಾಮಾನ್ಯರಿಗೆ ದೊರಕುವ ವ್ಯವಸ್ಥೆ ಮಾಡಿದರು. ತಾವು ಸಂಪಾದಿಸಿದ ಹಣದ ಬಹುಭಾಗವನ್ನು ದಾನ-ಧರ್ಮಗಳಿಗೆ, ಲೇಖಕರಿಗೆ ಪ್ರೋತ್ಸಾಹ ನೀಡಲು, ವಿದ್ಯಾರ್ಥಿಗಳಿಗೆ ವ್ಯಾಸಂಗ, ಗ್ರಂಥ ಪ್ರಕಟಣೆ ಮುಂತಾದ ಸತ್ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದರು.

ಇವರು ಪುಣೆಯಲ್ಲಿದ್ದಾಗ ಸ್ವಾಮಿ ವಿವೇಕಾನಂದರನ್ನು ಕಾಣುವ ಅವಕಾಶ ಸಿಕ್ಕಿ ಅವರಿಂದ ಪ್ರೇರಿತರಾಗಿ ತಮ್ಮ 35ನೇ ವಯಸ್ಸಿನಲ್ಲಿ ಸಂಸ್ಕೃತವನ್ನು ಕಲಿಯ ತೊಡಗಿದರು. ಸ್ವಲ್ಪ ಸಮಯದಲ್ಲೇ ದ್ವೈತ ,ವಿಶಿಷ್ಟಾದ್ವೈತ ಸಿದ್ಧಾಂತಗಳಲ್ಲಿ ಪಾಂಡಿತ್ಯ ಪಡೆದು ಸಂಸ್ಕೃತ ಭಾಷೆಯಲ್ಲಿ ನಿರರ್ಗಳವಾಗಿ ಉಪನ್ಯಾಸ ನೀಡುವ ಸಾಮರ್ಥ್ಯವನ್ನು ಪಡೆದರು. ಇವರು ರಾಷ್ಟ್ರ ನಾಯಕರಾಗಿದ್ದ ಬಾಲಗಂಗಾಧರ ತಿಲಕರ ಕಟ್ಟಾ ಅಭಿಮಾನಿ. ಅವರ ಕೇಸರಿ ಪತ್ರಿಕೆಯ ಬಗ್ಗೆ ಅಪಾರ ಅಭಿಮಾನ ಮತ್ತು ಮಮತೆ. ತಿಲಕರು ನಿಧನರಾದಾಗ ಹತ್ತನೆಯ ದಿನ 100 ಸಂಗಡಿಗರನ್ನು ಒಗ್ಗೂಡಿಸಿ ಕೆಂಪಾಂಬುದಿ ಕೆರೆ ಹೋಗಿ ಸ್ನಾನಮಾಡಿ ಧರ್ಮೋದಕ ಕೊಟ್ಟಿದ್ದರಂತೆ.

ಗೋಪಾಲಕೃಷ್ಣ ಗೋಖಲೆಯವರು ಇವರ ನಿಕಟವರ್ತಿಗಳು. ಈ ಬಗ್ಗೆ ಡಿವಿಜಿಯವರು ಒಂದು ನಿದರ್ಶನವನ್ನು ಉಲ್ಲೇಖಿಸುತ್ತಾರೆ. 1915ರ ಫೆಬ್ರುವರಿಯಲ್ಲಿ ಇವರು ನಿಧನರಾದಾಗ ಶೋಕ ಸಭೆಯನ್ನು ಏರ್ಪಡಿಸಿ ಅಧ್ಯಕ್ಷತೆಯನ್ನು ವಹಿಸಲು ಸರ್ ಎಂ ವಿಶ್ವೇಶ್ವರಯ್ಯನವರನ್ನು ಆಹ್ವಾನಿಸುತ್ತಾರೆ. ಅವರು ಕರ್ಪೂರ ಶ್ರೀನಿವಾಸರಾಯರು ಈ ಸ್ಥಾನಕ್ಕೆ ಸೂಕ್ತ ವ್ಯಕ್ತಿ ಎಂದು ಸೂಚಿಸಿ, ಅವರ ಬಗ್ಗೆ ಹೀಗೆ ನುಡಿದಿದ್ದರು.'.... ಅವರು, ಗೋಖಲೆಯವರು ಸಹಪಾಠಿಗಳು. ಒಂದೇ ಕ್ಲಾಸಿನಲ್ಲಿ ಇದ್ದವರು. ನಾನು ಅವರಿಗಿಂತ ಒಂದೆರಡು ವರ್ಷ ಹಳಬ. ಗಣಿತಶಾಸ್ತ್ರದಲ್ಲಿ ಗೋಕಲೆ ಅವರಿಗಿಂತ ಇವರೇ ಮೇಧಾವಿ ಎನ್ನಬಹುದು. ನಡವಳಿಕೆಯಲ್ಲಿ ಪ್ರಾಮಾಣಿಕರು. ಪರಿಪೂರ್ಣ ದೇಶಾಭಿಮಾನಿಗಳು ಮತ್ತು ನಿರ್ಭೀತರು. ಅವರು ಅಧ್ಯಕ್ಷರಾದರೆ ನಾನು ಬರುತ್ತೇನೆ....'.


ಹೀಗೆ, ನಗರದ ಸಾಹಿತ್ಯ ಹಾಗೂ ಸಮಾಜ ಸೇವೆ ಸಲ್ಲಿಸಿದ ಇವರು 1932ರ ಜೂನ್ 2 ರಂದು ದೈವಾಧೀನರಾದರು. ಇವರೊಡನೆ ಸಂಪರ್ಕ ವಿದ್ದ ಸುಭೋದರಾಮರಾಯರು, 'ಮಾಧ್ವ ಧುರೀಣ ದಿವಂಗತ ಕರ್ಪೂರ ಶ್ರೀನಿವಾಸರಾಯರು' ಎಂಬ ಲೇಖನವನ್ನು ಬರೆದರು. ಡಿವಿಜಿಯವರು ತಮ್ಮ ಸಾಹಿತ್ಯೋಪಾಸಕರು ಲೇಖನ ಮಾಲೆಯಲ್ಲಿ ಇವರ ಹಲವಾರು ವಿಷಯಗಳ ಬಗ್ಗೆ ಬರೆದಿದ್ದಾರೆ. ಕಾವ್ಯ ಸಂಬಂಧಿತ ಶಾಸ್ತ್ರೀಯ ವಿಚಾರಗಳನ್ನು ಕುರಿತು ಇವರು ಬರೆದ ಲೇಖನಗಳನ್ನು ಸಂಪಾದಿಸಿ ಸಾಹಿತ್ಯಶಾಸ್ತ್ರ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪರಿಷತ್ತು 1971 ರಲ್ಲಿ ಪ್ರಕಟಿಸಿತು.



ವಾಣಿ ಪ್ರಾಪರ್ಟೀಸ್
ಬೆಂಗಳೂರು
ಸೈಟುಗಳು ಮಾರಾಟಕ್ಕಿವೆ @ ಅಗರ ವಿಲೇಜ್
ರೆವಿನ್ಯೂ ಅಂಡ್ ಡಿ.ಸಿ. ಕನ್ವೆಷನ್ ಸೈಟ್‌ಗಳು
ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆ
ಬ್ಯಾಂಕ್ ಲೋನ್ ಸಿಗುತ್ತದೆ
ಸಂಪರ್ಕಿಸಿ :
9739703291 / 9731591891

# ಆಚಾರ್ಯ ವಿನೋಬಾ ಭಾವೆ

– ಛಾಯಾಪತಿ ಕೆ.ಎನ್.
(ಮಹಾಸಭಾ ಉಪಾಧ್ಯಕ್ಷರು)



ನೀಳಕಾಯ, ಹೊಟ್ಟೆ ಬೆನ್ನಿಗೆ ಅಂಟಿಕೊಂಡಂತಿರುವ ಬಡಕಲು ಶರೀರ, ಅಸ್ತವ್ಯಸ್ತ ತಲೆ ಕೂದಲು, ಮುಖದಲ್ಲಿ ಬೇಕಾಬಿಟ್ಟಿ ಬೆಳೆದ ಗಡ್ಡ ಮೀಸೆ,ಮಾನ ಮುಚ್ಚಲು ಒಂದು ತುಂಡು ಪಂಚೆ,ಆಗಾಗ ತಲೆ ಮತ್ತು ಕುತ್ತಿಗೆಗೆ ಸುತ್ತಿಕೊಂಡ ಒಂದು ವಸ್ತ್ರ, ಅರೆಬೆತ್ತಲೆಯ ಮನುಷ್ಯ, ಅಂದ ಮಾತ್ರಕ್ಕೆ ಇದು ಬಡತನದ ಪ್ರತೀಕವಲ್ಲ ಸರಳತೆ ಮತ್ತು ಸದಾಕಾಲ ಸೇವಾ ನಿರತ ಶ್ರೇಷ್ಠ ಶ್ರೀಮಂತ ವ್ಯಕ್ತಿತ್ವದ ವ್ಯಕ್ತಿಚಿತ್ರಣ ಅವರೇ ಸಂತ ವಿನೋಬಾ ಭಾವೆ.ಇಂತಹ ಮಹಾತ್ಮರ ಜೀವನ ಕುರಿತು ಬರೆಯುವುದು ಬಹಳ ಕಷ್ಟದ ಕೆಲಸ. ಆ ಬದುಕು ಸಾಮಾನ್ಯ ವಾಗಿ ಮುಷ್ಟಿಗೆ ಹಿಡಿಸುವಂತಹದ್ದಲ್ಲ. ಸಾಮಾನ್ಯ ದೃಷ್ಟಿಗೂ ಸಿಲುಕುವಂತಹದ್ದಲ್ಲ. ಗಾಂಧೀಜಿಯವರ ಶಿಷ್ಯನಾಗಿ ಬೆಳೆದು ಗಾಂಧಿಜಿಗೆ ಸರಿಸಾಟಿ ಎನಿಸಿದರು. ಗಾಂಧೀಜಿ ಮತ್ತು ವಿನೋಬಾ ಭಾವೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಾಧ್ಯವಿದ್ದಷ್ಟು ಕಡಿಮೆ ಮಾತು ಹೆಚ್ಚು ಕೆಲಸ, ಸ್ವಂತ ಸುಖ ಸೌಲಭ್ಯಗಳ ಬಗ್ಗೆ ಅಲಕ್ಷ, ಅನ್ಯರ ಬಗ್ಗೆ ಕೋಮಲ ಭಾವ, ಮನಸ್ಸಿನಲ್ಲಿರುವ ಒಳ್ಳೆಯ ವಿಚಾರಗಳನ್ನು ಆಡುವುದು, ಮತ್ತು ಆಡಿದಂತೆ ಮಾಡುವುದು, ಅವರ ಕಣ್ಣಿನಲ್ಲಿ ತೇಜಸ್ಸು, ಮಾತಿನಲ್ಲಿ ಪಾವಿತ್ರ್ಯ, ಹೃದಯದಲ್ಲಿಕರುಣೆ, ಆತ್ಮದಲ್ಲಿ ದಿವ್ಯ ಶಕ್ತಿ, ಜ್ಞಾನದಭಂಡಾರ, ಕರ್ಮಶೀಲತೆಯ ಅವತಾರ, ಪ್ರಾಚೀನ ಕಾಲದ ಋಷಿ,ಮಧ್ಯ ಯುಗದ ಸಂತ, ಆಧುನಿಕ ಕಾಲದ ಮಹಾತ್ಮ. ಅವರು ರಾಜರಲ್ಲ, ಧನಿಕರಲ್ಲ, ಅಧಿಕಾರಿಗಳಲ್ಲ, ಸಮಾಜದ ಮುಖಂಡರಲ್ಲ, ಅವರಿಗೆ ದುಡ್ಡಿನ ಲೋಭವಿಲ್ಲ, ಸ್ಥಾನಮಾನಗಳ ಆಸೆ ಇಲ್ಲ, ತ್ಯಾಗ ತಪಸ್ಸುಗಳೇ ಅವರ ಸಂಪತ್ತು,ಸೇವೆ ಸ್ವಾರ್ಥತ್ಯಾಗಗಳೇ ಅವರ ಬಂಡವಾಳ, ಹೀಗಾಗಿ ರಾಜ ಮಹಾರಾಜರೆಲ್ಲ ಅವರಿಗೆ ಸನ್ಮಾನಿಸುತ್ತಾರೆ.ಲೋಕ ನಾಯಕರೆಲ್ಲ ಅವರ ಬಗ್ಗೆ ಶ್ರದ್ಧೆ ವಹಿಸುತ್ತಾರೆ.

ಅವರ ಪ್ರವೃರ್ತಿ ಎಂದರೆ ತೊಡಲಿಕ್ಕೆ ಚಿಕ್ಕ ಪಂಚೆ, ಸಾಧಾರಣ ಆಹಾರ, ಕೈನಲ್ಲಿ ಕಾಸಿರುವುದಿಲ್ಲ, ಅನ್ಯ ವಸ್ತುಗಳ ಸಂಗ್ರಹವಿಲ್ಲ. ಅವರ ಪ್ರಕಾರ ದೊಡ್ಡಸ್ತಿಕೆ ಎಂಬುದು ಭೋಗ ದಲ್ಲಿಲ್ಲ ತ್ಯಾಗದಲ್ಲಿದೆ, ಆಡಂಬರದಲ್ಲಿಲ್ಲ ಸರಳತೆಯಲ್ಲಿದೆ, ಸುಖ ಸೌಕರ್ಯಗಳಲ್ಲಿಲ್ಲ ಕಠೋರ ಪರಿಶ್ರಮದಲ್ಲಿದೆ, ಸ್ವಾರ್ಥ ಸಾಧನೆಯಲ್ಲಿಲ್ಲ ಪರಹಿತಕ್ಕಾಗಿ ದುಡಿಯುವುದರಲ್ಲಿದೆ,ಇದು ವಿನೋಬಾರವರ ವಿಚಾರ ಮತ್ತು ಆಚಾರ.

ಇಂತಹ ಸರಳ ಜೀವನ ಉನ್ನತ ಚಿಂತನೆಯ ವ್ಯಕ್ತಿಯ ಬಗ್ಗೆ ಅವರ ಜೀವನ, ಅವರ ವಿದ್ಯೆ, ಅವರು ಮಾಡಿದ ಸೇವಾ ಕಾರ್ಯ, ಸಂತ ಜೀವನ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿ, ಸತ್ಯಾಗ್ರಹ, ಸೆರೆವಾಸ, ಸಾಮಾಜಕ್ಕೊಸ್ಕರ ಮಾಡಿದ ಸಾಧನೆಗಳು, ಸಾಮಾಜಿಕ ಮತ್ತು ಆಧ್ಯಾತ್ಮಿಕ ಕಾರ್ಯಗಳು, ಇವುಗಳನ್ನು ನಮ್ಮ ಕೈನಲ್ಲಿ ಮಾಡಲಾಗದಿದ್ದರೂ ಸಾಧನೆ ಮಾಡಿದವರನ್ನು ತಿಳಿದುಕೊಳ್ಳದಿದ್ದರೆ ಮತ್ತು ಸ್ಮರಿಸಿಕೊಳ್ಳದಿದ್ದರೆ ನಾವು ಕೃತಘ್ನರಾಗುತ್ತೇವೆ. ಮರಣೋತ್ತರ ಭಾರತ ರತ್ನ ಉತ್ತುಂಗ ಪ್ರಶಸ್ತಿ ಪಡೆದ ವಿನೋಬ ಹುಟ್ಟಿದ್ದು ಒಂದು ಸಣ್ಣ ಹಳ್ಳಿಯಲ್ಲಿ ಮಹಾರಾಷ್ಟ್ರದ ಕೋಲಾಬಾ ಜಿಲ್ಲೆಯ ಗಾಗೋದೆ ಎಂಬ ಚಿಕ್ಕ ಹಳ್ಳಿಯ ಒಂದು ಮಧ್ಯಮ ವರ್ಗದ ಬ್ರಾಹ್ಮಣ ಕುಟುಂಬದಲ್ಲಿ. ತಂದೆ ನರಹರಿ ಶಂಭೂರಾವ್ ಭಾವೆ. ತಾಯಿ ಋಕ್ಮಿಣಿದೇವಿ ತಾಯಿ ಕರ್ನಾಟಕದ ಜಮಖಂಡಿ ಮೂಲದವರು. ದಿನಾಂಕ 11 ಸೆಪ್ಟೆಂಬರ್ 1895 ರಂದು ಜನಿಸಿದರು.ನಾಲ್ಕು ಮಕ್ಕಳಲ್ಲಿ ಹಿರಿಯರಾದ ವಿನೋಬಾ ಇಡೀ ದೇಶಕ್ಕೆ ಹಿರಿಯಣ್ಣನಾದರು. ವಿನೋಬಾರವರ ಮೂಲ ಹೆಸರು ವಿನಾಯಕ.ಅವರ ತಾತ ಶಂಭುರಾವ್ ಭಾವೆಯವರ ಮಾರ್ಗದರ್ಶನದಲ್ಲಿ ಧಾರ್ಮಿಕ ಶ್ರದ್ಧೆ ಬೆಳೆಸಿಕೊಂಡು ಬೆಳೆದರು. ಜೊತೆಗೆ ತಾಯಿಯ ಭಕ್ತಿಭಾವ,ಪೂಜೆ,ಉಪವಾಸ, ವ್ರತಗಳು, ಹಬ್ಬಹರಿದಿನಗಳ ಆಚರಣೆ, ಇವೆಲ್ಲಾ ಅವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು. ಗಾಗೋದೇ 80–90 ಮನೆಗಳಿರುವ ಒಂದು ಚಿಕ್ಕ ಹಳ್ಳಿ. ಇದ್ದವರೆಲ್ಲರೂ ಆರ್ಥಿಕವಾಗಿ ಬಡವರೆ. ಆದರೆ ಆ ಊರಿನವರೆಲ್ಲರೂ ತುಂಬಾ ಭಕ್ತಿ ಭಾವದಿಂದ ದೇವರನ್ನು ಭಜಿಸುತ್ತಿದ್ದರು. ನೆಮ್ಮದಿಯಿಂದ ಇದ್ದರು.ವಿನೋಬಾ ರವರ ಪ್ರಾಥಮಿಕ ಶಿಕ್ಷಣ ಅಲ್ಲಿಯೇ ಆಯಿತು. ವಿನೋಬಾ 9 ವರ್ಷ ಅಲ್ಲೇ ಬೆಳೆದರು. ನಂತರ ಅವರ ತಂದೆಯವರು ವೃತ್ತಿಗೋಸ್ಕರ ಬಡೋದೆ ಎಂಬ ಊರಿಗೆ ಬಂದು ನೆಲೆಸಿದರು. ವಿನೋಬಾ 1914ರಲ್ಲಿ ಮೆಟ್ರಿಕ್ ಪರೀಕ್ಷೆ ಪಾಸ್ ಮಾಡಿದರು. ಅವರ ಮನೆತನ ಆಧ್ಯಾತ್ಮಿಕತೆಯ ನ್ನು ಮೈಗೂಡಿಸಿಕೊಂಡಿತ್ತು.ಜೊತೆಗೆ ರಾಷ್ಟ್ರೀಯ ಚಿಂತನೆಗಳಿಂದ ಕೂಡಿದ ಗೃಹವಾಗಿತ್ತು .

ರಾಷ್ಟ್ರದ ಬಗ್ಗೆ ಚಿಂತನೆ ಮಾಡುವ ಅನೇಕ ವ್ಯಕ್ತಿಗಳು ಇವರ ಮನೆಗೆ ಬಂದು ಚರ್ಚೆ ಸುತ್ತಿದ್ದರು. ಅಲ್ಲೇ ಸ್ವರಾಜ್ಯದ ಚರ್ಚೆಯು ನಡೆಯುತ್ತಿತ್ತು. ಪರಿಣಾಮ ವಿನೋಬರಿಗೂ ದೇಶಭಕ್ತಿಯ ವಿಚಾರ ಮನೆವಾಡಿತು.ಅವರ ಮಿತ್ರರೊಡನೆ ಇದನ್ನು ಚರ್ಚಿಸುತ್ತಿದ್ದರು. ಅವರಿಗೂ ದೇಶ ಸೇವೆಯ ಭಾವನೆ ಉಕ್ಕೇರುವಂತೆ ಮಾಡುತ್ತಿದ್ದರು.ಲೋಕಮಾನ್ಯ ತಿಲಕರ 'ಗೀತಾರಹಸ್ಯ' ಮತ್ತು ಅವರ ಪತ್ರಿಕೆ 'ಕೇಸರಿ'ಯನ್ನು ದಿನನಿತ್ಯವೂ ಓದುತ್ತಿದ್ದರು.

**ಜೀವನದತಿರುವು ಮತ್ತು ಗುರಿಯತ್ತ ಹೊರಟ ವಿನೋಬಾ :**

ವಿನೋಬರು ಕಾಲೇಜಿನಲ್ಲಿದ್ದಾಗಲೇ ಮೊದಲನೇ ಮಹಾಯುದ್ಧ ನಡೆಣಟಜಜಜಿಟಜಜತ್ತಿತ್ತು. ಭಾರತದಲ್ಲಿ ಸ್ವಾತಂತ್ರ್ಯದ ತಂಗಾಳಿ ಬೀಸಹತ್ತಿತು. ಲಕ್ಷಾಂತರ ತರುಣರು ಹೋರಾಟಕ್ಕೆ ಇಳಿದಿದ್ದರು. ಆಗಾಗಲೇ ಎಷ್ಟೋ ಕಡೆ ಕ್ರಾಂತಿಕಾರರ ಉಗಮವಾಗಿತ್ತು. ಅವರು ಶಸ್ತ್ರಾಸ್ತ್ರ ಸಂಗ್ರಹಿಸಿ ಸಂಘಟನೆ ಮಾಡುತ್ತಿದ್ದರು ಮತ್ತು ಅನೇಕ ಪ್ರಾಂತಗಳಲ್ಲಿ ಕ್ರಾಂತಿಕಾರಿಕ

ಚಟುವಟಿಕೆಗೆ ಸಿದ್ಧತೆ ನಡೆಸುತ್ತಿದ್ದರು. ಆಗ ಈ ತರುಣ ವಿನೋಬನಿಗೂ ಕ್ರಾಂತಿಕಾರಿಕ ಬಡಿತ ಎದೆಯಲ್ಲಿ ಶುರುವಾಯಿತು. ದೇಶದ ದುಸ್ಥಿತಿ ನೋಡಿ ದುಃಖವಾಗಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ಅವರಮನಸ್ಸಿನಲ್ಲಿ ತಳಮಳ ಶುರುವಾಯಿತು. 1916ರಲ್ಲಿ ವಿನೋಬರ ಇಂಟರ್ಮೀಡಿಯಟ್ ಪರೀಕ್ಷೆ ನಡೆಯುವುದಿತ್ತು. ಪರೀಕ್ಷೆಗೆ ಕೂರಲು ಮುಂಬೈಗೆ ಹೋಗಬೇಕಿತ್ತು. ತಮ್ಮ ಸ್ನೇಹಿತರೊಂದಿಗೆ ಮುಂಬೈಗೆ ಹೊರಟರು. ಆ ವೇಳೆಗಾಗಲೇ ಅವರ ಮನಸ್ಸಿನಲ್ಲಿ ಸ್ವಂತ ಜೀವನ ತೊರೆದು ರಾಷ್ಟ್ರಮುಖಿಯಾಗಿ ಬಾಳಬೇಕು, ದೀನ ದಲಿತರ ಸೇವೆ ಮಾಡಬೇಕು, ದೇಶದ ಸ್ವಾತಂತ್ರ್ಯಕ್ಕೆ ಹೋರಾಡಬೇಕು ಎಂಬ ಪರಿಕಲ್ಪನೆ ಬೇರೂರಿ ಸಂಕಲ್ಪ ಮಾಡಿಯಾಗಿತ್ತು. ಮುಂಬೈ ತಲುಪದೇ ಸ್ನೇಹಿತರು ಹೇಳಿದರೂ ಕೇಳದೆ ಮಧ್ಯದಲ್ಲಿ ಸೂರತ್ ನಿಲ್ದಾಣದಲ್ಲಿ ಇಳಿದರು. ಅಲ್ಲಿಂದ ಬಂಗಾಳಕ್ಕೆ ಹೊರಟರು. ಅಲ್ಲಿ ಕ್ರಾಂತಿಕಾರಿಗಳನ್ನು ಭೇಟಿಯಾದರು. ಅಲ್ಲಿಂದ ನೇರವಾಗಿ ಕಾಶಿಗೆ ಹೊರಟರು. ಅಲ್ಲಿ ಸಂಸ್ಕೃತ ಭಾಷೆ ಕಲಿತರು. ಧಾರ್ಮಿಕ ಗ್ರಂಥ ಓದಿದರು. ಆಧ್ಯಾತ್ಮಿಕ ಸಾಧನೆಗೈದರು. ಪ್ರತಿನಿತ್ಯ ಯೋಗಾಸನ, ಪ್ರಾಣಾಯಾಮ, ಆರಂಭಿಸಿದರು. ಆ ಸಮಯದಲ್ಲಿ ಮದನ ಮೋಹನ ಮಾಳವಿಯರು ಬೆನಾರಸ್ ವಿಶ್ವವಿದ್ಯಾ ನಿಲಯದ ಉದ್ಘಾಟನೆ ಕಾರ್ಯಕ್ರಮ ಏರ್ಪಡಿಸಿದ್ದರು ಅದಕ್ಕೆ ಅನೇಕ ವಿದ್ವಾಂಸರು, ರಾಜಮಹಾರಾಜರು, ದಾನಿಗಳನ್ನು ಆಹ್ವಾನಿಸಿದ್ದರು. ಆಗ ತಾನೇ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ್ದ ಗಾಂಧೀಜಿಯವರನ್ನೂಆಹ್ವಾನಿಸಿದ್ದರು.

ಆ ಕಾರ್ಯಕ್ರಮದಲ್ಲಿ ಗಾಂಧೀಜಿಯವರು ದೇಶದ ಸ್ಥಿತಿಗತಿ, ದಾಸ್ಯತೆ, ಆಂಗ್ಲರ ಕ್ರೂರ ಆಡಳಿತ ಖಂಡಿಸಿ ಉದ್ರೋಭದಕವಾಗಿ ಮಾತನಾಡಿದರು. ಅವರ ಮಾತಿನ ಬಗ್ಗೆ ತುಂಬಾ ಚರ್ಚೆ ಆಯಿತು. ವೃತ್ತ ಪತ್ರಿಕೆಯಲ್ಲೂ ಸಹ ಪ್ರಕಟವಾಯಿತು. ಅದನ್ನು ಓದಿದ ವಿನೋಬರು ಬಹಳ ಪ್ರಭಾವಿತರಾದರು. ನಂತರ ಗಾಂಧೀಜಿಯವರೊಂದಿಗೆ ವಿನೋಬರ ಪತ್ರ ವ್ಯವಹಾರ ಪ್ರಾರಂಭವಾಯಿತು. ವಿನೋಬರಿಗೆ ಒಮ್ಮೆ ಗಾಂಧೀಜಿಯವರು ಆಶ್ರಮಕ್ಕೆ ಬಾ ಇಲ್ಲಿ ಕುಳಿತು ಮುಖಾಮುಖಿ ಚರ್ಚಿಸೋಣ ಎಂದರು. ಅದನ್ನೇ ಕಾಯುತ್ತಿದ್ದ ವಿನೋಬಾ 1916 ಜೂನ್ 7ರಂದು ಅಹಮದಾಬಾದಿಗೆ ತೆರಳಿ ಸಾಬರಮತಿ ಆಶ್ರಮ ಸೇರಿದರು. 20 ವರ್ಷದ ನವ ಯುವಕನಿಗೆ ಅವನ ಮನದಾಸೆ ಈಡೇರಿಸಿಕೊಳ್ಳುವ ಅವಕಾಶ ಒದಗಿ ಬಂದಿತ್ತು. ಆಶ್ರಮದಲ್ಲಿ ಅವನನ್ನು ಸ್ವಾಗತಿಸಿದರು. ಅಡುಗೆ ಮನೆಯಲ್ಲಿ ತರಕಾರಿ ಹೆಚ್ಚುತ್ತಿದ್ದ ಗಾಂಧೀಜಿ ಯವರನ್ನುನ್ನು ಅಲ್ಲಿಯೇ ಭೇಟಿಮಾಡಿಸಿದರು. ಮಾತುಕತೆಯಲ್ಲಿ ವಿನೋಬರ ವಿಚಾರ, ಪ್ರತಿಭೆ, ಮಾತೃಭೂಮಿ ಮುಕ್ತಿಗೆ ಇದ್ದ ಉತ್ಕಟ ಇಚ್ಛೆ ನೋಡಿ ಗಾಂಧೀಜಿಗೆ ಅತಿ ಆನಂದವಾಗಿಆಶ್ರಮ ನಿವಾಸಿಯಾಗಿ ಸೇರಿಸಿಕೊಂಡರು.ಆಶ್ರಮದ ಸರಳತೆ,ಶಿಸ್ತು, ಸೇವಾ ಕಾರ್ಯ, ರಾಷ್ಟ್ರಭಕ್ತಿಯ ಪ್ರೇರಣೆ, ಇವೆಲ್ಲವನ್ನು ವಿನೋಬಾ ಮೈಗೂಡಿಸಿಕೊಂಡು ಬೆಳೆದರು.ಜೊತೆ ಜೊತೆಗೆ ಆ ಆಶ್ರಮವು ಅಹಿಂಸಾತ್ಮಕವಾಗಿ ಸ್ವಾತಂತ್ರ ಹೋರಾಟ ಮಾಡಬೇಕೆಂಬ ಶಿಕ್ಷಣದ ಕೇಂದ್ರವಾಗಿಯೂ ಬೆಳೆಯುತ್ತಿತ್ತು . ವಿನೋಬರಿಗೆ ಬಯಸಿದ್ದೇ ದೊರೆಯಿತು.

**ಸತ್ಯಾಗ್ರಹ ಮತ್ತು ಸೆರೆವಾಸ :**

ವಿನೋಬಾರವರ ಮೊಟ್ಟ ಮೊದಲ ಬಾರಿಯ ಸತ್ಯಾಗ್ರಹ ಮತ್ತು ಸೆರೆವಾಸ ಧ್ವಜ ಸತ್ಯಾಗ್ರಹದ ಮೂಲಕ ಪ್ರಾರಂಭವಾಯಿತು. ಸರ್ಕಾರಿ ಕಟ್ಟಡಗಳ ಮೇಲೆ, ಖಾಸಗಿ ಕಟ್ಟಡಗಳಮೇಲೆ ನಮ್ಮ ರಾಷ್ಟ್ರಧ್ವಜವನ್ನು ಹಾರಿಸಲು ಬ್ರಿಟಿಷ್ ಸರ್ಕಾರ ನಿರ್ಬಂಧ ಹೇರಿತು. ಈ ನಿರ್ಭಂದದ ವಿರುದ್ಧ ಪ್ರಾರಂಭವಾದದ್ದೆ ಧ್ವಜ ಸತ್ಯಾಗ್ರಹ. ಇದನ್ನ ದಮನ ಮಾಡಲು ಬ್ರಿಟಿಷ್ ಸರ್ಕಾರ ಏನೇ ಪ್ರಯತ್ನ ಮಾಡಿದರೂ ದೇಶದಲ್ಲೆಲ್ಲಾ ಕಾಡ್ಗಿಚ್ಚಿನಂತೆ ಹಬ್ಬಿ ಎಲ್ಲಾ ಕಡೆಯೂ ಪ್ರಾರಂಭ ವಾಯಿತು. 1923 ಏಪ್ರಿಲ್ 13 ರಂದು ನಾಗಪುರದಲ್ಲಿ ಧ್ವಜ ಮೆರವಣಿಗೆ ನಡೆಯುವು ದಿತ್ತು.ಬೇರೆ ಬೇರೆ ಕಡೆಗಳಿಂದ ಜನರು ನಾಗಪುರಕ್ಕೆ ಬರಲಾರಂಭಿಸಿದರು. ಇದನ್ನು ನೋಡಿದ ವಿನೋಬರು ರಾಷ್ಟ್ರಧ್ವಜಕ್ಕೆ ಅಪಮಾನ ನನಗಾದ ಅಪಮಾನ ಎಂದು ಸತ್ಯಾಗ್ರಹದಲ್ಲಿ ಧುಮಕಲು ಸಿದ್ಧರಾದರು. ಇದನ್ನು ತಿಳಿದ ಪೊಲೀಸರು ಮುಂಚಿತವಾಗಿಯೇ ಅವರನ್ನು ಬಂಧಿಸಿ ಜೈಲಿಗೆ ಅಟ್ಟಿದರು. ಬಂಧಿಕಖಾನೆಯಲ್ಲಿ ಸತ್ಯಾಗ್ರಹಗಳಿಗೆಲ್ಲಾ ಕಠೋರ ಶಿಕ್ಷೆ ಕೊಟ್ಟು ಬಹಳ ಅಮಾನೀಯವಾಗಿ ನಡೆಸಿಕೊಳ್ಳುತ್ತಿದ್ದರು. ವಿನೋಬಾರವರನ್ನು ನೋಡಲು ಹೋದವರು ಅವರನ್ನು ಹೇಗಿದ್ದೀರಿ ಎಂದು ಪ್ರಶ್ನಿಸಿದರೆ, ನೀವು ಸರ್ಕಸ್ ನೋಡಿದ್ದೀರಾ ಅಲ್ಲವೇ ಅಲ್ಲಿ *ಮನುಷ್ಯರು ಪ್ರಾಣಿಗಳನ್ನು ತಮಗೆ ಅನುಸಾರವಾಗಿ ನಡೆಯುವಂತೆ ಮಾಡುತ್ತಾರೆ, ಇಲ್ಲಿಯ ಸೆರೆಮನೆಯಲ್ಲಿ ಅದು ತಲೆಕೆಳಗು ಇಲ್ಲಿ ಪ್ರಾಣಿಗಳು ಮನುಷ್ಯರನ್ನು ತಮ್ಮ ಆಜ್ಞೆಗೆ ಅನುಗುಣವಾಗಿ ನಡೆಯುವಂತೆ ಮಾಡುತ್ತವೆ.

1930ರಲ್ಲಿ ಪ್ರಸಿದ್ಧಿ ಪಡೆದಿರುವ ಉಪ್ಪಿನ ಸತ್ಯಾಗ್ರಹ ಮತ್ತು ಕಾಯಿದೆ ಭಂಗ ಚಳುವಳಿ ಆರಂಭವಾಯಿತು. ಎಲ್ಲರೂ ಉಪ್ಪು ತಯಾರು ಮಾಡಿದರು ಮತ್ತು ಶೇಂದಿ ಗಿಡಗಳನ್ನು ಕತ್ತರಿಸಿ ಸತ್ಯಾಗ್ರಹ ಆರಂಭಿಸಿದರು. ವಿನೋಬರೂ ಕೂಡ ಶೇಂದಿ ಗಿಡವನ್ನು ಕತ್ತರಿಸಿ ಕಾಯಿದೆ ಭಂಗ ಮಾಡಿದರು. ಆದರೆ ಅವರನ್ನು ಸರ್ಕಾರ ಬಂಧಿಸಲಿಲ್ಲ. ವಿನೋಬರೊ ಸತ್ಯಾಗ್ರಹಿಗಳ ಸಂಘಟನೆ, ಸಭೆಗಳನ್ನು ಮಾಡಲು ಶುರು ಮಾಡಿದರು. ಪುನಃ 1432 ರಲ್ಲಿ ಸತ್ಯಾಗ್ರಹ ಪ್ರಾರಂಭವಾಯಿತು. ವಿನೋಬರು ಅದರಲ್ಲಿ ಧುಮುಕಿದರು. ಅಲ್ಲಲ್ಲಿ ಭಾಷಣವನ್ನು ಮಾಡುತ್ತಿದ್ದರು. ಆಗ ಸರ್ಕಾರ ಅವರನ್ನು ಬಂಧಿಸಿ ಧುಳೆ ಜೈಲಿನಲ್ಲಿಟ್ಟಿತು. ಜೈಲಿನಲ್ಲಿ ಅವರದ್ದು ಆದರ್ಶ ಜೀವನ.ಅವರಿಗೆ 'ಬಿ' ಕ್ಲಾಸ್ ಕೈದಿ ಎಂದು ಪರಿಗಣಿಸಿ ವಿಶೇಷ ಸವಲತ್ತು ನೀಡಿದರು.ಆದರೆ ಅದನ್ನು ಅವರು ತಿರಸ್ಕರಿಸಿ ಸಾಮಾನ್ಯ ಕೈದಿಗಳಿಗಿರುವ ಸವಲತ್ತು ನನಗೂ ಕೊಡಿ ಎಂದು 'ಸಿ' ಕ್ಲಾಸ್ ಆರಿಸಿಕೊಂಡರು. ಅಲ್ಲಿದ್ದ ಸಂಗಡಿಗರೆಲ್ಲ ಗೀತೆಯ ಮೇಲೆ ಪ್ರವ ಚನ ಮಾಡಿರೆಂದು ಕೇಳಿಕೊಂಡರು. ಅದಕ್ಕೆ ಒಪ್ಪಿ ವಾರಕ್ಕೆ ಒಂದು ದಿನ ಒಂದೊಂದು ಅಧ್ಯಾಯವನ್ನು ವಿವರಿಸುತ್ತಿದ್ದರು. ಸೆರೆಯಲ್ಲಿದ್ದ ಸಾನೆ ಗುರೂಜಿ ಅದೆಲ್ಲವನ್ನು ಬರೆದಿಡುತ್ತಿದ್ದರು. ಅದು ಪುಸ್ತಕವಾಗಿಯೂ ಹೊರಹೊಮ್ಮಿತು. ಗೀತೆಯ ಉಪನ್ಯಾಸ ನೀಡುವಾಗ ಅವರು ನನ್ನ ಶರೀರ ತಾಯಿಯ ಎದೆಹಾಲಿನಿಂದ ಬೆಳೆದಿದೆ, ಅದಕ್ಕೂ ಮಿಗಿಲಾಗಿ ನನ್ನ ಮನಸ್ಸು ಗೀತೆ ಯಿಂದ ಬೆಳೆದಿದೆ. ಗೀತೆಯೆಂದರೆ ನನ್ನ ಪ್ರಾಣ. ಗೀತೆಯ ಉಪನ್ಯಾಸ ಮಾಡುವಾಗ ನಾನು 'ಗೀತಾ ಸಮುದ್ರದ ಮೇಲೆ ತೇಲಾಡುತ್ತಿರು ತ್ತೇನೆ.' ನಾನೊಬ್ಬನೇ ಇದ್ದರೆ 'ಆ ಗೀತಾಮೃತದ ಕಡಲಲ್ಲಿ ಆಳವಾಗಿ ಮುಳುಗಿ ಕೊಳ್ಳುತ್ತೇನೆ, ಗೀತೆ ಎಂದರೆ ಸುಲಿದ ಬಾಳೆಹಣ್ಣಿನಂತೆ,ಸಿಗಿರು ತೆಗೆದ ಕಬ್ಬಿನಂತೆ' ಎಂದು ಹೇಳುತ್ತಿದ್ದರು.

1939ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು ಯುದ್ಧಕ್ಕಾಗಿ ಜನರನ್ನು ಕೊಡಿರಿ. ಹಣ ಕೊಡಿರಿ ಮತ್ತು ಎಲ್ಲರೂ ಯುದ್ಧಕ್ಕೆ ನೆರವಾಗಿ ಎಂದು ಬ್ರಿಟಿಷ್ ಸರ್ಕಾರ ಭಾರತೀಯರಿಗೆ ಹೇಳತೊಡಗಿತು. ಅದಕ್ಕೆ ಭಾರತೀಯರು ಯುದ್ಧವು ವಿನಾಶಕಾರಿ ಅದಕ್ಕೆ ನಾವು ದುಡ್ಡು ಕೊಡಲೊಲ್ಲೇವು. ಯುದ್ಧವು ನೀತಿಗೆ ವಿರುದ್ಧವಾದದ್ದು

ಅದಕ್ಕೆ ಜನರನ್ನು ಕೊಡಲೊಲ್ಲೆವು. ಯುದ್ಧದಿಂದ ಹಿತವಿಲ್ಲ. ಆದ್ದರಿಂದ ನಮ್ಮ ನೆರವಾಗುವಿಕೆಯೂ ಇಲ್ಲ. ಎಂದು ಜನರು ತಿರಸ್ಕರಿಸಿದರು. ಆದರೂ ಸರಕಾರ ಯುದ್ಧದಿಂದ ಹಿಂದೆ ಸರಿಯಲಿಲ್ಲ. ಆಗ ಗಾಂಧೀಜಿ ಯುದ್ಧವನ್ನು ವಿರೋಧಿಸಬೇ ಕೆಂದು ಜನತೆಗೆ ಕರೆಕೊಟ್ಟರು.ಎಲ್ಲಾ ಕಡೆಗಳಲ್ಲೂ ಯುದ್ಧ ವಿರೋಧಿ ಸತ್ಯಾಗ್ರಹ ಪ್ರಾರಂಭ ವಾಗಬೇಕು, ಅದರ ಮೊದಲ ತಂಡವನ್ನು ಯಾರು ಮುಂದಾಳಾಗಿ ನಡೆಸಬೇಕೆಂದು ಗಾಂಧೀಜಿ ಹುಡುಕುತ್ತಿದ್ದಾಗ, ಎಂತೆಂಥ ದುರೀಣರಿದ್ದರೂ ಗಾಂಧೀಜಿ ಆರಿಸಿದ್ದು ವಿನೋಬಾ ಭಾವೇಯವರನ್ನು.ವಿನೋಬಾ ಭಾವೆ ಅದಕ್ಕೆ ಒಪ್ಪಿದರು. ಅವರ ಹೆಸರನ್ನು ಘೋಷಣೆ ಮಾಡಿದರು.ವೃತ್ತ ಪತ್ರಿಕೆಗಳಲ್ಲಿ ವಿನೋಬಾರ ಹೆಸರು ಮೆರೆದಾಡಿತು. ಅವರಿಗೆ ಇಷ್ಟೊಂದು ಯೋಗ್ಯತೆ ಇರುವುದು ಯಾರಿಗೂ ತಿಳಿದಿರ ಲಿಲ್ಲ. ಘೋಷಣೆಯಾಗಿ ಎರಡು ಮೂರು ದಿನಗಳಲ್ಲಿ ವಿನೋಬಾರನ್ನು ದಸ್ತಗಿರಿ ಮಾಡಿ ಜೈಲಿಗೆ ಅಟ್ಟಿದರು. ಮೂರು ತಿಂಗಳನಂತರ ಬಿಡುಗಡೆಯಾಯಿತು. ಮತ್ತೆ ಸತ್ಯಾಗ್ರಹ ಮಾಡಿದರು ಮತ್ತೆ ಜೈಲು.ಬಿಡುಗಡೆ ಮತ್ತೆ ಸತ್ಯಾಗ್ರಹ ಮತ್ತೆ ಜೈಲು ಹೀಗೆ ಮೂರು ಬಾರಿ ಜೈಲಿಗೆ ಹೋದರು ಬಂದರು. ಜೈಲೇ ಅವರ ಮನೆಯಂತಾಗಿತ್ತು. ಅತ್ತ ಮಹಾ ಯುದ್ಧ ಜೋರಾಗಿ ಮುಂದುವರೆಯುತ್ತಿತ್ತು. ಬ್ರಿಟಿಷ್ ಸರಕಾರ ಯುದ್ಧಸಹಕಾರವನ್ನು ನಿಲ್ಲಿಸಿರಲಿಲ್ಲ. ಆಗ 1942 ರಲ್ಲಿ ಬ್ರಿಟಿಷರೆ ಭಾರತ ಬಿಟ್ಟು ತೊಲಗಿರಿ (Quit India) ಎಂದು ಹೋರಾಟ ಪ್ರಾರಂಭವಾಯಿತು. ಇಡೀ ದೇಶ ಅಹಿಂಸಾ ಯುದ್ಧದಲ್ಲಿ ಮುಳುಗಿತು. ಆಗ ವಿನೋಬಾರವರು ತಮ್ಮ ಆಶ್ರಮದ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದರು.ಆದರೂ ಸರ್ಕಾರ ಅವರನ್ನು ಬಂಧಿಸಿ ವೆಲ್ಲೂರು ಜೈಲಿಗೆ ಕಳಿಸಿತ್ತು. ಅಲ್ಲಿ ಅವರು ಒಂದು ವರ್ಷ ಕಳೆದರು. ಅಲ್ಲಿಂದ ಮಧ್ಯಪ್ರಾಂತದ ಶಿವನಿ ಜೈಲಿಗೆ ವರ್ಗಾಯಿಸಿದರು.ಕೊನೆಗೆ 1445ರಲ್ಲಿ ಬಿಡು ಗಡೆಯಾದರು. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿ ಜೈಲು ಶಿಕ್ಷೆ ಅನುಭವಿಸಿದರು.

ವಿನೋಭಾಜಿಯವರು ಸ್ವಾತಂತ್ರ್ಯ ಹೋರಾ ಟಕ್ಕಿಂತ ಹೆಚ್ಚಿಗೆ ಗಮನಹರಿಸಿದ್ದು ಸಾಮಾಜಿಕ ಸೇವಾ ಕಾರ್ಯಗಳಿಗೆ. ಅದರಲ್ಲಿ ಅವರನ್ನು ಅತ್ಯುನ್ನತ ಮೇಲ್ಮಟ್ಟಕ್ಕೆ ಏರಿಸಿದ್ದು ಭೂದಾನ ಯಜ್ಞ ಆಂದೋಲನ. 1951ರಲ್ಲಿ ಪಾದಯಾತ್ರೆಯ ಸಂದರ್ಭ ಆಂಧ್ರದ ತೆಲಂಗಾಣದಲ್ಲಿ ಸಂಚರಿಸುತ್ತಿದ್ದಾಗ ಪೋಚಂಪಳ್ಳಿ ಎಂಬ ಗ್ರಾಮಕ್ಕೆ ಭೇಟಿಕೊಟ್ಟರು. ಅಲ್ಲಿಯ ಸಭೆಯಲ್ಲಿ ಬಡ ಹರಿಜನರು ತಮ್ಮ ಕಷ್ಟ ಕಾರ್ಪಣ್ಯಗಳನ್ನು ತೋಡಿಕೊಂಡರು. ಆಗ ವಿನೋಬರು ನಿಮಗೆ ನಾನೇನು ಸಹಾಯ ಮಾಡಬಹುದು ಎಂದು ಕೇಳಿದರು. ಆಗ ಆ ಹರಿಜನರು ಸ್ವಾಮಿ ನಮಗೆ ಸ್ವಲ್ಪ ಭೂಮಿ ಕೊಡಿಸಿ. ಕಷ್ಟಪಟ್ಟು ಉತ್ತುಬಿಟ್ಟು ಬೆಳೆಬೆಳೆದು ಊಟ ಮಾಡುತ್ತೇವೆ ಎಂದರು. ವಿನೋಬರು ಯಾರಾದರೂ ಈ ಬಡವರಿ ಗೋಸ್ಕರ ಭೂಮಿ ಕೊಡುವಿರ ಎಂದು ಸಭೆ ಯಲ್ಲಿ ವಿನಂತಿಸಿದಾಗ ರಾಮಚಂದ್ರರೆಡ್ಡಿ ಎಂಬ ಜಮೀನುದಾರರು ವಿನೋಬರಿಗೆ ನೂರು ಎಕರೆ ದಾನ ನೀಡಲು ಮುಂದೆ ಬಂದರು. ಅದರಲ್ಲಿ ಹರಿಜನರು ಅಪೇಕ್ಷಿಸಿದ 80 ಎಕರೆ ಜಮೀನನ್ನು ಅವರಿಗೆ ನೀಡಿದರು. ಅಲ್ಲಿಂದ ಶುರುವಾಯಿತು ಅವರ ಭೂದಾನ ಯಜ್ಞ. ಇಡೀ ದೇಶವನ್ನು ಸುತ್ತಾಡಿ ಲಕ್ಷಾಂತರ ಎಕರೆ ಜಮೀನನ್ನು ದಾನವಾಗಿ ಪಡೆದು ಬಡಜನರಿಗೆ ಹಂಚಿ ನಿಜವಾಗಲೂ ಭೂದಾನ ಅಭಿಯಾನವನ್ನು ಯಜ್ಞದಂತೆ ಮಾಡಿ ಪ್ರಸಿದ್ಧರಾದರು.ಈ ಸಂದರ್ಭಧಲ್ಲಿ ಕರ್ನಾಟಕಕ್ಕೂ ಆಗಮಿಸಿದ್ದರು. ಕನ್ನಡ ಕಲಿಯಲು ಪ್ರಯತ್ನಿಸಿದರು. ಕನ್ನಡ ಲಿಪಿಯನ್ನು ಎಲ್ಲ ಲಿಪಿಗಳ ರಾಣಿ ಎಂದು ಹೇಳಿದರು. ಅಸ್ಪೃಶ್ಯತೆಯ ನಿವಾರಣೆಗೆ ಹೋರಾಡಿದರು. ಹರಿ ಜನರು ದೇವಸ್ಥಾನಗಳಿಗೆ ಪ್ರವೇಶ ಮಾಡುವಂತೆ ಮಾಡಿದರು. ಇದಲ್ಲದೆ ಗ್ರಾಮ ಸೇವಾ ಮಂಡಳಿ ಸ್ಥಾಪಿಸಿ ಗ್ರಾಮಗಳ ಸೇವೆ ಗ್ರಾಮ ದಾನ ಮಾಡಿದರು. ಹತ್ತಿಯಿಂದ ನೂಲು ತೆಗೆಯುವ ಚರಕದಿಂದ ನೂಲು ತೆಗೆ ಯುವ ಕ್ರಾಂತಿಯನ್ನೇ ಮಾಡಿದರು.ಗೋರಸ ಭಂಡಾರ ಸ್ಥಾಪಿಸಿ ಅದರ ಮೂಲಕ ಗೋ ಉತ್ಪನ್ನಗಳ ಮಹತ್ವ, ಗೋರಕ್ಷಣೆ ಮಾಡಿಸಿದರು. ಮಹಾರೋಗಿ ಸೇವಾ ಸಂಸ್ಥೆ ಸ್ಥಾಪಿಸಿ ಬಡ ರೋಗಿಗಳಿಗೆ ನೆರವಾದರು. ಮಹಿಳಾ ಆಶ್ರಮ ಸ್ಥಾಪಿಸಿ ಮಹಿಳಾ ಉನ್ನತಿಗೆ ದುಡಿದರು. ಸೇವಾದಳ ಸ್ಥಾಪಿಸಿ ಸೇವೆಯ ಕ್ರಾಂತಿಯನ್ನು ಮಾಡಿದರು.ವಿಕೃತ ಬುದ್ಧಿಜೀವಿಗಳು, ವಿನಾಕಾರಣ ಬ್ರಾಹ್ಮಣ ವಿರೋಧಿಗಳು, ಪ್ರಚಾರದ ತೆವಲು ತೀರಿಸಿಕೊಳ್ಳುವ ರಾಜಕಾರಣಿಗಳು, ಎಡಪಂಥೀಯ ಬ್ರಾಹ್ಮಣ ದ್ವೇಷಿಗಳು, ವಿನೋಬಾ ಭಾವೆ ಮತ್ತು ವೀರ ಸಾವರ್ಕರ್ ರವರ ಜೀವನ ಚರಿತ್ರೆ ಓದಿದರೆ, ನಾವು ಅಪರಾಧ ಮಾಡುತ್ತಿದ್ದೇವೆ ಎಂದು ತಿಳಿದು ಬಾಯಿ ಮುಚ್ಚಿಕೊಂಡು ಸುಮ್ಮನಿರು ತ್ತಾರೆ.

ವಿನೋಬಾರವರ ಜೀವಿತ ಸಾಧನೆ ಪರಿಗಣಿಸಿ 1956ರಲ್ಲಿ ರ್ಯಾಮನ್ ಮ್ಯಾಗಸೆಸೇ ಪ್ರಶಸ್ತಿ ನೀಡಿ ಗೌರವಿಸಲಾಯಿತು. 1983 ರಲ್ಲಿ ಭಾರತ ಸರ್ಕಾರ ಅವರಿಗೆ ಮರಣೋತ್ತರ 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಿತು. ಕೊನೆಯ ದಿನಗಳಲ್ಲಿ ಅವರು ಆಹಾರ ಸೇವಿಸುವುದನ್ನು ನಿಲ್ಲಿಸಿದರು. ನವೆಂಬರ್ 15 1982 ರಂದು ಕಾಲವಾದರು. ಅವರ ಪುಣ್ಯತಿಥಿಯ ಮಾಸದಲ್ಲೇ ಅವರ ಬಗ್ಗೆ ಲೇಖನ ಮೂಡಿಬಂದಿದೆ.

'ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿದ' ಆಚಾರ್ಯ ವಿನೋಬಾ ಭಾವೆಯವರಿಗೆ ಕೋಟಿ ಕೋಟಿ ನಮನಗಳು

**'ಭಾರತ್ ಮಾತಾಕೀ ಜೈ'**


**ಬ್ರಾಹ್ಮಣ ಸೇವಾಶ್ರಮ ಸಂಘ**

ನಂ:68,4ನೇ ಕ್ರಾಸ್, ಮಾದಾವರ ನ್ಯೂಟೌನ್, ಮಾದಾವರ ಪೋಸ್ಟ್, ಬೆಂಗಳೂರು – 562162

ಮೊ :– 9342330134 – 9379354584 – 9019329575

**ಆತ್ಮೀಯರೇ ನಮಸ್ಕಾರ,**

ನಮ್ಮ ವೃದ್ಧಾಶ್ರಮದಲ್ಲಿ ಸುಮಾರು ಹದಿನೈದು ವರ್ಷಗಳಿಂದ ಕೇವಲ ಬ್ರಾಹ್ಮಣರಿಗಾಗಿ ಉತ್ತಮ ಸೇವೆ ನೀಡುತ್ತಿರುವ ವಿಷಯ ನಿಮಗೆಲ್ಲತಿಳಿದಿದೆ ಎಂದು ಬಾವಿಸುತ್ತೇನೆ. ಇದೀಗ ನಮ್ಮ ವೃದ್ಧಾಶ್ರಮ ಕ್ಕೇ 60 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವೃದ್ಧರನ್ನು ಆಹ್ವಾನಿಸಲಾಗಿದೆ. ಈ ಸೇವೆಯ ಅವಶ್ಯ ಉಳ್ಳವರು ಸಂಪರ್ಕಿಸಿ.

**(ಹಾಸಿಗೆ ಹಿಡಿದಿರುವ ವೃದ್ಧರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ)**

ಇಲ್ಲಿ ಸ್ನಾನಕ್ಕೆ ಬಿಸಿನೀರು, ಪ್ರಾಥನೆಗಾಗಿ ಭವಾನಿಶಂಕರ ದೇವಸ್ಥಾನ ಇದೆ, ಉತ್ತಮ ಊಟೋಪಹಾರ, ವಾಕಿಂಗ್ ಸ್ಥಳಾವಕಾಶ, ಮನರಂಜನೆಗೆ ಟಿ.ವಿ ಹಾಗೂ ಇತರೇ ಹೆಚ್ಚಿನ ಸೌಲಭ್ಯವಿದೆ. ದಯಮಾಡಿ ಇದನ್ನು ನಿಮಗೆ ತಿಳಿದಿರುವ ಬ್ರಾಹ್ಮಣರಿಗೆ ಹಾಗೂ ನಿಮ್ಮಲ್ಲಿರುವ ಬ್ರಾಹ್ಮಣ ಗುಂಪುಗಳಿಗೆ ಕಳುಹಿಸಿಕೊಡಿ. ಈ ಸೇವೆಯ ಅವಶ್ಯ ವಿರುವವರಿಗೆ ಇದನ್ನು ತಲುಪಿಸಿ ಎಂದು ಕೋರುತ್ತೇನೆ.

**ಧನ್ಯವಾದಗಳು...**

**ಹೆಚ್ಚಿನ ವಿವರಗಳಿಗೆ ದಯಮಾಡಿ ಸಂಪರ್ಕಿಸಿ**

9342330134

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

## ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು

– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್

ವಧೂವರರ ಜಾತಕದ ಹೊಂದಾಣಿಕೆಯನ್ನು ಕುರಿತು ಈ ಹಿಂದಿನ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಜಾತಕದ ಹೊಂದಾಣಿಕೆಯ ಬಗೆಗೆ ಚಿಂತಿಸುವ ಮೊದಲು ವಧೂವರರ ಹೊಂದಾಣಿಕೆಯ ಬಗೆಗೆ ಜನಸಾಮಾನ್ಯರ ಇಂದಿನ ಚಿಂತನ ಕ್ರಮವೇನು? ಮಹರ್ಷಿಗಳ ಆಶಯ ಹೇಗಿದೆ? ಎಂಬ ಬಗ್ಗೆ ಒಂದು ಸ್ಥೂಲ ಪರಿಚಯ ಮಾಡಿಕೊಳ್ಳುವುದು ಸೂಕ್ತವೆನಿಸುತ್ತದೆ.

ವಧೂವರರ ಹೊಂದಾಣಿಕೆ ಹೇಗಿರಬೇಕು? ಎಂಬ ಬಗ್ಗೆ ಇಂದಿನ ಸಮಾಜದಲ್ಲಿ ಅನೇಕ ಸ್ತರದ ಚಿಂತನೆಗಳು ಕಂಡು ಬರುತ್ತವೆ. ಮೊದಲ ನೋಟಕ್ಕೆ ಜೋಡಿ ತುಂಬಾ ಚೆನ್ನಾಗಿದೆ ಎಂದು ಯೋಚಿಸುವವರು, ಮೈಬಣ್ಣ, ಎತ್ತರ, ದಪ್ಪ ಸರಿಸುಮಾರಾಗಿ ಏಕರೂಪದಲ್ಲಿದ್ದರೆ ಎಲ್ಲೋ ಸರಿಯಾದ ಜೊತೆಯನ್ನೇ ಮಾಡಿದ್ದೀರಲ್ಲ ಎಂದು ಸಂತೋಷ ವ್ಯಕ್ತಪಡಿಸುತ್ತಾರೆ. ಅಷ್ಟಕ್ಕೆ ನಿಲ್ಲದೆ, ಅನಂತರ ಹಲವು ಮುಖವಾದ ವಧೂವರರ ಹೊಂದಾಣಿಕೆಯ ಚಿಂತನೆ ಆರಂಭವಾಗುತ್ತದೆ. ವಧುವರರ ತಂದೆ–ತಾಯಿಗಳ ಶ್ರೀಮಂತಿಕೆಯ ಮಟ್ಟ ಸುಮಾರಾಗಿ ಒಂದೇ ಆಗಿರಬೇಕೆಂಬ ನಿರೀಕ್ಷೆ ಇರುತ್ತದೆ. 'ನಮ್ಮ ಮಟ್ಟಕ್ಕೆ ಸರಿಯಾದ ಸಂಬಂಧ ಮಾಡಿದಂತಾಯಿತು, ನಾಳೆ ಯಾರೆದುರಿಗಾದರೂ ನಿಮ್ಮ ಬೀಗರಾರು? ಎಂದು ಪ್ರಶ್ನೆ ಬಂದರೂ ಹೇಳಿಕೊಳ್ಳುವುದಕ್ಕೂ ಒಂದು ನಿರಾತಂಕವಾದ ಸ್ಥಿತಿ ಇರಬೇಕಯ್ಯಾ' ಎಂದು ಸಂತಸಪಡುತ್ತಾರೆ. ತಂದೆ–ತಾಯಿಗಳ ಆರ್ಥಿಕಮಟ್ಟದ ಜೊತೆಗೆ ಸಾಮಾಜಿಕವಾದ ಸ್ಥಾನಮಾನಗಳು, ವಿದ್ಯಾವಂತಿಕೆ ಮೊದಲಾದವುಗಳನ್ನು ಹೋಲಿಸಿ ತೃಪ್ತಿಪಡುವುದೂ ಇದೆ. ಇನ್ನು ಕೆಲವೊಮ್ಮೆ ಮೈಬಣ್ಣ, ಎತ್ತರ ದಪ್ಪಕ್ಕಿಂತಲೂ ವಂಶ–ಅಂತಸ್ತು ಮೊದಲಾದವುಗಳಿಗಿಂತಲೂ ಇಬ್ಬರೂ ದೈಹಿಕವಾಗಿ ಬಲಿಷ್ಠರಾಗಿದ್ದರೆ, ಉತ್ಸಾಹಶಾಲಿಗಳಾಗಿದ್ದರೆ, ಸಮಾಜದೊಡನೆ ಸ್ಪಂದಿಸುವ ಸ್ವಭಾವದವರಾದರೆ ಇದು ಪಕ್ಕಾ ಜೋಡಿ ಎಂದು ಮೆಚ್ಚುತ್ತಾರೆ. 'ಮ್ಯಾಚಿಂಗ್' ಎನ್ನುವಾಗ ಅದೆಷ್ಟೋಪರಿಯ ಚಿಂತನೆಯ ಲಹರಿಗಳುಂಟು. ಇಬ್ಬರೂ ವಾಚಾಳಿಗಳಾದರೆ, ಇಬ್ಬರೂ ಮೌನಿಗಳಾದರೆ ಅದರಲ್ಲೇ ಒಂದು ಮೆಚ್ಚುಗೆಯ ವಿಷಯ! ವಿದ್ಯಾಕ್ಷೇತ್ರದಲ್ಲಿ ಒಂದೇ ಹಂತದವರಾದರೆ ಅದರಲ್ಲಿ ಒಂದು ಸಂತೋಷ. ಅದರಲ್ಲೂ ಸಹ ವೈದ್ಯ ಓದಿದ ವಧುವಿಗೆ ವೈದ್ಯ ಓದಿದ ವರನಾದರೆ ವಿಶೇಷ ಮೆಚ್ಚುಗೆ. ಕಂಪ್ಯೂಟರ್ ಸೈನ್ಸ್ ಓದಿದ ವರನಿಗೆ ಕಂಪ್ಯೂಟರ್ ಸೈನ್ಸ್ ಓದಿದ ವಧೂ! ಇದೊಂದು ವರಸೆಯ ಚಿಂತನೆ. ತುಂಬಾ ಉದಾರ ಚಿಂತಕರೆನಿಸಿಕೊಳ್ಳುವ ಕೆಲವರು ಇವೆಲ್ಲ ಹೊಂದಾಣಿಕೆ ಹಾಗಿರಲಿ, ಇಬ್ಬರ ವೈಚಾರಿಕ ಮಟ್ಟ ಹಾಗೂ ಆಸಕ್ತಿ ಏಕರೂಪವಾಗಿದ್ದರೆ ಚೆನ್ನು. ಒಬ್ಬ ಕಾಂಗ್ರೆಸ್ ಪಾರ್ಟಿ, ಇನ್ನೊಬ್ಬಳು ಜನತಾ ಎಂದರೆ ಏನು ಚೆನ್ನು?ಎಂದೆಲ್ಲ ಬಗೆಯುತ್ತಾರೆ.

ಈ ಹೊಂದಾಣಿಕೆಯ ಹಿಂದೆ ಯಾವ ಪ್ರಯೋಜನವನ್ನು ನಿರೀಕ್ಷಿಸುತ್ತಾರೆಂಬ ಬಗ್ಗೆ ಪರಿಶೀಲಿಸಿದರೆ, ಅದರಲ್ಲೂ ಹಲವು ಮುಖಗಳು ಕಂಡುಬರುತ್ತವೆ. ಮೈಬಣ್ಣ, ಎತ್ತರ, ದಪ್ಪದಲ್ಲಿ ಹೊಂದಾಣಿಕೆಯಿದ್ದರೆ ನೋಡುವವರಿಗೆ ಅದರಲ್ಲಿ ಒಂದು ಲಕ್ಷಣ, ಅಲ್ಲದೆ ಪರಸ್ಪರರಲ್ಲೂ ಒಂದು ಸಂತೃಪ್ತಿ. ನನ್ನ ಗಂಡ ಈತ ಅಥವಾ ನನ್ನ ಹೆಂಡತಿ ಈಕೆ ಎಂದು ಹೇಳಿಕೊಳ್ಳಲು ಮನಸ್ಸಿಗೆ ಆತಂಕವಾಗುವುದಿಲ್ಲ ಎಂಬ ಸಂತೋಷ! ತಂದೆ–ತಾಯಿಗಳ ಶ್ರೀಮಂತಿಕೆ, ಸಾಮಾಜಿಕ ಮಟ್ಟಗಳನ್ನು ಗಮನಿಸುವವರು ತಮ್ಮ ಅಂತಸ್ತಿನ ಸಂರಕ್ಷಣೆಯಾಯಿತು ಎಂದು ತೃಪ್ತಿಪಡುತ್ತಾರೆ. ಆರೋಗ್ಯವಂತವೂ ಉತ್ಸಾಹಶೀಲವೂ ಆದ ಜೋಡಿಯಾದರೆ ಎತ್ತು ಎಮ್ಮೆಗಳ ಜೊತೆ ಮಾಡದೆ ಇರುವ ಸಂತೋಷ ಒಂದುಕಡೆ, ಇನ್ನೊಂದೆಡೆ ಅವರ ನಡೆ–ನುಡಿಗಳಲ್ಲಿ ಹೊಂದಾಣಿಕೆ ನೋಡಿ ಸಂತೋಷಪಡುವುದೂ ಉಂಟು. ಒಂದೇ ವಿದ್ಯೆಯನ್ನು ಓದಿದವರ ಜೋಡಿಯಾದರೆ ಇಬ್ಬರೂ ಒಂದೇ ವೃತ್ತಿ ಮಾಡಬಹುದು. ಒಬ್ಬರಿಂದ ಮತ್ತೊಬ್ಬರಿಗೆ ಸಹಕಾರ. ಗೃಹದಲ್ಲಿ ಮಾತ್ರ ಸಹಬಾಳ್ವೆಯಾಗದೇ ವೃತ್ತಿರಂಗದಲ್ಲೂ ಸಹಬಾಳ್ವೆ ಎಂಬ ಸಂತೋಷ. ಅದೇನೂ ಇಲ್ಲದಿದ್ದರೂ ಒಬ್ಬರು ಮಾಡುವ ವೃತ್ತಿಯ ಸುಖ–ದುಃಖಗಳ ಪರಿಚಯ ಮತ್ತೊಬ್ಬರಿಗೆ ಇರುತ್ತೆ ಎಂಬ ಸಂತಸ!ಹೀಗೆಲ್ಲ ಚಿಂತಿಸುವ ಪರಿ ಸಮಾಜದಲ್ಲಿದೆಯಷ್ಟೇ! ಇನ್ನು ಈ ಬಗ್ಗೆ ಭಾರತ ಮಹರ್ಷಿಗಳ ಚಿಂತನೆ ಏನು? ಅವರ ಚಿಂತನೆಯ ಹಿನ್ನೆಲೆ ಏನು? ಎಂಬ ಬಗ್ಗೆ ಗಮನಿಸೋಣ.

ಮೊಟ್ಟ ಮೊದಲಿಗೆ ಒಂದೇ ಒಂದಾಗಿ ಬೆಳಗುತ್ತಿದ್ದ ಪರಂಜ್ಯೋತಿಯು **'ಸೋಕಾಮಯತ ಬಹುಸ್ಯಾಂ ಪ್ರಜಾಯೇಯ'** ಎಂಬ ಉಪನಿಷದ್ವಾಣಿಯು ತಿಳಿಸುವಂತೆ ತನ್ನನ್ನು ತಾನು ಬಹುವಾಗಿ ವಿಸ್ತರಿಸಿಕೊಳ್ಳಬೇಕೆಂದು ಬಯಸಿತು. ಅಲ್ಲಿಂದ ಸೃಷ್ಟಿಯ ಆರಂಭ. ಅದಕ್ಕೆ ಪೂರ್ವದಲ್ಲಿ ಒಂದೇ ಒಂದಾಗಿ ತಾನೇ ತಾನಾಗಿ ಪ್ರಕಾಶಿಸುತ್ತಿದ್ದಾಗ ಅಲ್ಲಿ ಹೊಂದಾಣಿಕೆ ಎಂಬುದಕ್ಕೆ ಇನ್ನೊಂದು ವಸ್ತುವಿರಲಿಲ್ಲ! ಸೃಷ್ಟಿಯ ಸಂಕಲ್ಪವಾದೊಡನೆ

**ದ್ವಿಧಾಕೃತ್ವಾತ್ಮನೋ ದೇಹಮ್ ಅರ್ಧೇನ ಪುರುಷೋಽಭವತ್ ।**
**ಅರ್ಧೇನ ನಾರೀ ತಸ್ಯಾಂ ಸ ವಿರಾಜಮಸೃಜತ್ ಪ್ರಭುಃ ॥**

ಎಂಬಂತೆ ತನ್ನನ್ನೇ ತಾನು ಎರಡಾಗಿ ವಿಭಾಗಿಸಿಕೊಂಡಿತು. ಅರ್ಧಭಾಗವು ಪುರುಷ, ಇನ್ನರ್ಧಭಾಗವು ನಾರೀ – ಎಂದರೆ ತಾನು ಬಹುವಾಗಿ ವಿಸ್ತಾರವಾಗಲು ಬೇಕಾದ ಪ್ರಕೃತಿಯನ್ನು ಸೃಷ್ಟಿಸಿಕೊಂಡಿತು. ಇಲ್ಲಿ ಪುರುಷನೆಂದರೆ ಜ್ಯೋತಿಃಸ್ವರೂಪವಾದ ಸಚ್ಚಿದಾನಂದ. ಅದು ತಾನೇ ತನ್ನರ್ಧಭಾಗದಿಂದ ನಿರ್ಮಿಸಿಕೊಂಡ ತ್ರಿಗುಣಮಯವಾದ ಪ್ರಕೃತಿಯನ್ನು **'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್'** ಎಂಬಂತೆ ಪ್ರವೇಶಿಸಿತು. ಹೀಗೆ ಒಂದಿದ್ದದ್ದು ಎರಡಾಗಿ ವಿಭಾಗವಾದೊಡನೆ **'ಹೊಂದಾಣಿಕೆ'** ಎಂಬ ವ್ಯವಹಾರ ಆರಂಭವಾಗಿದೆ. ಪರಮಪುರುಷನು ತನ್ನನ್ನು ತಾನು ವಿಸ್ತರಿಸಿಕೊಳ್ಳಲು ಬಯಸಿದಾಗ, ತನ್ನ ಆವಾಸಕ್ಕಾಗಿ ಒಂದು ಬೀಡನ್ನು ರಚಿಸಿಕೊಳ್ಳಲು ಬಯಸಿದಾಗ ತನ್ನತನಕ್ಕೆ ಧಕ್ಕೆ ಬಾರದಂತೆ ಪ್ರಕೃತಿಯನ್ನು

ರಚಿಸಿಕೊಂಡಿದ್ದಾನೆ. ಅಲ್ಲಿ ಪ್ರಕೃತಿ ಎಂಬುದು 'ಪ್ರಕರೋತಿ' ಎಂಬಂತೆ ವಿಸ್ತಾರದತ್ತ ಸಾಗುವುದು. ಹಾಗೆ ವಿಸ್ತಾರವಾಗುವಾಗ ಪುರುಷನ ಸಂಕಲ್ಪಕ್ಕೆ ಹೊಂದಿಕೊಂಡು ವಿಸ್ತಾರ. ಪುರುಷತನಕ್ಕೆ ಅನುಕೂಲವಾದ ವಿಸ್ತಾರ. ಮೌಲಿಕವಾದ ಒಂದು ಹೊಂದಾಣಿಕೆ ಇದೇ!. ಪ್ರಕೃತಿಯು ತನ್ನಲ್ಲಿ ಪರಮಪುರುಷನು ತುಂಬಿಕೊಳ್ಳುವಂತೆ ಒಡಲನ್ನು ವಿಸ್ತರಿಸಿಕೊಂಡರೆ ಪರಮಪುರುಷನು ಇದು ತನ್ನ ಒಡಲೆಂದು– ಅದರ ಆದ್ಯಂತವಾಗಿಯೂ ಸೇರಿಕೊಳ್ಳುತ್ತಾನೆ. ನಿನ್ನನ್ನು ನನ್ನಲ್ಲಿ ಸೇರಿಸಿಕೊಳ್ಳುವುದಿಲ್ಲ ಎಂದಾಗಲೀ, ನಿನ್ನಲ್ಲಿ ನಾನು ಸೇರಿಕೊಳ್ಳುವುದಿಲ್ಲ ಎಂದಾಗಲೀ ಕಿಂಚಿತ್ ಸಹಮತಿ ಇಲ್ಲದಿದ್ದರೂ ಸೃಷ್ಟಿ ಮುಂದುವರೆಯದು. ಈ ಸೃಷ್ಟಿಯ ನಡೆಯನ್ನು ಸೃಷ್ಟಿಯ ಪ್ರತಿಯೊಂದು ಅವಯವದಲ್ಲೂ ಕಾಣಬಹುದಾಗಿದೆ. ಸೃಷ್ಟಿಯ ಈ ನಡೆಯ ಹಿನ್ನೆಲೆಯಲ್ಲಿ ನಾವು ಹೊಂದಾಣಿಕೆಯ ಬಗೆಗೆ ಚಿಂತಿಸಬೇಕು.

'ವಧೂವರರ ಜಾತಕದ ಹೊಂದಾಣಿಕೆ' ಎನ್ನುವಾಗ ಈ ವಿಚಾರವನ್ನು ಲೋಕಕ್ಕೆ ತಂದವರ ಆಶಯವೇನು? ಅವರು ಎಷ್ಟು ಮುಖದಲ್ಲಿ ಜೀವನದರ್ಶನವನ್ನು ಮಾಡಿದ್ದಾರೆ? ಅವರ ಜೀವನ ದರ್ಶನದ ಸಾಧನಗಳಾವುವು? ಆ ಸಾಧನಗಳ ವ್ಯಾಪ್ತಿಯೆಷ್ಟು? ಎಂಬ ಬಗ್ಗೆ ಮನನ ಮಾಡಬೇಕು. ಇದೀಗ ಅದರ ಅನುಸಂಧಾನಕ್ಕೆ ಸಹಾಯಕವಾದ ಒಂದು ಕಥೆಯನ್ನು ಅನುಸಂಧಾನ ಮಾಡೋಣ.

ರಾಜನೊಬ್ಬ ಆನುವಂಶೀಯವಾಗಿ ಬಂದ ರಾಜ್ಯವನ್ನು ಸಕಾಲದಲ್ಲಿ ಪಡೆದು ಪಟ್ಟಾಭಿಷಿಕ್ತನಾಗಿ ರಾಜ್ಯಭಾರವನ್ನು ನಡೆಸುತ್ತಿದ್ದ. ರಾಜ್ಯವೆಲ್ಲವೂ ರಾಜನ ಕರ್ತವ್ಯ ಪರಾಯಣತೆಯ ಕಾರಣದಿಂದ ಸುಭಿಕ್ಷೆಯಿಂದ ಕೂಡಿತ್ತು. ಸುಖೀರಾಜ್ಯವಾಗಿತ್ತು. ಸಂತೃಪ್ತಿ ಸಮಾಧಾನಗಳು ಪ್ರಜೆಗಳೆಲ್ಲರ ಸಂಪತ್ತಾಗಿತ್ತು. ಈ ನಡುವೆ ಕಾಲವೈಪರೀತ್ಯದಿಂದಾಗಿ ಒಮ್ಮೆ ದಸ್ಯುಗಳು ರಾಜ್ಯದ ಮೇಲೆ ಆಕ್ರಮಣವನ್ನು ಆರಂಭಿಸಿದರು. ಮೊದಲಿಗೆ ಹೊರವಲಯದಲ್ಲಿ ಆಕ್ರಮಣ ಆರಂಭವಾಯಿತು. ದಸ್ಯುಗಳು ಪ್ರಬಲರಾಗಿದ್ದರಿಂದ ಹಾಗೂ ಗುಪ್ತವಾಗಿ ಕಾರ್ಯವೆಸಗಿದ್ದರಿಂದ ರಾಜನ ಪರಿವೆಗೆ ಬಾರದೆ ಅವರ ಬಲ ಬೆಳೆಯಲಾರಂಭಿಸಿತು. ಕ್ರಮಕ್ರಮವಾಗಿ ವೃದ್ಧಿ ಹೊಂದಿದ ಆ ದಸ್ಯುಗಳು ಒಮ್ಮೆ ರಾಜಧಾನಿಯ ಮೇಲೆಯೇ ಆಕ್ರಮಣವನ್ನು ನಡೆಸಿದರು. ರಾಜನು ತನ್ನ ಸೇನೆಯ ಬಲದಿಂದ ಆಕ್ರಮಣವನ್ನು ತಡೆಯಲು ಸಾಕಷ್ಟು ಪ್ರಯತ್ನಿಸಿದ. ಆದರೂ ದಸ್ಯುಗಳ ಕೈ ಮೇಲಾಯಿತು. ರಾಜ್ಯ ಪರಾಧೀನವಾಗುವ ಸ್ಥಿತಿ ಬಂದಿತು. ಎಲ್ಲ ಮಂತ್ರಿಗಳೂ ಮತ್ತು ಸೇನಾಧಿಪತಿಗಳೂ ರಾಜನನ್ನು ಉಳಿಸಿಕೊಳ್ಳಬೇಕೆಂದು ಒಂದು ಉಪಾಯವನ್ನು ಹೂಡಿದರು. ಅವನನ್ನು ಸುರಂಗಮಾರ್ಗದಿಂದ ದೂರಕ್ಕೆ ಕಾಡಿಗೆ ಕರೆದೊಯ್ಯುವಂತೆ ಮಾಡಿದರು. ಅವನೊಬ್ಬ ಉಳಿದುಕೊಂಡರೆ ಮತ್ತೊಮ್ಮೆ ರಾಜ್ಯವನ್ನು ಕಟ್ಟಬಹುದೆಂಬುದು ಅವರ ಆಶಯವಾಗಿತ್ತು. ಆ ರಾಜನಿಗೆ ನವಜಾತವಾದ ಶಿಶುವೊಂದಿತ್ತು. ರಾಜನು ತಾನೊಮ್ಮೆ ಮರಳಿ ರಾಜ್ಯವನ್ನು ನಿರ್ಮಿಸಲು ಸಾಧ್ಯವಾಗದಿದ್ದರೂ ತನ್ನ ಮಗನಾದರೂ ಆ ಕಾರ್ಯವನ್ನು ಮಾಡುವಂತಾಗಲಿ ಎಂಬ ಏಕೈಕ ಹಂಬಲದಿಂದ ಆ ಶಿಶುವನ್ನು ಬೆನ್ನಿಗೆ ಕಟ್ಟಿಕೊಂಡು ಗೊಂಡಾರಣ್ಯವೊಂದನ್ನು ಪ್ರವೇಶಿಸಿದನು. ಕಾಡುಮೇಡುಗಳಲ್ಲಿ ಸುತ್ತುತ್ತಾ ಹಸಿವು ಬಾಯಾರಿಕೆಗಳಲ್ಲಿ ಬಳಲಿ ಬೆಂಡಾದನು. ಸಿಕ್ಕಿದ ಅಲ್ಪ ಸ್ವಲ್ಪ ಆಹಾರ ವಸ್ತುಗಳನ್ನು ಶಿಶುವಿಗೆ ನೀಡಿ ಅದನ್ನು ರಕ್ಷಿಸುವಲ್ಲಿ ಎಲ್ಲ ನಿಗವನ್ನೂ ವಹಿಸಿದನು. ಮುಂದೇನು ಮಾಡಬೇಕೆಂಬ ಚಿಂತೆ ಹೃದಯವನ್ನು ಆವರಿಸಿತ್ತು. ದಿನೇ ದಿನೇ ಚಿಂತೆಯಲ್ಲಿ ಮಗ್ನನಾಗಿ ಸೊರಗಿ ಕೊನೆಗೊಮ್ಮೆ ಕಾಡಿನಲ್ಲೇ ಅಸುವನ್ನು ನೀಗಿದ. ನವಜಾತ ಶಿಶುವು ಅನಾಥವಾಯಿತು. ಕ್ರೂರಮೃಗಗಳಿಗೆ ತುತ್ತಾಗುವ ದುಃಸ್ಥಿತಿ!

ಆದರೆ ಆಕಸ್ಮಿಕವಾಗಿ ಬೇಟೆಗಾರರ ತಂಡವೊಂದು ಬೇಟೆಯಾಟದಲ್ಲಿ ಅದೇ ಪ್ರದೇಶಕ್ಕೆ ಬಂದಿತು. ಶಿಶುವಿನ ರೋದನದ ಧ್ವನಿಯು ಅವರ ಕಿವಿದರೆಗಳಿಗೆ ಬಿದ್ದಿತು. ಅವರು ಕುತೂಹಲದಿಂದ ಪರಿಶೀಲಿಸಲಾಗಿ ಅಲ್ಲೊಂದು ಶಿಶುವನ್ನೂ ಸಮೀಪದಲ್ಲಿ ಒಂದು ಮೃತದೇಹವನ್ನೂ ಗುರುತಿಸಿದರು. ಅವರಿಗೆ ಈ ದೃಶ್ಯ ಅಚ್ಚರಿಯನ್ನು ಉಂಟು ಮಾಡಿತು. ಮೃತನಾದವನು ಯಾರೆಂಬ ಬಗ್ಗೆ ಜಿಜ್ಞಾಸೆಯುಂಟಾದರೂ ಸಹಜವಾಗಿಯೇ ಅವರ ಆಸಕ್ತಿಯೆಲ್ಲ ಆ ಶಿಶುವಿನ ಮೇಲೆ ಹರಿದುದರಿಂದ ಅದನ್ನು ಎತ್ತಿಕೊಂಡು ತಮ್ಮ ಗ್ರಾಮಕ್ಕೆ ಸಾಗಿದರು. ಆ ಶಿಶುವನ್ನು ತಮ್ಮ ಕುಲದ ಒಬ್ಬ ಸದಸ್ಯನನ್ನಾಗಿ ಮಾಡಿಕೊಂಡರು. ತಮ್ಮ ಅಭ್ಯಾಸದಂತೆ ಒಂದು ಹೆಸರಿಟ್ಟು ಕರೆದರು. ತಮ್ಮ ಭಾಷೆಯನ್ನು ಅದಕ್ಕೂ ಕಲಿಸಿದರು. ತಾವುಂಡ ಅನ್ನವನ್ನಿತ್ತು ತಮ್ಮಂತೆ ವಸ್ತ್ರವನ್ನು ಉಡಿಸಿ ಬೆಳೆಸಿದರು. ಶಿಶುವು ಕುಮಾರನಾಗಿ, ಬಾಲಕನಾಗಿ, ಕ್ರಮವಾಗಿ ಯೌವನಾವಸ್ಥೆಗೆ ಬಂದ. ಸಾಕು ತಂದೆ–ತಾಯಿಗಳ ಮಾರ್ಗದರ್ಶನದಂತೆ ಬಾಲ್ಯದಿಂದಲೇ ಬೇಟೆಯ ಅಭ್ಯಾಸವನ್ನು ಆರಂಭ ಮಾಡಿದ. ಸಂಗಡಿಗರೊಡಗೂಡಿ ನಿತ್ಯವೂ ಕಾಡುಮೇಡುಗಳಲ್ಲಿ ಸುತ್ತುತ್ತಾ ವಿವಿಧವಾದ ಕ್ರೂರಜಂತುಗಳ ಬೇಟೆಯಲ್ಲಿ ವಿನೋದವನ್ನು ಪಡೆಯುತ್ತಿದ್ದ.

ಹೀಗಿರಲು ಒಮ್ಮೆ ಸಂಗಡಿಗರೊಡನೆ ಬೇಟೆಯಡುತ್ತಾ ತನ್ನ ಗ್ರಾಮದಿಂದ ಬಹುದೂರ ಸಾಗಿದ. ಬಿಸಿಲಿನ ಬೇಗೆ ಒಂದೆಡೆ. ಜೊತೆಗೆ ಹಸಿವು ಬಾಯಾರಿಕೆಗಳೂ ಬಾಧಿಸಿದವು. ಬಳಲಿಕೆಯಿಂದ ಕೂಡಿದ ಆತ ತನ್ನ ಸಂಗಡಿಗರೊಡನೆ ಆಕಸ್ಮಿಕವಾಗಿ ಕಂಡ ಆಶ್ರಮವೊಂದನ್ನು ಪ್ರವೇಶಿಸಿದ. ಆಶ್ರಮದ ವ್ಯವಸ್ಥೆಯಂತೆ ಹಸಿವು ಬಾಯಾರಿಕೆಗಳನ್ನು ಪರಿಹರಿಸಿಕೊಳ್ಳುವಷ್ಟರಲ್ಲಿ ಅಲ್ಲಿದ್ದ ಮಹರ್ಷಿಗಳ ಕಣ್ಣಿಗೆ ಈ ಗುಂಪು ಗೋಚರಿಸಿತು. ಈ ಗುಂಪಿನ ಮಧ್ಯದಲ್ಲಿ ಎಲ್ಲರಂತೆ ವೇಷಭೂಷಣಗಳನ್ನು ಧರಿಸಿದ್ದ ಈ ರಾಜಕುಮಾರನೂ ಕಣ್ಣಿಗೆ ಬಿದ್ದ. ಎಲ್ಲರಂತೆ ವೇಷಭೂಷಣಗಳನ್ನುಳ್ಳವನಾದರೂ ಅವನಲ್ಲೇನೋ ವೈಶಿಷ್ಟ್ಯವನ್ನು ಋಷಿಯ ಕಣ್ಣು ಗುರುತಿಸಿತು. ಮಹರ್ಷಿಗಳು ಕ್ಷಣದಲ್ಲೇ ತಮ್ಮ ಯೋಗದೃಷ್ಟಿಯಿಂದ ವಸ್ತುಸ್ಥಿತಿಯನ್ನು ಅರಿತುಕೊಂಡರು. ಆ ಕುಮಾರನನ್ನು ಕರೆದು 'ನೀನು ಯಾರಪ್ಪ? ಎಲ್ಲಿಂದ ಬಂದೆ? ನಿಮ್ಮ ತಂದೆ–ತಾಯಿಗಳು ಯಾರು?' ಎಂದೆಲ್ಲ ಪ್ರಶ್ನಿಸಿದರು. ಆ ಕುಮಾರನು ತನ್ನ ಬಾಲ್ಯದಿಂದ ಕಂಡರಿತ ಸತ್ಯವನ್ನು ತಿಳಿಸಿದ. ತನ್ನ ಗ್ರಾಮ, (ಸಾಕು)ತಂದೆ–ತಾಯಿಗಳು, ತನ್ನ ಅಭ್ಯಾಸ, ಎಲ್ಲವನ್ನೂ ತಿಳಿಸಿದ. ಆಗ ಮಹರ್ಷಿಗಳು ಕಾರುಣ್ಯಪೂರ್ಣವಾಗಿ ಪ್ರೀತಿಯಿಂದ 'ಎಲೈ ಕುಮಾರ! ನೀನು ಇನ್ನೊಮ್ಮೆ ಬಿಡುವಾಗಿ ಬಾ. ನಾನು ನಿನಗೆ ಕೆಲವು ವಿಷಯಗಳನ್ನು ತಿಳಿಸಬಯಸಿದ್ದೇನೆ' ಎಂದು ನುಡಿದರು.

ಅವರ ಈ ಮಾತುಗಳು ಕುಮಾರನಿಗೆ ಕುತೂಹಲವನ್ನು

ಉಂಟುಮಾಡಿತು. ಅವನು ಮರುದಿನವೇ ಮತ್ತೆ ಆಶ್ರಮಕ್ಕೆ ಭೇಟಿ ನೀಡಿದ. ಮಹರ್ಷಿಗಳು ಅವನನ್ನು ಸವಿನುಡಿಯಿಂದ ಮಾತನಾಡಿಸುತ್ತಾ ತಮ್ಮ ಪ್ರೀತಿ ವಾತ್ಸಲ್ಯಗಳ ಮಡುವಿನಲ್ಲಿ ಅವನನ್ನು ಮಜ್ಜನ ಮಾಡಿಸಿ ತರುವಾಯ 'ಕುಮಾರ, ನಿನಗೊಂದು ಸತ್ಯವಾದ ವಿಷಯವನ್ನು ಅರುಹುತ್ತೇನೆ. ನಿನ್ನ ಮೇಲಿನ ಪ್ರೀತಿಯು ನನ್ನನ್ನು ಮಾತನಾಡಿಸುತ್ತಿದೆ. ನೀನು ನಿನ್ನನ್ನು ವ್ಯಾಧನೆಂದುಕೊಂಡಿದ್ದೀಯಲ್ಲವೇ? ಇದು ಅಸತ್ಯ. ನೀನೊಬ್ಬ ರಾಜಕುಮಾರ' ಎಂದರು. ರಾಜಕುಮಾರನೆಂದರೆ ಏನೆಂಬುದೂ ಆತನಿಗೆ ತಿಳಿದಿರಲಿಲ್ಲ. ಕುತೂಹಲದಿಂದ ಮಹರ್ಷಿಗಳನ್ನು ಪ್ರಶ್ನಿಸಿದ. 'ಮಹಾನುಭಾವರೇ, ರಾಜಕುಮಾರನೆಂದರೇನು?' ದಯಮಾಡಿ ನನಗೆ ತಿಳುಹಿ ಎಂದು. ಆಗ ಮಹರ್ಷಿಗಳು 'ರಾಷ್ಟ್ರವೆಂಬುದು ಅನಲ್ಪ ಪ್ರಜೆಗಳ ಒಂದು ಆವಾಸ. ಅದರ ನೇತಾ ರಾಜನಾಗಿರುತ್ತಾನೆ. ಅವನು ಧರ್ಮಮಾರ್ಗದಲ್ಲಿ ತಾನೂ ನೆಲೆನಿಂತು ಪ್ರಜೆಗಳೆಲ್ಲರನ್ನೂ ತನ್ನಂತೆ ಧರ್ಮಿಷ್ಠರನ್ನಾಗಿ ರೂಪಿಸುತ್ತಾ ಸಂಪೂರ್ಣ ರಾಷ್ಟ್ರದ ಯೋಗಕ್ಷೇಮವನ್ನು ನಿರ್ವಹಿಸಬಲ್ಲವನಾಗುತ್ತಾನೆ. ರಾಷ್ಟ್ರರಕ್ಷಣೆಗೆ ಬೇಕಾದ ದೇಹಬಲ, ಮನೋಬಲಗಳು ಅವನಲ್ಲಿ ರೂಢಮೂಲವಾಗಿರುತ್ತವೆ. ಧೈರ್ಯ, ಸ್ಥೈರ್ಯ ಪರಾಕ್ರಮಗಳ ತವರು ಅವನು. ಪ್ರಜೆಗಳಿಗಾಗಿ ದೇಶಕ್ಕಾಗಿ ಎಲ್ಲವನ್ನೂ ಮುಡಿಪಾಗಿಟ್ಟು ಅಹೋರಾತ್ರಿ ದುಡಿಯುವ ಮಹಾತ್ಯಾಗಿ. ಅವನ ಕಾರ್ಯವ್ಯವಸ್ಥೆಗೆ ಒಳಪಟ್ಟಾಗಲೇ ಒಂದು ರಾಷ್ಟ್ರವು ಈತಿ–ಬಾಧೆಗಳಿಲ್ಲದ್ದಾಗಿ ಸುಭಿಕ್ಷವೂ ಸುಖಮಯವೂ ಆಗಬಲ್ಲದು. ಅವನು ಸಾಕ್ಷಾತ್ ಪರಮೇಶ್ವರಾಂಶನೇ' ಎಂದು ಮೊದಲಾಗಿ ವಿವರಿಸಿದರಲ್ಲದೇ ಕೊನೆಗೆ 'ನೀನೂ ಅಂತಹ ಒಬ್ಬ ಧರ್ಮಿಷ್ಠನಾದ ಪ್ರಭುವಿನ ಪುತ್ರನಾಗಿದ್ದಿ!' ಎಂಬ ಸತ್ಯವನ್ನು ತಿಳಿಸಿದರು.

ಕುಮಾರನಿಗೆ ಈ ಎಲ್ಲ ವಿಷಯಗಳೂ ತೀರ ಹೊಸದಾಗಿತ್ತು. ಅರ್ಥವಾಗದಿದ್ದರೂ ಋಷಿಗಳ ಮಾತನ್ನು ಅಲ್ಲಗಳೆಯುವಂತಿರಲಿಲ್ಲ. ಋಷಿಗಳ ಮಾತನ್ನು ಪ್ರೀತಿಯಿಂದ ಆಲಿಸಿ ಅದನ್ನೇ ಅನುಸಂಧಾನ ಮಾಡಲು ತೊಡಗಿದ. ಕೆಲದಿನಗಳುರುಳಿದವು. ಆಗಾಗ ಆಶ್ರಮಕ್ಕೆ ಹೋಗಿ ಬರುವ ಅಭ್ಯಾಸ ಮಾಡಿದ. ಪ್ರತೀಸಾರಿ ಬಂದಾಗಲೂ ಕೆಲವು ರಾಜಧರ್ಮಗಳನ್ನು ಮಹರ್ಷಿಗಳು ಜ್ಞಾಪಿಸಿದರು. ಮತ್ತೆ ಅದನ್ನೇ ಚರ್ವಣೆ ಮಾಡುತ್ತಾ ಕುಮಾರನು ಕ್ರಮಕ್ರಮವಾಗಿ ಅರಿವನ್ನು ಪಡೆಯಲಾರಂಭಿಸಿದ. ಹೊರ ವೇಷಭೂಷಣಗಳಲ್ಲಿ ಒಂದೇ ರೀತಿಯಾಗಿ ಕಂಡುಬಂದರೂ ತನಗೂ ಉಳಿದ ವ್ಯಾಧಕುಮಾರರಿಗೂ ಏನೋ ಕೆಲವು ವ್ಯತ್ಯಾಸಗಳಿವೆ ಎಂಬುದು ಮೊದಲಿಗೆ ಮನದಟ್ಟಾಯಿತು.

ಮೊದಲು ತನ್ನ ದೇಹಲಕ್ಷಣದಲ್ಲಿ ಒಂದು ವೈಶಿಷ್ಟ್ಯವನ್ನು ಕಂಡುಕೊಂಡ. ತನ್ನ ಇಂದ್ರಿಯಗಳಲ್ಲೂ ಅನ್ಯವಿಲಕ್ಷಣವಾದ ಒಂದು ಪಾಟವವಿದೆಯೆಂದು ಮನವರಿಕೆಯಾಯಿತು. ಮನೋಧರ್ಮದಲ್ಲಿ ಬೇರಾರಲ್ಲೂ ಇಲ್ಲದ ಉತ್ಸಾಹ, ಧೈರ್ಯ, ಸಾಹಸ, ಪ್ರವೃತ್ತಿಗಳು ಸೂಕ್ಷ್ಮವಾಗಿ ಬೇರೂರಿರುವುದನ್ನು ಮನಗೊಂಡು. ಕ್ರಮಕ್ರಮವಾಗಿ ನಾಯಕನ ಲಕ್ಷಣಗಳು ಗೋಚರಿಸಿದವು. ಮಾತ್ರವಲ್ಲ, ದಿನೇ ದಿನೇ ಅವು ವೃದ್ಧಿ ಹೊಂದಲು ಆರಂಭಿಸಿದವು. ಮಹರ್ಷಿಗಳ ಒಂದೊಂದು ಮಾತು ಹೃದಯಾಳದಲ್ಲಿ ಬೇರೂರಿ ವ್ಯಕ್ತಿತ್ವದಲ್ಲಿ ಹೊಸರೂಪವನ್ನೇ ತಂದವು. ಅವನು ತನ್ನ ಸಮವಯಸ್ಕರಲ್ಲಿ ಮೊದಲು ವಿಶ್ವಾಸವನ್ನು ಸಂಪಾದಿಸಿದ. ಅವರಿಗೆಲ್ಲ ಮುಂದಾಳಾದ. ಸುತ್ತಮುತ್ತಲು ಗ್ರಾಮಗಳಲ್ಲಿ ಸಂಚರಿಸಿ ಗ್ರಾಮಸ್ಥರೆಲ್ಲರ ವಿಶ್ವಾಸಗಳಿಸಿದ. ಹೀಗೆ ಕಾರ್ಯಪ್ರವೃತ್ತನಾಗುತ್ತಾ ತನ್ನತನಕ್ಕೆ ಹೊಂದುವಂತೆ ಬೆಳೆದು ಒಂದು ಭಾರೀ ಸೈನ್ಯವನ್ನೇ ರಚಿಸಿದ. ಅನಂತರ ಸಕಾಲದಲ್ಲಿ ತನ್ನ ಮೂಲನೆಲೆಯಲ್ಲಿ ಆಕ್ರಮಣ ಮಾಡಿದ್ದ ದಸ್ಯುಗಳನ್ನು ಸದೆಬಡಿದು ಸಿಂಹಾಸನವನ್ನು ಏರಿ ರಾಜ್ಯಭಾರವನ್ನು ನಡೆಸಿದ ಎಂದು ಕಥೆ.

ಈ ಕಥೆಯು ಒಬ್ಬ ರಾಜನಿಗೆ ಮಾತ್ರ ಮೀಸಲಲ್ಲ. ಪ್ರತಿಜೀವಿಯೂ ಒಬ್ಬ ರಾಜಕುಮಾರನೇ. ತನ್ನ ಮೂಲನೆಲೆಯಾದ ಭಗವಂತನಲ್ಲಿ ತಾನು ನೆಮ್ಮದಿಯಾಗಿದ್ದ. ಅನಂತರ ಸೃಷ್ಟಿಯೊಳಗೆ ತಾನು ಪ್ರವೇಶಿಸಿ ಅಲ್ಲಿ ಒಂದು ರಾಜ್ಯಭಾರವನ್ನು ನಡೆಸಬಯಸಿದ. ಆ ನಡುವೆ ಕಾಮಕ್ರೋಧಗಳೇ ಮೊದಲಾದ ಭಯಂಕರರಾದ ಶತ್ರುಗಳ ಹಾವಳಿಗೆ ಒಳಗಾದ. ತಾನು ಯಾರು? ಎಲ್ಲಿಂದ ಬಂದೆ? ಎಂಬುದನ್ನೇ ಮರೆತು ತನ್ನತನದಿಂದ ದೂರಸಾಗಿದ. ರಾಜಕುಮಾರನು ವಿಸ್ಮೃತಿಯ ಕಾರಣದಿಂದ ವ್ಯಾಧಕುಮಾರನಾಗಿ ಬದುಕಿದಂತೆ ಜ್ಞಾನಾನಂದಗಳ ಅಧಿಪತಿಗಳಾಗಿ ಬದುಕಬೇಕಾದ ಜೀವವು ಇಂದ್ರಿಯವಿಷಯಗಳಲ್ಲೇ ರಮಿಸುತ್ತಾ ಅದೇ ತನ್ನ ಸ್ವರೂಪವೆಂದು ಭಾವಿಸುವ ದುಸ್ಥಿತಿಯಾಗಿದೆ. ಈ ಸ್ಥಿತಿಯಿಂದ ಹಿಂದಕ್ಕೆ ಸಾಗಬೇಕಾದರೆ ಮಹರ್ಷಿಗಳ ಸ್ಥಾನದಲ್ಲಿರುವ ಒಬ್ಬ ಗುರುವಿನ ಮಾರ್ಗದರ್ಶನವಿರಬೇಕು. ರಾಜಕುಮಾರನು ಮಹರ್ಷಿಗಳ ಹಿತೋಕ್ತಿಗಳಿಂದ ಪ್ರಚೋದಿತನಾಗಿ ಕ್ರಮವಾಗಿ ಒಂದು ಸ್ಥಿತಿಯನ್ನು ಸಂಪಾದಿಸಿದನಷ್ಟೆ! ಉತ್ಸಾಹ, ಧೈರ್ಯ, ಸಾಹಸಗಳು ಮನೆ ಮಾಡಿಕೊಳ್ಳಲು ಯೋಗ್ಯವಾದ ಆ ಸ್ಥಿತಿಯೇ ಧರ್ಮ. ಆ ಸ್ಥಿತಿಯನ್ನು ಸಂಪಾದಿಸಲು ಅವಶ್ಯವಾದ ನಡವಳಿಕೆಗಳು ಆಚಾರ ಸ್ಥಾನದಲ್ಲಿವೆ. ಆ ಸ್ಥಿತಿಯ ಸಂಪಾದನೆಗೂ ಸಂವರ್ಧನೆಗೂ, ಸಂರಕ್ಷಣೆಗೂ ದ್ರವ್ಯವು ಅಪೇಕ್ಷಿತವಾಗಿದೆ. ರಾಜಕುಮಾರನಾಗಿ ಬೆಳೆಯಲು ಅವನಿಗೆ ತಕ್ಕ ಆಹಾರ, ತಕ್ಕ ವಿಹಾರ, ತಕ್ಕ ದೇಶವಾಸ, ಹೀಗೆ ದ್ರವ್ಯಸಂಪತ್ತು ಯಾವುದು ಅವನತನವನ್ನು ಉಳಿಸಿ ಬೆಳೆಸಬಲ್ಲದೋ ಅವುಗಳನ್ನು 'ಅರ್ಥ' ಎಂದು ಕರೆಯುತ್ತಾರೆ. ಅವನು ರಾಜಕುಮಾರೋಚಿತವಾದ ಅಪೇಕ್ಷೆಗಳನ್ನು ಬಯಸಿದರೆ ಅದು ಸಹಜವಷ್ಟೆ ! ರಾಜಕುಮಾರನು ಸಿಂಹಾಸನವನ್ನು ಬಯಸಬಹುದು. ನಾಯಕತ್ವವನ್ನು ಅಪೇಕ್ಷಿಸಬಹುದು. ಧರ್ಮನಿರ್ಣಯಕ್ಕೆ ಧರ್ಮಜ್ಞರಸಹಾಯವನ್ನು ಅಪೇಕ್ಷಿಸಬಹುದು. ತನ್ನ ಧೈರ್ಯ ಸಾಹಸ ಉತ್ಸಾಹಗಳು ನಿತ್ಯ ಜಾಗರೂಕವಾಗಲು ತಕ್ಕ ವಿಹಾರವನ್ನು ಬಯಸಬಹುದು. ತನ್ನಂತಹ ಒಂದು ವ್ಯಕ್ತಿತ್ವ ರೂಪಗೊಂಡು ತನ್ನ ಕಾರ್ಯವನ್ನು ಮುಂದುವರಿಸುವಂತಾಗಲು ಒಬ್ಬ ಸತ್ಪ್ರಜೆಯನ್ನು ಪುತ್ರನನ್ನಾಗಿ ಪಡೆಯಲು ಬಯಸಬಹುದು. ತನ್ನತನವನ್ನು ವಿಕಾಸಗೊಳಿಸಿ ತನ್ನಂತೆ ಇರುವ ಒಬ್ಬ ಸುಪುತ್ರನನ್ನು ಬೆಳೆಸಿಕೊಡುವ ಒಬ್ಬ ರಾಜಕನ್ನಿಕೆಯನ್ನು ಬಯಸಬಹುದು. ಇವುಗಳೆಲ್ಲ 'ಕಾಮ'ವೆನ್ನಿಸಿಕೊಳ್ಳುತ್ತವೆ. ಈ ಧರ್ಮ, ಅರ್ಥ, ಕಾಮಗಳೆಲ್ಲವೂ ವ್ಯಾಧ ಪುತ್ರನ ಸ್ಥಿತಿಯಲ್ಲಿದ್ದವನನ್ನು ರಾಜಕುಮಾರನ್ನಾಗಿ ರೂಪಿಸಿದವಷ್ಟೆ. ತನ್ನತನವನ್ನು ಕಳೆದುಕೊಂಡು ವ್ಯಾಧನಾಗಿದ್ದುದೇ ಒಂದು ಬಂಧನ. ಅಲ್ಲಿ ಅವನತನದ ಪೂರ್ಣ ಅಭಿವ್ಯಕ್ತಿಗೆ ಎಡೆ ಇರಲಿಲ್ಲ. ಆದ್ದರಿಂದ ಅದು ಬಂಧನ. ಆ ಬಂಧನದಿಂದ ಬಿಡುಗಡೆಯು ಧರ್ಮ–ಅರ್ಥ–ಕಾಮಗಳಿಂದ ಸಂಪನ್ನಗೊಳ್ಳುವುದು. ಆ ಬಿಡುಗಡೆಯೇ

ಮೋಕ್ಷ. ಪ್ರತಿಜೀವಿಯೂ ಧರ್ಮ–ಅರ್ಥ–ಕಾಮಗಳ ಚೌಕಟ್ಟಿನಲ್ಲಿ ಜೀವನವನ್ನು ಸಾಗಿಸಿದರೆ ಮೋಕ್ಷ ರೂಪವಾದ ಪರಮಫಲವನ್ನು ಪಡೆಯಬಹುದಾಗಿದೆ. ಪ್ರತಿಜೀವಿಯೂ ತಿಳಿದೋ ತಿಳಿಯದೆಯೋ ಅದನ್ನೇ ಅಪೇಕ್ಷಿಸುವುದರಿಂದ ಪುರುಷಾರ್ಥ ಎಂಬ ವ್ಯವಹಾರ ಬಂದಿದೆ. **'ಪುರುಷೈಃ ಅರ್ಥ್ಯತೇ ಇತಿ ಪುರುಷಾರ್ಥಃ'** ಪುರುಷ ರೂಪರಾದ ಜೀವಿಗಳಿಂದ ಪ್ರಾರ್ಥಿಸಲ್ಪಡುವುದರಿಂದ ಪುರುಷಾರ್ಥ.

ಇಂತಹ ಪುರುಷಾರ್ಥದ ಚೌಕಟ್ಟಿನಲ್ಲಿ ಮಾನವನ ಬಾಳು ಸಾಗುವುದಾದರೆ ಭೋಗ–ಯೋಗಗಳ ಸಂಸಿದ್ಧಿಯು ಪರಸ್ಪರ ವಿರೋಧವಿಲ್ಲದೆ ಲಭಿಸುವುದೆಂಬುದು ಸನಾತನಾರ್ಯ ಭಾರತ ಮಹರ್ಷಿಗಳ ದರ್ಶನವಾಗಿದೆ. ಅರ್ಥ–ಕಾಮಗಳು, ಧರ್ಮ–ಮೋಕ್ಷಗಳ ಸಿದ್ಧಿಗೆ ವಿರೋಧವಾಗದಂತೆ ಸಂಪನ್ನಗೊಳ್ಳುವುದಾದರೆ ಅಲ್ಲಿ ಐಹಿಕ ಸುಖ ಹಾಗೂ ಆಮುಷ್ಮಿಕ ಸುಖಗಳೆರಡೂ ಸಂಪನ್ನವಾಗುವುದು. ಅದನ್ನೇ ಅಭ್ಯುದಯ–ನಿಃಶ್ರೇಯಸ್ಸುಗಳೆಂದು ಕರೆದಿದ್ದಾರೆ. ಅದರಲ್ಲಿ ಇಂದ್ರಿಯಗಳ ಪ್ರೀತಿಯ ವಿಷಯವೂ ಉಂಟು. ಆತ್ಮರತಿಯ ವಿಷಯವೂ ಉಂಟು. ಇಂತಹ ಆದರ್ಶವಾದ ಬಾಳ್ವೆಯಲ್ಲಿ ಭವಬಂಧನವಿಲ್ಲ. ಇಂತಹ ಆದರ್ಶ ಬಾಳ್ವೆಯನ್ನು ಜೀವನದ ಲಕ್ಷ್ಯವಾಗಿಟ್ಟುಕೊಂಡು ಹೆಜ್ಜೆ ಹಾಕುವುದಾದರೆ ಆಗ ವಧೂವರರ ಹೊಂದಾಣಿಕೆ ಎಂಬಲ್ಲೂ ಈ ನಡೆಯೇ ಇರಬೇಕಾಗುವುದು. ಆದ್ದರಿಂದ ಹೊಂದಾಣಿಕೆಯೆಂದಾಗ ಇಷ್ಟು ವಿಷಯಗಳ ಬಗೆಗೆ ಒಂದು ನೋಟವಿರಬೇಕು. ಇದು ಮಹರ್ಷಿಗಳು ಆದೇಶಿಸುವ ಒಂದು ದೂರದೃಷ್ಟಿ. ನಮ್ಮ ನಮ್ಮ ಮನಸ್ಸಿಗೆ ಬಂದಂತೆ ಜೀವನದ ಗುರಿಯನ್ನು ರೂಪಿಸಿಕೊಂಡರೆ ಅದು ಹ್ರಸ್ವದೃಷ್ಟಿಯ ಮೇಲೆ ನಿಂತ ವ್ಯವಸ್ಥೆಯಾದ್ದರಿಂದ ಅದರಲ್ಲಿ ಪೂರ್ಣಸೌಖ್ಯಕ್ಕೆ ಎಡೆಯಿರುವುದಿಲ್ಲ. ಹೀಗಿರುವುದರಿಂದಲೇ ಆರ್ಷವಾದ ವಿವಾಹ ಸಂಸ್ಕಾರದ ಸಂದರ್ಭದಲ್ಲಿ 'ಧರ್ಮ–ಅರ್ಥ–ಕಾಮಗಳಲ್ಲಿ ನೀನು ಈಕೆಯ ಕೈ ಬಿಟ್ಟು ಹೋಗಬಾರದು' ಎಂದು ವರನಿಗೆ ಒಂದು ಆದೇಶ ನೀಡುವ ಸಂಪ್ರದಾಯವಿದೆ. 'ನಾನು ಧರ್ಮ, ಅರ್ಥ, ಕಾಮಗಳ ವಿಷಯದಲ್ಲಿ ಆಕೆಯನ್ನು ಬಿಟ್ಟು ಹೋಗುವುದಿಲ್ಲ' ಎಂಬ ವರನ ಪ್ರತಿಜ್ಞಾ ಸ್ವೀಕಾರವು ಬ್ರಹ್ಮಸದಸ್ಸಿನಲ್ಲಿ ಸಂಪನ್ನಗೊಳ್ಳುವುದು. ಧರ್ಮೇ ಚಾರ್ಥೇ ಚ ಕಾಮೇ ಚ ನಾತಿಚರಿತವ್ಯಾ ತ್ವಯೇಯಮ್। ನಾತಿಚರಾಮಿ ನಾತಿಚರಾಮಿ ನಾತಿಚರಾಮಿ। ಎಂದು. ಅದೂ ಸಹ ಮೂರು ಬಾರಿ ಪ್ರತಿಜ್ಞೆ! ಭೌತಿಕ–ದೈಹಿಕ–ಆಧ್ಯಾತ್ಮಿಕವೆಂಬ ಮೂರು ಸ್ತರದಲ್ಲೂ ಇದೇ ನಡೆ ಇರಬೇಕು ಎಂದರ್ಥ. ಹೀಗೆ ಒಬ್ಬರನ್ನೊಬ್ಬರು ಹೊಂದಿಕೊಂಡು ಧರ್ಮಾರ್ಥಕಾಮಗಳನ್ನು ಸಾಧಿಸಿ ಅದರ ಫಲವಾಗಿ ಮೋಕ್ಷವನ್ನು ಸಹಜವಾಗಿಯೇ ಪಡೆಯುವ ಪೂರ್ಣವ್ಯವಸ್ಥೆಯು ಇಲ್ಲಿದೆ. ಈ ದೃಷ್ಟಿಯಿಂದ ವಧೂವರರ ಜಾತಕದಲ್ಲಿ ಹೊಂದಾಣಿಕೆಯ ಚಿಂತನೆ ಮಾಡುವುದಾದರೆ ಅದು ಶಾಸ್ತ್ರವನ್ನು ತಂದವರ ಆಶಯಕ್ಕೆ ಹೊಂದಿಕೊಳ್ಳಬಹುದು.

ಜಾಹಿರಾತು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ______________________

ವಿಳಾಸ ______________________

______________________

ಸದಸ್ಯತ್ವದ ಸಂಖ್ಯೆ : ____________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

# AKHILA KARNATAKA BRAHMANA MAHASABHA (R.)

ಅಯೋಧ್ಯಯ ಶ್ರೀ ರಾಮಚಂದ್ರ ಸ್ವಾಮಿಯ ಪುನಃ ಪ್ರತಿಷ್ಠಾಪನಾ ಅಂಗವಾಗಿ

ಶತಕೋಟಿ

ರಾಮತಾರಕ ನಾಮಜಪ

## ಮಹಾಯಜ್ಞ

ಶ್ರೀರಾಮ ತಾರಕ

## ಮಹಾಯಾಗ



ದಿನಾಂಕ: **24** ಅಕ್ಟೋಬರ್ **2023**

ವಿಜಯದಶಮಿಯಿಂದ ಪ್ರಾರಂಭ



ಆತ್ಮೀಯರೇ,

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ **'ಶತಕೋಟಿ ರಾಮತಾರಕ ನಾಮಜಪ ಮಹಾಯಜ್ಞ'**ವನ್ನು ದಿನಾಂಕ 24.10.2023 (ಮಂಗಳವಾರ) ವಿಜಯದಶಮಿಯಂದು ಪ್ರಾರಂಭಿಸಿ, ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮಚಂದ್ರನ ಪ್ರತಿಷ್ಠಾಪನಾ ದಿನದಂದು ಕರ್ನಾಟಕ ರಾಜ್ಯದ ಜಿಲ್ಲಾ ಮತ್ತು ತಾಲೂಕಿನಲ್ಲಿ **'ಶ್ರೀ ರಾಮತಾರಕ ಮಹಾಯಾಗ'**ವನ್ನು ನಡೆಸಿ ಸಂಪನ್ನಗೊಳಿಸಲಾಗುವುದು. ಲೋಕಕಲ್ಯಾಣಾರ್ಥವಾಗಿ ನಡೆಯುವ ಈ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಿಂದೂ ಸನಾತನ ಧರ್ಮದ ಆಸ್ತಿಕ ರಾಮ ಭಕ್ತರು ಪ್ರತಿನಿತ್ಯವೂ **'ಶ್ರೀರಾಮ ಜಯರಾಮ ಜಯಜಯ ರಾಮ'** ಎಂಬ ಮಹಾಮಂತ್ರವನ್ನು ತಮ್ಮ ಮನೆಯಲ್ಲಿ ಜಪಿಸಿ, ಶತಕೋಟಿ ರಾಮತಾರಕ ನಾಮಜಪ ಮಹಾಯಜ್ಞ ಮತ್ತು ಶ್ರೀ ರಾಮತಾರಕ ಮಹಾಯಾಗಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ದೇಶ ಸುಭಿಕ್ಷವಾಗಿರಲೆಂದು ಪ್ರಾರ್ಥಿಸಿ, ಪ್ರಭು ಶ್ರೀರಾಮಚಂದ್ರನ ಕೃಪೆಗೆ ಪಾತ್ರರಾಗಬೇಕಾಗಿ ಕೇಳಿಕೊಳ್ಳುತ್ತೇವೆ.

### ಶತಕೋಟಿ ರಾಮತಾರಕ ನಾಮಜಪ ಮಹಾಯಜ್ಞದಲ್ಲಿ ಭಾಗವಹಿಸುವವರಿಗೆ ಸೂಚನೆಗಳು



**ಜಪಮಂತ್ರ: ಶ್ರೀರಾಮ ಜಯರಾಮ ಜಯಜಯ ರಾಮ**

- ಈ ಜಪಯಜ್ಞವು ಲೋಕಕಲ್ಯಾಣದ ಸಂಕಲ್ಪದಲ್ಲಿ ನಡೆಯಲಿದೆ.
- ರಾಜ್ಯದಾದ್ಯಂತ ದಿನಾಂಕ 24.10.2023ರ ವಿಜಯದಶಮಿಯಂದು ಪ್ರಾರಂಭಿಸಲಾಗುವುದು.
- ಜಪ ಆರಂಭದ ದಿನ ಅನುಕೂಲ ಇರುವವರೆಲ್ಲ ಹತ್ತಿರದ ಶ್ರೀ ರಾಮದೇವಾಲಯ/ ಆಂಜನೇಯ ದೇವಾಲಯ/ದೇವಾಲಯಗಳಲ್ಲಿ, ಹಿಂದೂ ಶ್ರದ್ಧಾ ಕೇಂದ್ರಗಳಲ್ಲಿ ಪ್ರಾರ್ಥಿಸಿ, ಜಪವನ್ನು ಆರಂಭಿಸುವುದು.
- ದೇವಾಲಯಕ್ಕೆ ಆಗಮಿಸಲು ಸಾಧ್ಯವಿಲ್ಲದವರು ಸಂಘಟಕರ ಮೂಲಕ ಹೆಸರು ನೋಂದಾಯಿಸಿ ತಮ್ಮ ಮನೆಯಲ್ಲಿಯೇ ಜಪವನ್ನು ಆರಂಭಿಸಬಹುದು.
- ಪ್ರತಿದಿನದ ಜಪವನ್ನು ತಮ್ಮ ತಮ್ಮ ಮನೆಗಳಲ್ಲಿಯೇ ಮಾಡಬಹುದು. ಒಂದು ಮನೆಯಿಂದ ಎಷ್ಟು ಜನ ಬೇಕಾದರೂ ಜಪ ಮಾಡಬಹುದು.
- ಸ್ತ್ರೀ, ಪುರುಷರೆಂಬ ಭೇದವಿಲ್ಲದೆ ಯಾವುದೇ ಜಾತಿ–ಮತ–ಲಿಂಗ–ವಯಸ್ಸಿನವರು ಜಪ ಮಾಡಬಹುದು.
- ಜಪದಲ್ಲಿ ಭಾವಹಿಸುವವರು ಪ್ರತಿನಿತ್ಯ ಕನಿಷ್ಠ 108 ಜಪ ಮಾಡುವುದು ಉತ್ತಮ.
- ದಿನದ ಯಾವುದೇ ಸಮಯದಲ್ಲಿ ಜಪ ಮಾಡಬಹುದು.
- ಪ್ರತಿನಿತ್ಯ ಜಪ ಮಾಡಿದ ಸಂಖ್ಯೆಯನ್ನು ಬರೆದಿಟ್ಟುಕೊಂಡು ಕೊನೆಯಲ್ಲಿ ಒಟ್ಟಿಗೆ ಸಂಘಟಕರಿಗೆ ನೀಡುವುದು.
- ಅಯೋಧ್ಯೆಯಲ್ಲಿ ಶ್ರೀರಾಮದೇವರ ಪುನಃ ಪ್ರತಿಷ್ಠೆಯ ದಿನದಂದು ಜಿಲ್ಲಾ, ತಾಲೂಕಿನಲ್ಲಿ ನಡೆಯುವ, ರಾಮತಾರಕ ಹವನದಲ್ಲಿ ಭಾಗವಹಿಸಿ, ಜಪ ಸಮರ್ಪಣೆಗೊಳಿಸುವುದು.

ಶ್ರೀರಾಮ ತಾರಕ ಮಹಾಯಾಗ ಹಾಗೂ
ಶತಕೋಟಿ ಶ್ರೀರಾಮತಾರಕ ಜಪ ಮಹಾಯಜ್ಞದ ಪ್ರಧಾನ ಸಂಚಾಲಕರು



ಶ್ರೀ ಅಶೋಕ್ ಹಾರನಹಳ್ಳಿ
ಅಧ್ಯಕ್ಷರು



ಡಾ. ಬಿ.ಎಸ್. ರಾಘವೇಂದ್ರ ಭಟ್
ಉಪಾಧ್ಯಕ್ಷರು
9741025098



ಡಾ. ಭಾನುಪ್ರಕಾಶ್ ಶರ್ಮ
ಉಪಾಧ್ಯಕ್ಷರು
9980000696





ಹರಿಪ್ರಸಾದ್ ಪೆರಿಯಾಪು
ಕಾರ್ಯ ಕಾರಿ ಸಮಿತಿ ಸದಸ್ಯರು
8762524599

ಶ್ರೀಧರಮೂರ್ತಿ ಪ್ರಧಾನಕಾರ್ಯದರ್ಶಿ, ವೆಂಕಟೇಶನಾಯಕ್ ಖಜಾಂಚಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು**

PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 31-10-2023 Date of Publishing 30-10-2023

"ಅಭಿಜಾತೆ–2024"



# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಬನಶಂಕರಿ 2ನೇ# ಹಂತ, ಬೆಂಗಳೂರು–560070.

ಯತ್ರ ನಾರ್ಯಸ್ತು ಪೂಜ್ಯನ್ತೇ
ರಮನ್ತೇ ತತ್ರ ದೇವತಾ

# "ಅಭಿಜಾತೆ–2024"

## ವಿಪ್ರ ಮಹಿಳಾ ರಾಜ್ಯಮಟ್ಟದ ತೃತೀಯ ಸಮ್ಮೇಳನ

ಮಾನ್ಯರೇ,

ಸನಾತನ ಧರ್ಮದಲ್ಲಿ **'ಮಾತೃ ದೇವೋಭವ '** ಎಂಬ ಉಕ್ತಿ ಇದೆ. ಭಗವಂತನನ್ನೇ ಪುತ್ರನನ್ನಾಗಿ ಪಡೆಯುವ ಶಕ್ತಿ ಈ ಜಗಜ್ಜನನಿಯಲ್ಲಿದೆ. ಆಕೆ ಅಬಲೆಯಲ್ಲ, ಲಕ್ಷ್ಮೀಬಾಯಿಯಂತೆ ವೀರಾಂಗಣೆಯೂ, ಮೀರಾಳಂತೆ ಭಕ್ತಿಯ ಸಂಕೇತವೂ ಆಗಬಲ್ಲಳು. ಮಾತೃಶಕ್ತಿಯ ಮಹತ್ವವನ್ನು ಅರಿತ ಸಮಾಜ ಎಂದೂ ನಾಶವಾಗದು

ಒಟಿದು ಕುಟುಂಬದ ಮುಖ್ಯ ಸ್ತಂಭ ತಾಯಿ. ಆದ್ದರಿಂದಲೇ **'ಮಾತೃದೇವೋ ಭವ'** ಎಂದು ಮೊದಲು ಹೇಳಿದರು. ನಂತರ **'ಪಿತೃದೇವೋ ಭವ'** ಎಂದರು. ತಾಯಿಗಿಂತ ಮಿಗಿಲಾದ ದೇವರಿಲ್ಲ ಎಂದರು. ತಾಯಿಯ ಸುತ್ತಮುತ್ತಲೂ ಸಂಸಾರದ ನಿರ್ಮಾಣ ವಾಗುತ್ತದೆ, ಪ್ರತಿಯೊಂದು ಹೆಣ್ಣೂ ಎಚ್ಚೆತ್ತುಕೊಂಡು, **'ನಮ್ಮ ಒಳಗೆ ದೈವಿಕ ಶಕ್ತಿಯಿದೆ'** ಎನ್ನುವುದನ್ನು ಕಂಡುಕೊಳ್ಳಬೇಕು. ಪರಿವಾರದಲ್ಲಿ, ಮಕ್ಕಳಲ್ಲಿ, ದೊಡ್ಡವರಲ್ಲಿ ಎಲ್ಲಾ ಸಂಸ್ಕಾರವನ್ನು ಕೊಡಬೇಕು. ಧ್ಯಾನ, ಜ್ಞಾನ, ಪುರಾಣದ ಕಥೆಗಳನ್ನು, ನೀತಿ ಶಾಸ್ತ್ರಗಳನ್ನು ಸ್ವತಃ ಅಧ್ಯಯನ ಮಾಡಬೇಕು. ಸ್ವಾತಂತ್ರಪೂರ್ವ ಮತ್ತು ಸ್ವಾತಂತ್ರ ನಂತರ ವಿಪ್ರ ಮಹಿಳೆಯರು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಸರ್ವವಿಧಿತ. ಅದರಲ್ಲೂ ಸನಾತನ ಧರ್ಮ ಮತ್ತು ಸಂಸ್ಕೃತಿಯ ಪರಂಪರೆಯ ಪೋಷಣೆ ಮತ್ತು ಸಂರಕ್ಷಣೆಯಲ್ಲಿ ಮಾತೆಯರ ಕಾರ್ಯ ನಿಜವಾಗಿಯೂ ಶ್ಲಾಘನೀಯ.

ಪ್ರಸ್ತುತ ಕಾಲಘಟ್ಟದಲ್ಲಿ ಬದಲಾದ ಸನ್ನಿವೇಶದಲ್ಲಿ ವಿಪ್ರ ಮಹಿಳೆಯರು ಅನೇಕ ಸವಾಲುಗಳನ್ನು ಎದುರಿಸುವ ಸನ್ನಿವೇಶಗಳು ನಿರ್ಮಾಣವಾಗುತ್ತಿದೆ. ಆದಕಾರಣ ವಿಪ್ರ ಮಹಿಳೆಯರಿಗೆ ಸೂಕ್ತವಾದಂತಹ ಸಾಮಾಜಿಕ ವೇದಿಕೆಯನ್ನು ನಿರ್ಮಿಸಿ ವಿಪ್ರ ಮಹಿಳೆಯರಲ್ಲಿ ಅಡಗಿರುವ ಸಂಘಟನಾ ಶಕ್ತಿ ಹಾಗೂ ಸಾಮಾಜಿಕ ಬದ್ಧತೆಗೆ ಸ್ಫೂರ್ತಿ ನೀಡುವ ಉದ್ದೇಶದಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು "ಅಭಿಜಾತೆ-2024" ರಾಜ್ಯಮಟ್ಟದ ವಿಪ್ರ ಮಹಿಳಾ ತೃತೀಯ ಸಮ್ಮೇಳನವನ್ನು ದಿನಾಂಕ 06-01-2024 ಹಾಗೂ 07-01-2024 ರಂದು ಶ್ರೀ ಶ್ರೀ ಶ್ರೀ ಭಾರತೀತೀರ್ಥ ಭವನ, ಶಂಕರಪುರಂ, ಶ್ರೀ ಶೃಂಗೇರಿ ಶಂಕರಮಠದ ಆವರಣ ಬೆಂಗಳೂರು-19. ಇಲ್ಲಿ ಆಯೋಜಿಸಲಾಗಿದೆ.

ಈ ಬೃಹತ್ ಸಮ್ಮೇಳನದ ಯಶಸ್ಸಿಗಾಗಿ ತಮ್ಮಿಂದ ಈ ಕೆಳಕಂಡಂತೆ ಸಹಾಯಹಸ್ತದ ನಿರೀಕ್ಷಣೆಯಲ್ಲಿದ್ದೇವೆ. ಮಹಾಪೋಷಕರಾಗಿ, ಪೋಷಕರಾಗಿ, ಸ್ವಾಗತ ಸಮಿತಿಯ ಸದಸ್ಯರಾಗಿ, ಕಾರ್ಯಕ್ರಮಗಳ ಪ್ರಾಯೋಜಕರಾಗಿ, ಸ್ಮರಣ ಸಂಚಿಕೆಯಲ್ಲಿ ಜಾಹೀರಾತು ನೀಡುವುದರ ಮೂಲಕ ಉದಾರವಾಗಿ ಸಹಾಯ ಸಹಕಾರವನ್ನು ತನು-ಮನ-ಧನದ ಮೂಲಕ ನೀಡಬೇಕೆಂದು ಕೋರುತ್ತೇವೆ.

ಈ ಸನ್ನಿವೇಶದಲ್ಲಿ ವಿಪ್ರ ಮಹಿಳೆಯರಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿಗಳನ್ನು ಏರ್ಪಡಿಸಿ ಸೂಕ್ತ ಪರಿಹಾರ ಮತ್ತು ಅವಕಾಶ ಗಳನ್ನು ಕಲ್ಪಿಸಲು ಈ ಸಮ್ಮೇಳನ ಒಂದು ವೇದಿಕೆಯಾಗಿ ವಿಪ್ರ ವನಿತೆಯರ ಮುಖವಾಣಿಯಾಗಿ ರೂಪುಗೊಳ್ಳಬೇಕಾಗಿದೆ. ವಿಪ್ರ ಮಹಿಳೆಯರು ಸಮಾಜದ ನಾನಾ ಕ್ಷೇತ್ರಗಳ ಮಂಚೂಣಿಯಲ್ಲಿ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿದೆ. ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ವಿಪ್ರ ಮಹಿಳೆಯರಿಗೆ ನೇತೃತ್ವ ವಹಿಸುವುದು ಈ ಹೊತ್ತಿನ ಅನಿವಾರ್ಯ. ವಿಪ್ರ ಮಹಿಳೆಯರೆಲ್ಲರೂ ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದಿಂದ ಸಂಘಟಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಈ ಬೃಹತ್ ಮಹಿಳಾ ಸಮ್ಮೇಳನಕ್ಕೆ ಆಗಮಿಸಿ, ಸಮ್ಮೇಳನವನ್ನು ಯಶಸ್ವಿಗೊಳಿಸಬೇಕಾಗಿ ಪ್ರಾರ್ಥನೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :**
ಶ್ರೀಮತಿ ಶುಭಮಂಗಳ – ಮೊ. : 9900039039
ಶ್ರೀಮತಿ ಶ್ವೇತಾಶಾಸ್ತ್ರಿ – ಮೊ. : 7829272585
ಶ್ರೀಮತಿ ನಾಗರತ್ನ – ಮೊ. : 9880672068

**ತಮಗೆಲ್ಲರಿಗೂ ಆದರದ ಸ್ವಾಗತ**

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

| ಶುಭಮಂಗಳ | ವೆಂಕಟೇಶ್ ಎಸ್. ನಾಯಕ್ | ಎಸ್. ಶ್ರೀಧರಮೂರ್ತಿ | ಅಶೋಕ ಹಾರನಹಳ್ಳಿ |
|---|---|---|---|
| ಸಂಚಾಲಕರು–ರಾಜ್ಯ ಮಹಿಳಾ ವಿಭಾಗ | ಖಜಾಂಚಿ | ಪ್ರಧಾನ ಕಾರ್ಯದರ್ಶಿ | ಅಧ್ಯಕ್ಷರು |

If undelivered please return to :
VIPRANUDI
Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar